ಮಂಗಳವಾರ, ಮೇ 4, 2021 | ಬೆಂಗಳೂರು | ₹ 6.00 | ಸಂಪುಟ 74 | ಸಂಚಿಕೆ 124 | ಪುಟ 10
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಕ್ಷೇಮ ಕುಶಲ
ರೋಗ ಹರಡುವುದನ್ನು ತಡೆಗಟ್ಟುವುದು, ರೋಗ ತಗಲಿಸಿಕೊಳ್ಳದಂತೆ ಎಚ್ಚರ ವಹಿಸುವ ಪ್ರತಿಯೊಂದು ವಿಷಯವೂ ವ್ಯಕ್ತಿಯ ಮಾನಸಿಕ ಸಮತೋಲನದ ಮೇಲೆ ಒತ್ತಡ ಹೇರುತ್ತಿದೆ.



ಆಳ-ಅಗಲ
ಗಾಳಿಯೆಲ್ಲವೂ ಆಮ್ಲಜನಕವಲ್ಲ

ಹೆಚ್ಚುತ್ತಿರುವ ಪ್ರಕರಣ: ಸಾಲುತ್ತಿಲ್ಲ ಆಮ್ಲಜನಕ 5
ಉಸಿರಾಟ ನಿಲ್ಲಿಸಿದ ಆಮ್ಲಜನಕ 'ವಾರ್' ರೂಂ! 4

ಸೆನ್ಸೆಕ್ಸ್	ನಿಫ್ಟಿ	₹/$
48,718 ▼	14,634 ▲	73.95 ▲

ಬೇಡಿಕೆಗೆ ತಕ್ಕಂತೆ ಹಂಚಿಕೆ ಮಾಡಲು ನಿರಾಸಕ್ತಿ • ಪರಿಸ್ಥಿತಿ ಮತ್ತಷ್ಟು ಬಿಗಡಾಯಿಸುವ ಆತಂಕ

ನಾಡಿಗೆ ಆಮ್ಲಜನಕ ನೀಡದ ಕೇಂದ್ರ

• ರಾಜೇಶ್ ರೈ ಚಟ್ಲ

ಬೆಂಗಳೂರು: ಗಂಭೀರ ಪರಿಸ್ಥಿತಿಯಲ್ಲಿರುವ ಕೋವಿಡ್ ರೋಗಿಗಳ ಜೀವ ಉಳಿಸಲು ಬೇಕಾದ ಆಮ್ಲಜನಕದ ಕೊರತೆಯಿಂದಾಗಿ ರಾಜ್ಯದಲ್ಲಿ ಸಾವಿನ ಸಂಖ್ಯೆ ನಿತ್ಯ ಏರುತ್ತಿದೆ. ಕರ್ನಾಟಕದ ಬೇಡಿಕೆಗೆ ತಕ್ಕಂತೆ ಆಮ್ಲಜನಕ ಉತ್ಪಾದನೆಯಾಗುತ್ತಿದ್ದರೂ ಹಂಚಿಕೆ ವಿಷಯದಲ್ಲಿ ಕೇಂದ್ರ ಸರ್ಕಾರವೇ ನಿರ್ಧಾರ ತೆಗೆದುಕೊಳ್ಳುತ್ತಿರುವುದರಿಂದ ರೋಗಿಗಳು ಜೀವ ಉಳಿಸಿಕೊಳ್ಳಲು ಪರದಾಡುವ ಪರಿಸ್ಥಿತಿ ನಿರ್ಮಾಣವಾಗಿದೆ.

'ನಮ್ಮ ಬೇಡಿಕೆಗೆ ಅನುಗುಣವಾಗಿ ಆಮ್ಲಜನಕ ಪೂರೈಸದಿದ್ದರೆ ಆಸ್ಪತ್ರೆಗಳನ್ನು ಮುಚ್ಚಬೇಕಾಗುತ್ತದೆ' ಎಂದು ಪ್ರಧಾನಿ ನರೇಂದ್ರ ಮೋದಿ ಎದುರೇ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಗೋಗರೆದು ಬೇಡಿ ಕೊಂಡಿದ್ದರು. ಕೇಂದ್ರ ಸರ್ಕಾರದಿಂದ ವಾಗ್ದಾನ ಸಿಕ್ಕಿತೇ ವಿನಃ ಆಮ್ಲಜನಕ ಸಿಗಲಿಲ್ಲ. ಇದರಿಂದಾಗಿ ಪರಿಸ್ಥಿತಿ ದಿನೇ ದಿನೇ ಬಿಗಡಾಯಿಸುತ್ತಿದ್ದು, ಆತಂಕದ ದಿನಗಳತ್ತ ರಾಜ್ಯ ಸಾಗುತ್ತಿದೆ ಎಂಬ ಅಭಿಪ್ರಾಯ ಅಧಿಕಾರಿಗಳ ವಲಯದಲ್ಲಿ ದಟ್ಟವಾಗುತ್ತಿದೆ.

ಕರ್ನಾಟಕದಲ್ಲಿಯೇ ನಿತ್ಯ 1,043 ಟನ್ ಆಮ್ಲಜನಕ ಉತ್ಪಾದನೆ ಆಗುತ್ತಿದೆ. ರಾಜ್ಯದ ಬೇಡಿಕೆಯನ್ನು ಗಮನಾರ್ಹವಾಗಿ ಪರಿಗಣಿಸದ ಕೇಂದ್ರ ಸರ್ಕಾರ, ಇಲ್ಲಿ ಉತ್ಪಾದನೆಯಾದ ಆಮ್ಲಜನಕವನ್ನು ಮಹಾರಾಷ್ಟ್ರ, ತೆಲಂಗಾಣ, ಆಂಧ್ರ ಪ್ರದೇಶ ರಾಜ್ಯಗಳಿಗೆ ಪೂರೈಕೆ ಮಾಡುತ್ತಿದೆ. ಅಲ್ಲದೆ, ಕೇಂದ್ರದ ಈ ನೀತಿಯಿಂದಾಗಿ, ತನಗೆ ಈಗಾಗಲೇ ಹಂಚಿಕೆ ಮಾಡಿರುವ ಆಮ್ಲಜನಕವನ್ನು ಹೊರ-ರಾಜ್ಯಗಳಿಂದ (ಒಡಿಶಾ, ಆಂಧ್ರ ಪ್ರದೇಶ) ತರಿಸಿಕೊಳ್ಳಬೇಕಾದ ದೌರ್ಭಾಗ್ಯ ರಾಜ್ಯದ್ದಾಗಿದೆ ಎಂಬ ಅಸಹನೆಯೂ ಶುರುವಾಗಿದೆ.

ಆಮ್ಲಜನಕ ಕೊರತೆ ಎದುರಾಗಲಿದೆ ಎಂಬ ಆತಂಕವನ್ನು ವೈದ್ಯಕೀಯ ತಜ್ಞರು, ಆರೋಗ್ಯ ಕ್ಷೇತ್ರದ ಪರಿಣತರು ವ್ಯಕ್ತಪಡಿಸಿದರೂ ರಾಜ್ಯ ಸರ್ಕಾರ ಎಚ್ಚೆತ್ತುಕೊಳ್ಳಲಿಲ್ಲ. ಆಮ್ಲಜನಕ ಸಿಗದೆ ಕೋಲಾರ, ಕಲಬುರ್ಗಿಯಲ್ಲಿ ಕೋವಿಡ್ ರೋಗಿಗಳು ಸಾವಿನ ಕದ ತಟ್ಟಿದ್ದರೂ ರಾಜ್ಯ ಸರ್ಕಾರ ಮೈ ಕೊಡವಿ ನಿಲ್ಲಲಿಲ್ಲ. ಬೇಡಿಕೆ – ಪೂರೈಕೆಯಲ್ಲಿನ ವ್ಯತ್ಯಯದಿಂದಾಗಿ ಆಮ್ಲಜನಕ ಕೊರತೆ ಮತ್ತಷ್ಟು ತೀವ್ರಗೊಂಡಿದೆ.

ಪ್ರಜಾವಾಣಿ ವಿಶೇಷ

8ನೇ ಪುಟ ನೋಡಿ

ಆಮ್ಲಜನಕ ಕರಾಳಮುಖಿ

ಸುಧಾಕರ್ ಮೇಲೆ ಬಿಎಸ್‌ವೈ ಗರಂ



ಬೆಂಗಳೂರು: ಚಾಮರಾಜನಗರ ದುರಂತದ ಬಗ್ಗೆ ಮಾಹಿತಿ ಇಲ್ಲದೇ ತಮ್ಮ ಬಳಿಗೆ ಬಂದ ಆರೋಗ್ಯ ಸಚಿವ ಡಾ.ಸುಧಾಕರ್ ವಿರುದ್ಧ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಗರಂ ಆದ ಘಟನೆ ಸೋಮವಾರ ಬೆಳಿಗ್ಗೆ ನಡೆಯಿತು.

ದುರಂತದ ಮಾಹಿತಿ ಸಿಗುತ್ತಿದ್ದಂತೆ ಯಡಿಯೂರಪ್ಪ ಚಾಮರಾಜನಗರ ಜಿಲ್ಲಾಧಿಕಾರಿಗಳ ಜತೆ ದೂರವಾಣಿ ಮೂಲಕ ಮಾತನಾಡಿದರು. ಆ ಬಳಿಕ ಅಧಿಕಾರಿಗಳ ಜತೆ ವಿಡಿಯೊ ಸಂವಾದ ನಡೆಸುತ್ತಿದ್ದರು. ಆಗ ಅಲ್ಲಿಗೆ ಬಂದ ಸುಧಾಕರ್ ಬಳಿ, 'ಚಾಮರಾಜನಗರದ ಮಾಹಿತಿ ಏನಿದೆ, ಅಂಕಿ–ಅಂಶ ಕೊಡಿ' ಎಂದು ಕೇಳಿದರು.

ಮಾಹಿತಿ ಇಲ್ಲದೇ ಬಂದಿದ್ದ ಸುಧಾಕರ್ ತಡಬಡಾಯಿಸಿದರು. ಇದರಿಂದ ಬೇಸರಗೊಂಡ ಯಡಿಯೂರಪ್ಪ, 'ಮಾಹಿತಿ ಇಲ್ಲದೇ ಇಲ್ಲಿಗೆ ಬರುವ ಅಗತ್ಯ ಏನಿತ್ತು? ಮೊದಲು ಚಾಮರಾಜನಗರಕ್ಕೆ ಹೋಗಿ' ಎಂದು ಸಿಡಿಮಿಡಿಗೊಂಡರು ಎಂದು ಮೂಲಗಳು ತಿಳಿಸಿವೆ. 'ಚಾಮರಾಜನಗರದಲ್ಲಿ ಎಷ್ಟು ಪ್ರಮಾಣದ ಆಮ್ಲಜನಕ ಅಗತ್ಯವಿತ್ತು. ಎಷ್ಟು ಲಭ್ಯವಿದೆ, ಕೊರತೆ ಆಗಲು ಕಾರಣವೇನು ಎಂಬುದರ ಅಂಕಿ–ಅಂಶಗಳನ್ನು ಕೊಡಿ ಎಂದು ಯಡಿಯೂರಪ್ಪ ಕೇಳಿದರು. ದಕ್ಷತೆಯ ಜತೆಗೆ ಸರಿಯಾದ ಮತ್ತು ತಾಜಾ ಮಾಹಿತಿಯನ್ನೂ ಇಟ್ಟುಕೊಂಡಿರಬೇಕು. ಎಲ್ಲ ಜಿಲ್ಲೆಗಳ ಮೇಲೂ ನಿಗಾ ಇಟ್ಟು, ಇತಿಮಿತಿಯಲ್ಲಿ ಆಮ್ಲಜನಕ ಪೂರೈಕೆ ಮಾಡಬೇಕು' ಎಂದು ಮುಖ್ಯಮಂತ್ರಿ ಹೇಳಿದರು.

ಇದಕ್ಕೆ ಮೊದಲೇ ಯಡಿಯೂರಪ್ಪ ಅವರು ಚಾಮರಾಜನಗರ ಜಿಲ್ಲಾಧಿಕಾರಿ ರವಿ ಅವರಿಂದ ದೂರವಾಣಿ ಮೂಲಕ ಮಾಹಿತಿ ಪಡೆದಿದ್ದರು. ಅಲ್ಲದೆ, ಮೈಸೂರು ಜಿಲ್ಲಾಧಿಕಾರಿ ರೋಹಿಣಿ ಸಿಂಧೂರಿ ಅಸಹಕಾರ ನೀಡಿದರು ಎಂಬ ಕಾರಣಕ್ಕೆ ದೂರವಾಣಿ ಕರೆ ಮಾಡಿ ತರಾಟೆಗೆ ತೆಗೆದುಕೊಂಡಿದ್ದರು.

ಆರೋಗ್ಯ ಸಚಿವರ ತಪ್ಪಿದ್ದರೆ ಕ್ರಮ ಜರುಗಿಸಲಿ:ಸಿ.ಟಿ.ರವಿ



ಬೆಂಗಳೂರು: 'ಚಾಮರಾಜನಗರ ದುರಂತಕ್ಕೆ ಕಾರಣರಾದ ತಪ್ಪಿತಸ್ಥರ ವಿರುದ್ಧ ಕ್ರಮ ಆಗಲೇ ಬೇಕು. ಒಂದು ವೇಳೆ ಸರ್ಕಾರ ನಿರ್ಲಕ್ಷ್ಯ ವಹಿಸಿದ್ದರೆ ಅದರ ಹೊಣೆಯನ್ನು ಸರ್ಕಾರ ಹೊರಬೇಕಾಗುತ್ತದೆ' ಎಂದು ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ.ರವಿ ಹೇಳಿದ್ದಾರೆ.

'ಈ ದುರಂತಕ್ಕೆ ಕಾರಣರಾದವರಿಗೆ ಕಠಿಣ ಕ್ರಮ ಜರುಗಿಸಿದಾಗ ಮಾತ್ರ ಇಂತಹ ಘಟನೆಗಳು ಮರುಕಳಿಸುವುದನ್ನು ತಪ್ಪಿಸಬಹುದು. ಆರೋಗ್ಯ ಸಚಿವರು ತಪ್ಪು ಮಾಡಿದ್ದರೆ ಅವರ ವಿರುದ್ಧವೂ ಕ್ರಮ ಆಗಬೇಕು. ಕೂಡಲೇ ತನಿಖೆ ನಡೆಸಿ ಶಿಸ್ತು ಕ್ರಮ ತೆಗೆದುಕೊಳ್ಳಲು ಮುಖ್ಯಮಂತ್ರಿಯವರನ್ನು ಭೇಟಿ ಮಾಡಿ ಮನವಿ ಮಾಡಿದ್ದೇನೆ' ಎಂದು ಅವರು ಸುದ್ದಿಗಾರರಿಗೆ ಹೇಳಿದರು. 'ಮುಖ್ಯಮಂತ್ರಿಯವರ ಜತೆ ವಿವಿಧ ಜಿಲ್ಲೆಗಳ ಆಕ್ಸಿಜನ್ ಕೊರತೆ ಬಗ್ಗೆಯೂ ಚರ್ಚಿಸಿದ್ದೇನೆ. ವಿವಿಧ ರಾಜ್ಯಗಳಲ್ಲಿ ನಡೆದ ದುರ್ಘಟನೆಗಳು ನಮಗೆ ಪಾಠ ಆಗಬೇಕಿತ್ತು. ಇಂದು ನಮ್ಮ ರಾಜ್ಯದಲ್ಲೂ ದುರಂತ ಸಂಭವಿಸಿದೆ. ಜನರು ಜೀವ ಕೈಯಲ್ಲಿ ಹಿಡಿದು ಬದುಕಬೇಕಾದ ಸ್ಥಿತಿ ಇದೆ' ಎಂದೂ ತಿಳಿಸಿದರು. 'ಆಮ್ಲಜನಕದ ಸರಬರಾಜಿನ ವಿಚಾರದಲ್ಲಿ ಸರ್ಕಾರ ಕೂಡಲೇ ಮಧ್ಯ ಪ್ರವೇಶಿಸಲೇ ಬೇಕು. ಆರೋಗ್ಯ ತುರ್ತುಸ್ಥಿತಿ ಎಂದು ಘೋಷಿಸಿ, ಸಮರೋಪಾದಿಯಲ್ಲಿ ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳಬೇಕು' ಎಂದರು.

ಸಂಪುಟ ತುರ್ತು ಸಭೆ ಇಂದು

ಬೆಂಗಳೂರು: ರಾಜ್ಯದಲ್ಲಿ ಕೋವಿಡ್ ನಿಯಂತ್ರಣಕ್ಕೆ ಸಿಗದೇ ಅವ್ಯವಸ್ಥೆ ಹೆಚ್ಚುತ್ತಿರುವ ಬೆನ್ನಲ್ಲೇ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರು ಮಂಗಳವಾರ ಸಂಜೆ ಸಚಿವ ಸಂಪುಟ ತುರ್ತು ಸಭೆಯನ್ನು ಕರೆದಿದ್ದಾರೆ.

ಚಾಮರಾಜನಗರ ಘಟನೆಯ ಬೆನ್ನಲ್ಲೇ, ವಿವಿಧ ಉಸ್ತುವಾರಿ ಸಚಿವರ ಕಾರ್ಯವನ್ನು ಈ ಸಭೆಯಲ್ಲಿ ಪರಾಮರ್ಶೆ ಮಾಡುವ ಹಾಗೂ ಸಚಿವರಿಗೆ ಚುರುಕು ಮುಟ್ಟಿಸುವ ಸಾಧ್ಯತೆ ಇದೆ ಎಂದು ಮೂಲಗಳು ಹೇಳಿವೆ.

ಆಮ್ಲಜನಕ ತಡೆರಹಿತ ಪೂರೈಕೆ: ಸೂಚನೆ

'ಕೇಂದ್ರ ಸರ್ಕಾರ ಹಂಚಿಕೆ ಮಾಡಿರುವ ಆಮ್ಲಜನಕ ಕೋಟಾದಲ್ಲಿ ಕಡಿತ ಆಗಬಾರದು. ಸಮಸ್ಯೆಗಳಿದ್ದರೆ ನಿಯೋಜಿಸಿರುವ ಅಧಿಕಾರಿಯನ್ನು ಸಂಪರ್ಕಿಸಿ, ತಡೆರಹಿತವಾಗಿ ಪೂರೈಕೆ ಮಾಡಬೇಕು' ಎಂದು ಆಮ್ಲಜನಕ ಉತ್ಪಾದಕರು ಮತ್ತು ಪೂರೈಕೆದಾರರಿಗೆ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ನಿರ್ದೇಶನ ನೀಡಿದರು. ಸೋಮವಾರ ತುರ್ತು ಸಭೆ ನಡೆಸಿದ ಅವರು, ಟ್ಯಾಂಕರ್‌ಗಳಿಗೆ ಆಮ್ಲಜನಕ ತುಂಬಿಸುವ ಅವಧಿ ಕಡಿತಗೊಳಿಸಲು, ಟ್ಯಾಂಕರ್‌ಗಳ ಸಂಚಾರಕ್ಕೆ ಗ್ರೀನ್ ಕಾರಿಡಾರ್ ಒದಗಿಸುವ ಜೊತೆಗೆ ಟೋಲ್‌ಗಳಲ್ಲಿ ವಿಳಂಬ ತಪ್ಪಿಸಲು ಅಗತ್ಯ ಕ್ರಮ ವಹಿಸಬೇಕು. ನೈಟ್ರೋಜನ್, ಆರ್ಗನ್ ಅನಿಲಗಳ ಸಾಗಣೆ ಟ್ಯಾಂಕರ್‌ಗಳನ್ನು ಆಮ್ಲಜನಕ ಆಕ್ಸಿಜನ್ ಸಾಗಣೆಗೆ ಪರಿವರ್ತಿಸಲು ಹಾಗೂ ತುರ್ತು ಸಂದರ್ಭಗಳಲ್ಲಿ ಬಳಸಿಕೊಳ್ಳಲು ಎಲ್‌ಪಿಜಿ ಟ್ಯಾಂಕರ್ ಚಾಲಕರ ಪಟ್ಟಿ ಸಿದ್ಧಪಡಿಸಿಕೊಳ್ಳಬೇಕು. ಲಭ್ಯ ಟ್ಯಾಂಕರ್‌ಗಳನ್ನು ಗರಿಷ್ಠ ಪ್ರಮಾಣದಲ್ಲಿ ಬಳಸಿಕೊಳ್ಳಬೇಕು ಎಂದೂ ಸೂಚಿಸಿದರು.



ರಾಜ್ಯದಲ್ಲಿ ಉತ್ಪಾದನೆ ಆಗುತ್ತಿರುವ ಅಷ್ಟೂ ಆಮ್ಲಜನಕವನ್ನು ಸ್ಥಳೀಯವಾಗಿ ಬಳಸಲು ಕೇಂದ್ರ ಸರ್ಕಾರ ಅವಕಾಶ ನೀಡಿದರೆ ತಕ್ಷಣದ ಬಿಕ್ಕಟ್ಟಿನಿಂದ ಪಾರಾಗಲು ಸಾಧ್ಯ
ಪಿ. ರವಿಕುಮಾರ್, ಮುಖ್ಯ ಕಾರ್ಯದರ್ಶಿ



ಚಾಮರಾಜನಗರ ಜಿಲ್ಲಾ ಕೋವಿಡ್ ಆಸ್ಪತ್ರೆ ಮುಂದೆ ಸೋಮವಾರ ಮೃತರ ಸಂಬಂಧಿಕರ ಆಕ್ರಂದನ ಮುಗಿಲು ಮುಟ್ಟಿತ್ತು

ಜಿಲ್ಲಾ ಕೋವಿಡ್ ಆಸ್ಪತ್ರೆಯಲ್ಲಿ ಮನಕಲಕಿದ ದುರಂತ

ಚಾಮರಾಜನಗರ: ಸಕಾಲಕ್ಕೆ ಸಿಗದ ಆಮ್ಲಜನಕ –24 ಸಾವು

• ಸೂರ್ಯನಾರಾಯಣ ವಿ.

ಚಾಮರಾಜನಗರ: ಚಾಮರಾಜನಗರ ಜಿಲ್ಲೆಯಲ್ಲಿ ಭಾನುವಾರ ರಾತ್ರಿ 24 ಮಂದಿ ಕೋವಿಡ್ ರೋಗಿಗಳು ಮೃತಪಟ್ಟಿದ್ದು, ಸಕಾಲಕ್ಕೆ ಆಮ್ಲಜನಕ ಸಿಗದಿರುವುದೇ ಇದಕ್ಕೆ ಕಾರಣ ಎನ್ನಲಾಗಿದೆ.

ಚಾಮರಾಜನಗರದ ಕೋವಿಡ್ ಆಸ್ಪತ್ರೆಯಲ್ಲಿ 23 ಮಂದಿ ಮೃತಪಟ್ಟರೆ, ಹನೂರು ಬಳಿ ಕಾಮಗೆರೆ ಹೋಲಿಕ್ರಾಸ್ ಆಸ್ಪತ್ರೆಯಲ್ಲಿ ಮತ್ತೊಬ್ಬ ರೋಗಿ ಮೃತಪಟ್ಟಿದ್ದಾರೆ.

ರೋಗಿಗಳ ಸಾವಿಗೆ ಕಾರಣವಾದ ಹಿನ್ನೆಲೆಯನ್ನು ಪತ್ತೆ ಮಾಡಿ, ವರದಿ ಸಲ್ಲಿಸುವಂತೆ ಐಎಎಸ್ ಅಧಿಕಾರಿ ಶಿವಯೋಗಿ ಕಳಸದ ಅವರನ್ನು ವಿಚಾರಣಾಧಿಕಾರಿಯನ್ನಾಗಿ ನೇಮಿಸಿ ರಾಜ್ಯ ಸರ್ಕಾರ ಆದೇಶಿಸಿದೆ.

ಸರ್ಕಾರ ಹಾಗೂ ಜಿಲ್ಲಾಡಳಿತದ ನಿರ್ಲಕ್ಷ್ಯದಿಂದಾಗಿಯೇ ಈ ದುರಂತ ಸಂಭವಿಸಿದೆ ಎಂದು ಕಾಂಗ್ರೆಸ್ ನಾಯಕರು, ಮೃತರ ಸಂಬಂಧಿಕರು ಹಾಗೂ ಸ್ಥಳೀಯ ಸಂಘಟನೆಗಳ ಮುಖಂಡರು ಆರೋಪಿಸಿದ್ದು, ಹೈಕೋರ್ಟ್‌ನ ನ್ಯಾಯಮೂರ್ತಿ ನೇತೃತ್ವದಲ್ಲಿ ಪ್ರಕರಣದ ಬಗ್ಗೆ ಉನ್ನತ ತನಿಖೆ ನಡೆಸಬೇಕು ಹಾಗೂ ಮೃತಪಟ್ಟವರ ಕುಟುಂಬಕ್ಕೆ ಪರಿಹಾರ ಒದಗಿಸಬೇಕು ಎಂದು ಒತ್ತಾಯಿಸಿದ್ದಾರೆ.

8ನೇ ಪುಟ ನೋಡಿ

ಮೂವರಷ್ಟೇ ಸಾವು: ಸುಧಾಕರ್ ಲೆಕ್ಕ!

ಘಟನೆ ಬೆಳಕಿಗೆ ಬರುತ್ತಿದ್ದಂತೆಯೇ ಬೆಂಗಳೂರಿನಿಂದ ನಗರಕ್ಕೆ ದೌಡಾಯಿಸಿದ ಆರೋಗ್ಯ ಸಚಿವ ಕೆ.ಸುಧಾಕರ್ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಎಸ್.ಸುರೇಶ್ ಕುಮಾರ್, ನೇರವಾಗಿ ಆಸ್ಪತ್ರೆಗೆ ತೆರಳಿ ಜಿಲ್ಲಾಡಳಿತದ ಅಧಿಕಾರಿಗಳು ಹಾಗೂ ವೈದ್ಯರೊಂದಿಗೆ ಚರ್ಚಿಸಿ ಮಾಹಿತಿ ಪಡೆದರು.

ನಂತರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಚಿವ ಸುಧಾಕರ್, 'ಪ್ರಾಣವಾಯು ಇಲ್ಲದೇ ಮೂವರು ಕೊನೆಯುಸಿರೆಳೆದಿದ್ದಾರೆ. ಇದು ಪ್ರಾಥಮಿಕ ವರದಿಯಷ್ಟೇ. ಈ ಬಗ್ಗೆ ವ್ಯಾಖ್ಯಾನ ಮಾಡುವುದಕ್ಕೆ ಹೋಗುವುದಿಲ್ಲ' ಎಂದು ಅವರು ಹೇಳಿದರು.

8ನೇ ಪುಟ ನೋಡಿ

ಆಮ್ಲಜನಕ ಸಿಗದೇ ಇಬ್ಬರ ಸಾವು

ಕಲಬುರ್ಗಿ: ಇಲ್ಲಿನ ಆನಂದ ಖಾಸಗಿ ಆಸ್ಪತ್ರೆಯಲ್ಲಿ ಆಮ್ಲಜನಕದ ಕೊರತೆಯಿಂದ ಇಬ್ಬರು ಕೋವಿಡ್ ರೋಗಿಗಳು ಸೋಮವಾರ ಮೃತಪಟ್ಟಿದ್ದಾರೆ.ಒಬ್ಬ ಪುರುಷ ಹಾಗೂ ಮಹಿಳೆಗೆ ಅಗತ್ಯಕ್ಕೆ ತಕ್ಕಷ್ಟು ಆಮ್ಲಜನಕ ಲಭ್ಯವಾಗಲಿಲ್ಲ. ಹೀಗಾಗಿ, ಇಬ್ಬರೂ ಮೃತಪಟ್ಟರು ಎಂದು ಆಸ್ಪತ್ರೆಯ ವ್ಯವಸ್ಥಾಪಕ ಆನಂದ ತಿಳಿಸಿದ್ದಾರೆ. ಆಸ್ಪತ್ರೆಯಲ್ಲಿ 32 ಕೋವಿಡ್ ರೋಗಿಗಳಿಗೆ ಚಿಕಿತ್ಸೆ ನೀಡಲಾಗುತ್ತಿದೆ.

ಇನ್ನಷ್ಟು ಸುದ್ದಿಗಳು 2

ಹಿಂದೂಪುರ: ಆಸ್ಪತ್ರೆಯಲ್ಲಿ ಎಂಟು ರೋಗಿಗಳ ಸಾವು

ಪ್ರಜಾವಾಣಿ ವಾರ್ತೆ

ಹೈದರಾಬಾದ್: ಹಿಂದೂಪುರದ ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ಎಂಟು ಮಂದಿ ಕೋವಿಡ್ ರೋಗಿಗಳು ಸೋಮವಾರ ಮೃತಪಟ್ಟಿದ್ದು, ಆಮ್ಲಜನಕದ ಸರಬರಾಜಿನಲ್ಲಿ ವ್ಯತ್ಯಯ ಆಗಿರುವುದೇ ಇವರ ಸಾವಿಗೆ ಕಾರಣ ಎಂದು ಆರೋಪಿಸಲಾಗಿದೆ.

'ತುರ್ತು ಸಂರ್ಭದಲ್ಲಿ ಬಳಸುವ ಸಲುವಾಗಿ ಆಸ್ಪತ್ರೆಯಲ್ಲಿ ಸಂಗ್ರಹಿಸಿಟ್ಟಿದ್ದ ಆಮ್ಲಜನಕದ ಸಿಲಿಂಡರ್‌ಗಳನ್ನು ಬಳಸಿ ರೋಗಿಗಳಿಗೆ ಆಮ್ಲಜನಕ ನೀಡಲು ಸಿಬ್ಬಂದಿ ನಿರ್ಲಕ್ಷ್ಯ ತೋರಿದ್ದರಿಂದ ಘಟನೆ ಸಂಭವಿಸಿದೆ' ಎಂದು ಮೃತರ ಕುಟುಂಬದವರು ಆರೋಪಿಸಿದ್ದಾರೆ.

ಆದರೆ ಈ ಆರೋಪಗಳು ಸತ್ಯಕ್ಕೆ ದೂರವಾದವು ಎಂದು ಆಮ್ಲಜನಕ ಮೇಲ್ವಿಚಾರಣಾ ಅಧಿಕಾರಿಯಾಗಿರುವ ಅನಂತಪುರಂ ಜಿಲ್ಲಾ ಅರಣ್ಯ ರಕ್ಷಣಾಧಿಕಾರಿ ಜಗನ್ನಾಥ್ ಸಿಂಗ್ ಹೇಳಿದ್ದಾರೆ. 'ರೋಗಿಗಳ ಸಾವಿಗೆ ಆಮ್ಲಜನಕದ ಕೊರತೆ ಕಾರಣವಲ್ಲ. ಈ ರೋಗಿಗಳ ಸ್ಥಿತಿ ತೀರಾ ಗಂಭೀರವಾಗಿತ್ತು. ಕೆಲವರ ಆಮ್ಲಜನಕದ ಪ್ರಮಾಣವು ಶೇ 50–60ರಷ್ಟಿತ್ತು' ಎಂದು ಆಸ್ಪತ್ರೆಯ ಅಧಿಕಾರಿಗಳು ತಿಳಿಸಿದ್ದಾರೆ.

ದೇಶದಲ್ಲಿ 3.17 ಲಕ್ಷ ಕೋವಿಡ್ ಪ್ರಕರಣ

ನವದೆಹಲಿ: ದೇಶದಲ್ಲಿ ಕಳೆದ 24 ಗಂಟೆಗಳಲ್ಲಿ (ಮಧ್ಯರಾತ್ರಿ 12ರವರೆಗೆ) ಕೋವಿಡ್ ದೃಢಪಟ್ಟವರ ಸಂಖ್ಯೆ 3,17,918 ಆಗಿದ್ದು, 2719 ಮಂದಿ ಮೃತಪಟ್ಟಿದ್ದಾರೆ.

ಇದೇ ಅವಧಿಯಲ್ಲಿ ದೆಹಲಿಯಲ್ಲಿ 448 ಮಂದಿ ಮೃತಪಟ್ಟಿದ್ದಾರೆ ಎಂದು ವರದಿಯಾಗಿದೆ. ದೇಶದಲ್ಲಿ ಒಟ್ಟು ಸಕ್ರಿಯ ಪ್ರಕರಣಗಳ ಸಂಖ್ಯೆ 34,44,551 ಮತ್ತು ಒಟ್ಟು ಪ್ರಕರಣಗಳ ಸಂಖ್ಯೆ 2,02,37,781 ಆಗಿದೆ.

ರಾಜ್ಯ ಕೋವಿಡ್ ಅಂಕಿ–ಅಂಶ

16,46,303 ▲ ಒಟ್ಟು ಸೋಂಕಿತರು (13,68,945 ನಿನ್ನೆಯ ವಿವರ)
4,44,734 ▲ ಸಕ್ರಿಯ ಪ್ರಕರಣಗಳು
11,85,299 ▲ ಗುಣಮುಖರಾದವರು
16,250 ▲ ಒಟ್ಟು ಸಾವು

ದಿನದ ಏರಿಕೆ

ಹೊಸ ಪ್ರಕರಣ	44,438	▲
ಗುಣಮುಖ	20,901	▼
ಸಾವು	239	▲

ಆಧಾರ: ರಾಜ್ಯ ಆರೋಗ್ಯ ಇಲಾಖೆ
ಪ್ರಜಾವಾಣಿ ಗ್ರಾಫಿಕ್ಸ್

ಇಂದಿನ ಪಾಡ್‌ಕಾಸ್ಟ್ ವಿಶೇಷ
ಸುದ್ದಿ ಸ್ವಾರಸ್ಯ
ಪ್ರತೀ ದಿನ: ದಿನದ ಸೂಕ್ತಿ, ವಚನವಾಣಿ ಸಂಪಾದಕೀಯ, ಪ್ರಚಲಿತ
Prajavani.net/podcast

ಎಸ್ಸೆಸ್ಸೆಲ್ಸಿ- ಪಿಯುಸಿ
ಪರೀಕ್ಷೆ ದಿಕ್ಸೂಚಿ
ಪ್ರಿಯ ವಿದ್ಯಾರ್ಥಿಗಳೇ, ಕೋವಿಡ್‌ನಿಂದಾಗಿ ಈ ವರ್ಷ ತರಗತಿಗಳಿಗೆ ಖುದ್ದಾಗಿ ಹಾಜರಾಗಲು ನಿಮಗೆ ಸಾಧ್ಯವಾಗದಿರಬಹುದು. ಎಸ್ಸೆಸ್ಸೆಲ್ಸಿ-ಪಿಯುಸಿ ಪರೀಕ್ಷೆ ಬರೆಯುವ ನಿಮಗಾಗಿ ಅನುಭವಿ ಶಿಕ್ಷಕರು ನೀಡಿರುವ ಮಾರ್ಗದರ್ಶನ ದಿಕ್ಸೂಚಿಯಲ್ಲಿ..
ಪುಟ-9

ಹೈಕೋರ್ಟ್ ಅಭಿಪ್ರಾಯ ಪ್ರಸಾರಕ್ಕೆ ತಡೆ ಅಸಾಧ್ಯ: 'ಸುಪ್ರೀಂ' 7

ಚಿನಕುರಳಿ

ಪ್ರಕಾಶ್ ಶೆಟ್ಟಿ



ನೀಟ್–ಪಿಜಿ ಮುಂದೂಡಿಕೆ

ನವದೆಹಲಿ (ಪಿಟಿಐ): ಕೋವಿಡ್ ವಿರುದ್ಧದ ಹೋರಾಟದಲ್ಲಿ ನಿಯೋಜಿಸಲಾಗುವ ಸಿಬ್ಬಂದಿ ಸಂಖ್ಯೆಯನ್ನು ಗಣನೀಯವಾಗಿ ಹೆಚ್ಚಿಸಲು ವಿವಿಧ ಸಕಾರಾತ್ಮಕ ತೀರ್ಮಾನಗಳಿಗೆ ಪ್ರಧಾನಿ ನರೇಂದ್ರ ಮೋದಿ ಸಮ್ಮತಿಸಿದ್ದು, ಅದರಂತೆ ನೀಟ್–ಪಿಜಿ ಪರೀಕ್ಷೆಯನ್ನು ಕನಿಷ್ಠ ನಾಲ್ಕು ತಿಂಗಳು ಮುಂದೂಡಲು ನಿರ್ಧರಿಸಲಾಗಿದೆ.

ಸೋಮವಾರ ಈ ಕುರಿತ ಹೇಳಿಕೆ ನೀಡಿರುವ ಪ್ರಧಾನಿ ಕಾರ್ಯಾಲಯ, ಎಂಬಿಬಿಎಸ್ ಅಂತಿಮ ವರ್ಷದ ವಿದ್ಯಾರ್ಥಿಗಳ ಸೇವೆಯನ್ನು ಟೆಲಿ ಸಮಾಲೋಚನೆ ಮತ್ತು ಗಂಭೀರವಲ್ಲದ ಕೋವಿಡ್ ಪ್ರಕರಣಗಳ ನಿರ್ವಹಣೆಗೆ ಬಳಸಿಕೊಳ್ಳಬಹುದು ಎಂದು ತಿಳಿಸಿದೆ.

ಐಐಟಿ, ಎನ್‌ಐಟಿ, ಐಐಐಟಿ, ಕೇಂದ್ರೀಯ ವಿ.ವಿ. ಪರೀಕ್ಷೆ ಮುಂದಕ್ಕೆ

ನವದೆಹಲಿ: ಮೇ ತಿಂಗಳಲ್ಲಿ ನಡೆಸಲು ನಿರ್ಧರಿಸಿರುವ ಎಲ್ಲ ಆಫ್‌ಲೈನ್ ಪರೀಕ್ಷೆಗಳನ್ನು ಮುಂದೂಡುವಂತೆ ಕೇಂದ್ರದ ಅನುದಾನಿತ ಸಂಸ್ಥೆಗಳಿಗೆ ಸರ್ಕಾರವು ಸೋಮವಾರ ನಿರ್ದೇಶನ ನೀಡಿದೆ.

ಐಐಟಿ, ಎನ್‌ಐಟಿ, ಐಐಐಟಿ ಮತ್ತು ಕೇಂದ್ರೀಯ ವಿಶ್ವವಿದ್ಯಾಲಯಗಳ ಮುಖ್ಯಸ್ಥರಿಗೆ ಉನ್ನತ ಶಿಕ್ಷಣ ಕಾರ್ಯದರ್ಶಿ ಅಮಿತ್ ಖಾರೆ ಅವರು ಪತ್ರ ಬರೆದು ಈ ಸೂಚನೆ ನೀಡಿದ್ದಾರೆ. ಆನ್‌ಲೈನ್ ಪರೀಕ್ಷೆಗಳನ್ನು ನಡೆಸಬಹುದು ಎಂದು ಪತ್ರದಲ್ಲಿ ಹೇಳಲಾಗಿದೆ.

ಸುಳ್ವಾಡಿ ಘಟನೆಯಿಂದ ಎಚ್ಚೆತ್ತುಕೊಳ್ಳದ ಚಾಮರಾಜನಗರ ಜಿಲ್ಲಾಡಳಿತ

ಇನ್ನೂ ಸುಧಾರಿಸದ ಆರೋಗ್ಯ ಸೌಲಭ್ಯ

ಪ್ರಜಾವಾಣಿ ವಾರ್ತೆ

ಚಾಮರಾಜನಗರ: ಸುಳ್ವಾಡಿ ಕಿಚ್‌ಗುತ್‌ ಮಾರಮ್ಮ ದೇಗುಲದಲ್ಲಿ ವಿಷಮಿಶ್ರಿತ ಪ್ರಸಾದ ಸೇವನೆಯಿಂದ ಅನಾಹುತ ಸಂಭವಿಸಿದಾಗ, ಚಿಕಿತ್ಸೆ ನೀಡಲು ತೊಂದರೆಯಾದ ಅನುಭವ ಕಣ್ಣೆದುರೇ ಇದ್ದರೂ ಚಾಮರಾಜನಗರ ಜಿಲ್ಲೆಯಲ್ಲಿ ಆರೋಗ್ಯ ಸೌಲಭ್ಯ ಸುಧಾರಿಸಿಲ್ಲ.

ಚಾಮರಾಜನಗರ ಪಟ್ಟಣದಲ್ಲಿ ಇರುವುದೇ ಒಂದು ಜಿಲ್ಲಾಸ್ಪತ್ರೆ. ಅದು ಬಿಟ್ಟರೆ ಕ್ಷೇಮ, ಜೆಎಸ್‌ಎಸ್‌, ಪಿಕಾರ್ಡೋ ಹಾಗೂ ಬಸವರಾಜೇಂದ್ರ ಖಾಸಗಿ ಆಸ್ಪತ್ರೆಗಳು ಮಾತ್ರ. ಆದರೆ, ಉನ್ನತ ಚಿಕಿತ್ಸೆ ಇಲ್ಲಿ ಲಭ್ಯವಿಲ್ಲ.

ಅತ್ಯಾಧುನಿಕ ವೈದ್ಯಕೀಯ ಸಲಕರಣೆಗಳು ಹಾಗೂ ಸೌಲಭ್ಯಗಳ ಕೊರತೆ ಎದುರಿಸುತ್ತಿದ್ದ ಜಿಲ್ಲಾಸ್ಪತ್ರೆಗೆ (ವೈದ್ಯಕೀಯ ಕಾಲೇಜಿನ ಬೋಧನಾ ಆಸ್ಪತ್ರೆ) ಕೋವಿಡ್‌–19 ನೆಪದಲ್ಲಿ ಸೌಲಭ್ಯ ಒದಗಿಸಲಾಗಿದೆ. ಇದಕ್ಕಾಗಿ ಜಿಲ್ಲಾಧಿಕಾರಿ ಎಂ.ಆರ್‌.ರವಿ ನೇತೃತ್ವದಲ್ಲಿ ಜಿಲ್ಲಾಡಳಿತ ಸಾಕಷ್ಟು ಪ್ರಯತ್ನ ಹಾಕಿದೆ. ಆದರೆ, ಅದು ಸಾಕಾಗುತ್ತಿಲ್ಲ. 300 ಹಾಸಿಗೆಗಳಿದ್ದು, ಈಗ ಕೋವಿಡ್‌ಗೆ 155 ಬೆಡ್‌ ವ್ಯವಸ್ಥೆ ಮಾಡಲಾಗಿದೆ.

ಈಗಲೂ ಚಾಮರಾಜನಗರ ಜಿಲ್ಲೆಯ ಹೆಚ್ಚಿನ ಜನರು ಮೈಸೂರಿನ ಆಸ್ಪತ್ರೆಗಳನ್ನು ಅವಲಂಬಿಸಿದ್ದಾರೆ. ಮೈಸೂರಿನ ಕೆ.ಆರ್‌.ಆಸ್ಪತ್ರೆಗೆ ಬಂದು ದಾಖಲಾಗುತ್ತಾರೆ.

ಸುಳ್ವಾಡಿ ವಿಷ ಪ್ರಸಾದ ಪ್ರಕರಣವು ಜಿಲ್ಲೆಯ ಆರೋಗ್ಯ ಸೇವೆಯ ಹುಳುಕುಗಳನ್ನು ಬಟಾಬಯಲು ಮಾಡಿತ್ತು. ಕೊಳ್ಳೇಗಾಲ ಹಾಗೂ ಚಾಮರಾಜನಗರದಲ್ಲಿ ಅಗತ್ಯವಾದ ವೆಂಟಿಲೇಟರ್‌ ಸೌಲಭ್ಯ ಇಲ್ಲದೇ ಇದ್ದುದರಿಂದ ಜೀವನ್ಮರಣ ಸ್ಥಿತಿಯಲ್ಲಿದ್ದ ಜನರಿಗೆ ಮೈಸೂರಿನ ಆಸ್ಪತ್ರೆಗಳಲ್ಲಿ ಜಿಲ್ಲಾಡಳಿತ ಚಿಕಿತ್ಸೆ ಕೊಡಿಸಿತ್ತು. ಆ ಬಳಿಕ ಜಿಲ್ಲೆಯಲ್ಲಿರುವ ಆರೋಗ್ಯ ಸೇವೆಯನ್ನು ಇನ್ನಷ್ಟು ಉತ್ತಮಪಡಿಸಬೇಕು ಎಂಬ ಕೂಗು ಕೇಳಿ ಬಂದಿತ್ತು.

ಕೋವಿಡ್‌ ನೆಪದಲ್ಲಿ ವ್ಯವಸ್ಥೆ ಸ್ವಲ್ಪ ಸುಧಾರಿಸಿದ್ದರೂ ಈಗ ಆಮ್ಲಜನಕ ಕೊರತೆಯಿಂದ ಜಿಲ್ಲಾಸ್ಪತ್ರೆಯಲ್ಲಿ ಸಾವುಗಳು ಸಂಭವಿಸಿವೆ. ಈ ಬಗ್ಗೆ ರೋಗಿಗಳ ಸಂಬಂಧಿಕರು ಆಕ್ರೋಶ ವ್ಯಕ್ತಪಡಿಸುತ್ತಿದ್ದಾರೆ.



ದುರ್ಘಟನೆಗಳಿಂದ ನಾವು ಪಾಠ ಕಲಿಯುತ್ತಿಲ್ಲ. ನಾಳೆ ಬಗ್ಗೆ ಚಿಂತಿಸುವ ಗುಣವೂ ಇಲ್ಲ. ಯೋಜನೆ ರೂಪಿಸುವುದಿಲ್ಲ. ನಾಲ್ಕು ದಿನ ಮಾತನಾಡಿ ಮರೆಯುತ್ತೇವೆ

ಡಾ.ಆರ್‌.ಬಾಲಸುಬ್ರಮಣ್ಯಂ, ವಿ-ಲೀಡ್‌ ಸಂಸ್ಥಾಪಕ



ವ್ಯವಸ್ಥೆ ನಿಧಾನವಾಗಿ ಸುಧಾರಿಸುತ್ತಿದೆ. ಸಿಬ್ಬಂದಿ ಕೊರತೆ ಇದೆ. ಹೊಸ ಆಸ್ಪತ್ರೆ ಸಿದ್ಧವಾಗುತ್ತಿದ್ದು, 450 ಬೆಡ್‌ಗಳ ಸೌಲಭ್ಯ ಇರಲಿದೆ. ಆಗ ಸಮಸ್ಯೆ ನೀಗಬಹುದು

ಡಾ.ಸಂಜೀವ್‌, ಚಾಮರಾಜನಗರ ವೈದ್ಯಕೀಯ ಕಾಲೇಜಿನ ಡೀನ್‌

ವಿಚಾರಣಾಧಿಕಾರಿಯಾಗಿ ಕಳಸದ

ಬೆಂಗಳೂರು: ಚಾಮರಾಜನಗರ ಜಿಲ್ಲಾ ಆಸ್ಪತ್ರೆಯಲ್ಲಿ ದುರಂತದ ಹಿನ್ನೆಲೆಯನ್ನು ಪತ್ತೆ ಮಾಡಿ ಸರ್ಕಾರ ವರದಿ ಸಲ್ಲಿಸಲು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕ ಶಿವಯೋಗಿ ಕಳಸದ ಅವರನ್ನು ವಿಚಾರಣಾಧಿಕಾರಿಯಾಗಿ ನೇಮಿಸಲಾಗಿದೆ.

ಈ ಘಟನೆಯನ್ನು ಸರ್ಕಾರ ಅತ್ಯಂತ ಗಂಭೀರವಾಗಿ ಪರಿಗಣಿಸಿದೆ. ದುರಂತದಲ್ಲಿ 24 ಜನರು ಮೃತಪಟ್ಟಿರುವುದು ಕಳವಳಕಾರಿಯಾಗಿದೆ. ಸಮಗ್ರ ಪರಿಶೀಲನೆ ನಡೆಸಿ ಮೂರು ದಿನಗಳೊಳಗೆ ವರದಿ ಸಲ್ಲಿಸುವಂತೆ ಕಳಸದ ಅವರಿಗೆ ಸೂಚಿಸಲಾಗಿದೆ.

ಸಿದ್ಧತೆ ಇಲ್ಲದೆ ಅನಾಹುತ: ಧ್ರುವನಾರಾಯಣ

ಮೈಸೂರು: 'ಭಾನುವಾರ ರಾತ್ರಿ 11 ಗಂಟೆಗೆ ಎಂ.ಆರ್‌.ರವಿ ಜೊತೆ ದೂರವಾಣಿಯಲ್ಲಿ ಮಾತನಾಡಿದ್ದಾಗ ಆಮ್ಲಜನಕದ ಕೊರತೆ ಇಲ್ಲ ಎಂಬುದಾಗಿ ಹೇಳಿದ್ದರು. ಆದರೆ, ಬೆಳಿಗ್ಗೆ ಎದ್ದಾಗ ಆಮ್ಲಜನಕ ಕೊರತೆಯಿಂದ ಸೋಂಕಿತರು ಮೃತಪಟ್ಟಿರುವುದು ಗೊತ್ತಾಯಿತು. ಇದು ಜಿಲ್ಲಾಡಳಿತದ ವೈಫಲ್ಯ' ಎಂದು ಚಾಮರಾಜನಗರ ಕ್ಷೇತ್ರದ ಮಾಜಿ ಸಂಸದ, ಕೆಪಿಸಿಸಿ ಕಾರ್ಯಾಧ್ಯಕ್ಷ ಆರ್‌.ಧ್ರುವನಾರಾಯಣ ಆಕ್ರೋಶ ವ್ಯಕ್ತಪಡಿಸಿದರು.

'ಎರಡು ದಿನಗಳ ಮೊದಲೇ ಆಮ್ಲಜನಕದ ಕೊರತೆ ಇರುವ ಬಗ್ಗೆ ನನಗೆ ವೈದ್ಯಾಧಿಕಾರಿಗಳಿಂದ ಮಾಹಿತಿ ಬಂದಿತ್ತು. ಅದನ್ನು ಜಿಲ್ಲಾಡಳಿತದ ಗಮನಕ್ಕೆ ತಂದಿದ್ದೆ. ಪೂರ್ವಸಿದ್ಧತೆ ಇಲ್ಲದ ಕಾರಣ ದುರ್ಘಟನೆ ಸಂಭವಿಸಿದೆ' ಎಂದರು.

'ಇದೊಂದು ಕ್ರಿಮಿನಲ್‌ ಪ್ರಕರಣ. ಈ ಬಗ್ಗೆ ನ್ಯಾಯಾಂಗ ತನಿಖೆ ಆಗಬೇಕು. ಹೈಕೋರ್ಟ್‌ ಹಾಲಿ ನ್ಯಾಯಮೂರ್ತಿ ನೇತೃತ್ವ ವಹಿಸಿಕೊಳ್ಳಬೇಕು' ಎಂದು ಆಗ್ರಹಿಸಿದರು.

'ನಗರದ ಹೊರವಲಯದ ಯಡಬೆಟ್ಟದಲ್ಲಿ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಬಳಿ ಹೊಸ ಆಸ್ಪತ್ರೆ ನಿರ್ಮಾಣ ಮಾಡಲಾಗುತ್ತಿದೆ. ಕೆಲಸ ಮುಗಿಯುತ್ತಾ ಬಂದಿದ್ದು, ಈ ತಿಂಗಳ ಅಂತ್ಯಕ್ಕೆ ಸಿದ್ಧವಾಗಲಿದೆ. ಸೌಲಭ್ಯ ಒದಗಿಸುವ ಸಂಬಂಧ ಟೆಂಡರ್‌ ಪ್ರಕ್ರಿಯೆ ನಡೆಯುತ್ತಿದೆ' ಎಂದು ಚಾಮರಾಜನಗರ ವೈದ್ಯಕೀಯ ಕಾಲೇಜಿನ ಡೀನ್‌ ಡಾ.ಸಂಜೀವ್‌ ಹೇಳಿದರು.

'ಆಮ್ಲಜನಕ ತಡವಾಗಿ ಬಂದಿದ್ದೇ ದುರಂತಕ್ಕೆ ಕಾರಣ'



ಶ್ರೀನಿವಾಸ್‌ ಪ್ರಸಾದ್‌

'ಮೈಸೂರಿನಿಂದ ಆಮ್ಲಜನಕ ತಡವಾಗಿ ಬಂದಿರುವುದೇ ಅನಾಹುತಕ್ಕೆ ಕಾರಣ. ಇದು ಆರೋಗ್ಯ ಸಚಿವ ಡಾ.ಕೆ.ಸುಧಾಕರ್‌ ಅವರ ಗಮನಕ್ಕೂ ಬಂದಿದೆ' ಎಂದು ಚಾಮರಾಜನಗರ ಸಂಸದ ವಿ.ಶ್ರೀನಿವಾಸಪ್ರಸಾದ್‌ ಹೇಳಿದರು.

ಸೋಮವಾರ ಸಂಜೆ ಜಿಲ್ಲಾಧಿಕಾರಿ ಜತೆಗಿನ ಸಭೆಯ ಬಳಿಕ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಸುಧಾಕರ್‌ ಅವರು ಮೈಸೂರಿಗೆ ತೆರಳಿ ಸಮಗ್ರ ಮಾಹಿತಿ ಕಲೆಹಾಕುತ್ತಾರೆ. ಆಮ್ಲಜನಕ ಪೂರೈಕೆ ಏಕೆ ತಡವಾಯಿತು ಎಂಬ ಬಗ್ಗೆ ವರದಿ ತೆಗೆದುಕೊಳ್ಳುತ್ತಾರೆ' ಎಂದು ಅವರು ಹೇಳಿದರು.

'ನಾನು ಆಗಿಂದಾಗ್ಗೆ ಚಾಮರಾಜನಗರಕ್ಕೆ ಭೇಟಿ ನೀಡುತ್ತಿಲ್ಲವಾದರೂ, ಜಿಲ್ಲೆಯಲ್ಲಿ ಕೋವಿಡ್‌ ನಿರ್ವಹಣೆಗೆ ತೆಗೆದುಕೊಂಡಿರುವ ಕ್ರಮಗಳ ಬಗ್ಗೆ ಎಲ್ಲ ಮಾಹಿತಿ ಪಡೆಯುತ್ತಿದ್ದೇನೆ. ಅಧಿಕಾರಿಗಳ ಜೊತೆ ನಿರಂತರ ಸಂಪರ್ಕದಲ್ಲಿದ್ದೇನೆ' ಎಂದರು.

ಇದಕ್ಕೂ ಮುನ್ನ ಮೈಸೂರಿನಲ್ಲಿ ಮಾತನಾಡಿದ್ದ ಅವರು, 'ಭಾನುವಾರ ರಾತ್ರಿ 9ರ ವೇಳೆಗೆ ಚಾಮರಾಜನಗರ ಜಿಲ್ಲಾಧಿಕಾರಿಗೆ ಕರೆ ಮಾಡಿ ಮಾತನಾಡಿದ್ದೆ. ಕೋವಿಡ್‌ ನಿರ್ವಹಣೆ ವಿಚಾರದಲ್ಲಿ ಯಾವುದೇ ಸಮಸ್ಯೆ ಇಲ್ಲ ಎಂದಿದ್ದರು. ಆಮ್ಲಜನಕದ ಕೊರತೆಯ ಬಗ್ಗೆ ಅವರು ನನಗೆ ಯಾವುದೇ ಮಾಹಿತಿ ನೀಡಿಲ್ಲ' ಎಂದಿದ್ದರು.

ತುರ್ತಾಗಿ ಸಿಲಿಂಡರ್‌ ತಲುಪಿಸಿದ್ದೇವೆ: ಪ್ರತಾಪ ಸಿಂಹ



ಪ್ರತಾಪ ಸಿಂಹ

'ಭಾನುವಾರ ರಾತ್ರಿಯಿಂದ ಸೋಮವಾರ ಬೆಳಗಿನವರೆಗೆ ಚಾಮರಾಜನಗರಕ್ಕೆ ಮೈಸೂರಿನಿಂದ ಆಮ್ಲಜನಕದ ಸುಮಾರು 145 ಸಿಲಿಂಡರ್‌ಗಳನ್ನು ತಲುಪಿಸಿದ್ದೇವೆ. ಆದರೂ ಪರಿಸ್ಥಿತಿ ನಿಭಾಯಿಸುವಲ್ಲಿ ಲೋಪವಾಗಿ ಹಲವರು ಪ್ರಾಣ ಕಳೆದುಕೊಂಡಿರುವುದು ದುರ್ದೈವ. ಚಾಮರಾಜನಗರ ಜಿಲ್ಲಾಡಳಿತ ಇನ್ನಷ್ಟು ಜಾಗರೂಕತೆ ವಹಿಸಬೇಕಾಗಿತ್ತು' ಎಂದು ಸಂಸದ ಪ್ರತಾಪ ಸಿಂಹ ಹೇಳಿದ್ದಾರೆ.

'ಚಾಮರಾಜನಗರದಲ್ಲಿ ಆಮ್ಲಜನಕ ಕೊರತೆ ಉಂಟಾಗಿದ್ದು, ಬಳ್ಳಾರಿಯಿಂದ ಪೂರೈಕೆಯಾಗುವುದು ಸ್ವಲ್ಪ ತಡವಾಗುತ್ತದೆ. ಆದ್ದರಿಂದ ಮೈಸೂರಿನಿಂದ ತುರ್ತಾಗಿ ಒಂದಷ್ಟು ಆಮ್ಲಜನಕದ ಸಿಲಿಂಡರ್‌ಗಳು ಬೇಕು ಎಂಬ ಮಾಹಿತಿ ತಿಳಿದ ಕೂಡಲೇ ನಾನು ಕಾರ್ಯಪ್ರವೃತ್ತನಾದೆ' ಎಂದು ಮಾಧ್ಯಮದವರಿಗೆ ತಿಳಿಸಿದರು.

'ನಾನು ಚಾಮರಾಜನಗರ ಜಿಲ್ಲಾಧಿಕಾರಿಗೆ ಕರೆ ಮಾಡಿದರೂ ಅವರ ಸಂಪರ್ಕ ಸಾಧ್ಯವಾಗಲಿಲ್ಲ. ಆ ಬಳಿಕ, ರಾತ್ರಿ ಹನ್ನೊಂದೂವರೆ ವೇಳೆಗೆ ಅವರು ಕರೆ ಮಾಡಿ ಆಮ್ಲಜನಕ ಕೊರತೆಯ ಬಗ್ಗೆ ತಿಳಿಸಿದರು. ನಾನು ಕೂಡಲೇ ಮೈಸೂರಿನ ಸಹಾಯಕ ಔಷಧ ನಿಯಂತ್ರಣಾಧಿಕಾರಿಯನ್ನು ಸಂಪರ್ಕಿಸಿ, ತುರ್ತಾಗಿ 50 ಸಿಲಿಂಡರ್‌ಗಳನ್ನು ಕಳುಹಿಸಿಕೊಡುವಂತೆ ಸೂಚಿಸಿದೆ. ರಾತ್ರಿಯೇ 15 ಸಿಲಿಂಡರ್‌ಗಳನ್ನು ಕಳುಹಿಸಿದ್ದು, ಆ ಬಳಿಕ ಬೆಳಗಿನ ಜಾವದವರೆಗೆ 145 ಸಿಲಿಂಡರ್‌ಗಳನ್ನು ತಲುಪಿಸಿದ್ದೇವೆ' ಎಂದು ವಿವರಿಸಿದರು.

ಸುಧಾಕರ್‌ ರಾಜೀನಾಮೆಗೆ ಆಗ್ರಹಿಸಿ ಟ್ವಿಟರ್‌ ಅಭಿಯಾನ

ಚಾಮರಾಜನಗರ ಜಿಲ್ಲಾ ಕೋವಿಡ್‌ ಆಸ್ಪತ್ರೆಯಲ್ಲಿ ಆಮ್ಲಜನಕದ ಕೊರತೆಯಿಂದ 24 ಮಂದಿ ಮೃತಪಟ್ಟಿರುವುದಕ್ಕೆ ಹೊಣೆ ಹೊತ್ತು ಆರೋಗ್ಯ ಸಚಿವ ಡಾ.ಕೆ. ಸುಧಾಕರ್‌ ರಾಜೀನಾಮೆ ನೀಡಬೇಕೆಂದು ಆಗ್ರಹಿಸಿ ಸೋಮವಾರ ಇಡೀ ದಿನ ಟ್ವಿಟರ್‌ನಲ್ಲಿ ಅಭಿಯಾನ ನಡೆದಿದೆ.

'#ResignSudhakar' ಹ್ಯಾಷ್‌ ಟ್ಯಾಗ್‌ ಬಳಸಿ ನಡೆದ ಅಭಿಯಾನದಲ್ಲಿ 16,000ಕ್ಕೂ ಹೆಚ್ಚು ಮಂದಿ ಆರೋಗ್ಯ ಸಚಿವರ ರಾಜೀನಾಮೆಗೆ ಒತ್ತಾಯಿಸಿದ್ದಾರೆ. ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ, ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್‌, ಕಾಂಗ್ರೆಸ್‌ ಶಾಸಕರಾದ ಪ್ರಿಯಾಂಕ್‌ ಖರ್ಗೆ, ಕೃಷ್ಣ ಬೈರೇಗೌಡ ಸೇರಿದಂತೆ ಹಲವರು ಈ ಟ್ವಿಟರ್‌ ಅಭಿಯಾನದಲ್ಲಿ ಪಾಲ್ಗೊಂಡಿದ್ದಾರೆ.

ಕೋವಿಡ್‌ನಿಂದ ತಮ್ಮವರನ್ನು ಕಳೆದುಕೊಂಡ ಅನೇಕರು ಈ ಅಭಿಯಾನದಲ್ಲಿ ಪಾಲ್ಗೊಂಡು, ಆರೋಗ್ಯ ಸಚಿವರ ವಿರುದ್ಧದ ತಮ್ಮ ಆಕ್ರೋಶವನ್ನು ಟ್ವಿಟರ್‌ನಲ್ಲಿ ಹೊರಹಾಕಿದ್ದಾರೆ. ಸುಧಾಕರ್‌ ವಿರುದ್ಧದ ಅಭಿಯಾನ ಅಖಿಲ ಭಾರತ ಮಟ್ಟದಲ್ಲಿ ಸೋಮವಾರ 'ಟಾಪ್‌ ಟ್ರೆಂಡಿಂಗ್‌' ಪಟ್ಟಿಯಲ್ಲಿ ಇತ್ತು.

'#Resign Killer Sudhakar' ಹ್ಯಾಷ್‌ ಟ್ಯಾಗ್‌ನಲ್ಲೂ ಸುಧಾಕರ್‌ ವಿರುದ್ಧ ಅಭಿಯಾನ ನಡೆದಿದೆ. ಇದೇ ಘಟನೆಗೆ ಸಂಬಂಧಿಸಿದಂತೆ ಮುಖ್ಯಮಂತ್ರಿ ಬಿ.ಎಸ್‌. ಯಡಿಯೂರಪ್ಪ ರಾಜೀನಾಮೆಗೆ ಆಗ್ರಹಿಸಿ '#ResignBSY' ಹ್ಯಾಷ್‌ ಟ್ಯಾಗ್‌ ಅಡಿಯಲ್ಲಿ ಟ್ವಿಟರ್‌ನಲ್ಲಿ ಅಭಿಯಾನ ನಡೆದಿದೆ.

ಸುದ್ದಿ 2 ನಿಮಿಷ

'ಮಲ್ಲೇಶ್ವರದಲ್ಲಿ ಕೋವಿಡ್‌ ಕಡಿವಾಣಕ್ಕೆ ಪಣ'

ಬೆಂಗಳೂರು: ಕೊರೊನಾ ಸೋಂಕು ವ್ಯಾಪಕವಾಗಿ ಹರಡದಂತೆ ಮಲ್ಲೇಶ್ವರದಲ್ಲಿ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಲಾಗಿದೆ.

ಕ್ಷೇತ್ರದಲ್ಲಿ ಲಭ್ಯವಿರುವ ವೈದ್ಯರು, ಅಧಿಕಾರಿಗಳು, ಆರೋಗ್ಯ ಸಿಬ್ಬಂದಿ ಹಾಗೂ ವಾರ್ಡ್‌ವಾರು, ಮಂಡಲವಾರು ಬಿಜೆಪಿ ಕಾರ್ಯಕರ್ತರು, ಪದಾಧಿಕಾರಿಗಳ ಪಡೆಯನ್ನು ಉಪಮುಖ್ಯಮಂತ್ರಿ ಡಾ.ಸಿ.ಎನ್‌ ಅಶ್ವತ್ಥ ನಾರಾಯಣ ಕಟ್ಟಿದ್ದಾರೆ.

ಇವರೆಲ್ಲರೂ ಸೋಂಕಿತರ ಜತೆ ಸಂಪರ್ಕದಲ್ಲಿದ್ದು, ಆರೋಗ್ಯ ವ್ಯವಸ್ಥೆ ಹಾಗೂ ಸೋಂಕಿತರ ನಡುವೆ ಸೇತುವೆಯಾಗಿ ಕೆಲಸ ಮಾಡುತ್ತಿದ್ದಾರೆ. ಕೋವಿಡ್‌ ಪರೀಕ್ಷೆ ನಡೆಸಿದ 10ರಿಂದ 12 ತಾಸುಗಳಲ್ಲಿಯೇ ಫಲಿತಾಂಶ ನೀಡಲು ಕ್ರಮ ಕೈಗೊಳ್ಳಲಾಗಿದೆ.



ಕೋವಿಡ್‌ ಪಾಸಿಟಿವ್‌ ಬಂದವರಿಗೆ, ಮನೆಯಲ್ಲೇ ಕ್ವಾರಂಟೈನ್‌ ಆಗಿರುವ ಜನರಿಗೆ ಪರೀಕ್ಷಾ ವರದಿ ಬಂದ ಒಂದು ಗಂಟೆಯೊಳಗೆ ಔಷಧಿಯ ಕಿಟ್‌ ಪೂರೈಕೆ ಮಾಡಲಾಗುತ್ತಿದೆ. ಅಶಕ್ತರಿದ್ದರೆ, ಅವರಿಗೆ ಆಹಾರ, ತರಕಾರಿ ಮತ್ತಿತರೆ ಜೀವನಾವಶ್ಯಕ ವಸ್ತುಗಳನ್ನು ತಲುಪಿಸಲಾಗುತ್ತಿದೆ.

ಆರೋಗ್ಯ ಕೇಂದ್ರಕ್ಕೆ ಬರಲಾಗದ ಹಿರಿಯರು, ಮಹಿಳೆಯರಿಗೆ ಅವರವರ ಮನೆಗೇ ತೆರಳಿ ಔಷಧಿ ನೀಡಿ ಅಥವಾ ನರ್ಸ್‌ಗಳನ್ನು ಕರೆದೊಯ್ದು ಚುಚ್ಚುಮದ್ದು ಕೊಡಿಸಲಾಗುತ್ತಿದೆ.

ಸಹಾಯವಾಣಿ ಮೂಲಕ ಬರುವ ಬೇಡಿಕೆಗಳನ್ನು ಈಡೇರಿಸುವ ಕೆಲಸವನ್ನೂ ಈ ತಂಡ ಮಾಡುತ್ತಿದೆ. ಎಲ್ಲ ಕರಪತ್ರಗಳಲ್ಲಿ ಆಯಾ ಪ್ರದೇಶದ ಪ್ರಾಥಮಿಕ ಆರೋಗ್ಯ ಕೇಂದ್ರದ ದೂರವಾಣಿ ಸಂಖ್ಯೆ, ಬಿಜೆಪಿ ಮಂಡಳ ಹಾಗೂ ವಾರ್ಡ್‌ ಅಧ್ಯಕ್ಷರ ಮೊಬೈಲ್‌ ಸಂಖ್ಯೆಗಳನ್ನು ಮುದ್ರಿಸಲಾಗಿರುತ್ತದೆ.

ಬ್ರಿಗೇಡ್‌ ರಸ್ತೆ: ರಿಟೇಲ್‌ ಬಾಡಿಗೆ ದರ ಇಳಿಕೆ

ನವದೆಹಲಿ (ಪಿಟಿಐ): ಬೆಂಗಳೂರಿನ ಬ್ರಿಗೇಡ್‌ ರಸ್ತೆಯಲ್ಲಿ ರಿಟೇಲ್‌ ಮಳಿಗೆಗಳ ತಿಂಗಳ ಬಾಡಿಗೆ ದರವು 2020ರ ಮೊದಲ ತ್ರೈಮಾಸಿಕಕ್ಕೆ ಹೋಲಿಸಿದರೆ 2021ರ ಮೊದಲ ತ್ರೈಮಾಸಿಕದಲ್ಲಿ ಶೇಕಡ 8ರಿಂದ ಶೇ 17ರವರೆಗೆ ಇಳಿಕೆ ಆಗಿದೆ ಎಂದು ಆಸ್ತಿ ಸಲಹಾ ಸಂಸ್ಥೆ ಅನರಾಕ್‌ ವರದಿ ಹೇಳಿದೆ.

ಪ್ರತಿ ಚದರ ಅಡಿಗೆ ಸದ್ಯ ತಿಂಗಳ ಸರಾಸರಿ ಬಾಡಿಗೆ ದರವು ₹ 250ರಿಂದ ₹ 275ರ ನಡುವೆ ಇದೆ. ಇಂದಿರಾನಗರದಲ್ಲಿ ಬಾಡಿಗೆ ದರವು ಪ್ರತಿ ಚದರ ಅಡಿಗೆ ₹ 225ರಿಂದ ₹ 250ರ ನಡುವೆ ಇದೆ ಎಂದು ಸಂಸ್ಥೆ ಹೇಳಿದೆ.

ಇದೇ ರೀತಿ ದೆಹಲಿ, ಪುಣೆ, ಕೋಲ್ಕತ್ತ, ಮುಂಬೈನಲ್ಲಿಯೂ ರಿಟೇಲ್‌ ಬಾಡಿಗೆ ದರವು ಇಳಿಕೆ ಕಂಡಿದೆ. ಹೈದರಾಬಾದ್‌ನಲ್ಲಿ ಮಾತ್ರ ಬಾಡಿಗೆ ದರದಲ್ಲಿ ಏರಿಕೆ ಕಂಡುಬಂದಿದೆ.

ಕೋವಿಡ್‌–19 ಸಾಂಕ್ರಾಮಿಕದಿಂದಾಗಿ 2020ರ ಆರಂಭದಲ್ಲಿ ರಿಟೇಲ್‌ ವಲಯವು ಹೆಚ್ಚಿನ ಹಾನಿ ಎದುರಿಸಿತು. ಲಾಕ್‌ಡೌನ್‌ನಿಂದಾಗಿ ಮಾರಾಟವು ಕುಸಿದುಬಿತ್ತು. ಆ ಬಳಿಕ ಕೆಲವೇ ತಿಂಗಳುಗಳಲ್ಲಿ ರಿಟೇಲ್‌ ಮಳಿಗೆಗಳು ಬಾಗಿಲು ಮುಚ್ಚಿದವು ಅಥವಾ ತಮ್ಮ ವಹಿವಾಟು ವಿಸ್ತರಿಸುವ ಯೋಜನೆಯನ್ನು ಕಡಿತಗೊಳಿಸಿದವು ಎಂದು ಅನರಾಕ್‌ ಸಂಸ್ಥೆಯ ರಿಟೇಲ್‌ ವಿಭಾಗದ ಸಿಒಒ ಪಂಕಜ್‌ ರಂಜನ್‌ ತಿಳಿಸಿದ್ದಾರೆ.

ನೂರಕ್ಕೆ ನೂರರಷ್ಟು ಕೆಲಸ ಕಷ್ಟ: ಆರೋಗ್ಯ ಸಚಿವ ಸುಧಾಕರ್‌

ಪ್ರಜಾವಾಣಿ ವಾರ್ತೆ



ಕೆ. ಸುಧಾಕರ್‌

ಮಂಡ್ಯ: 'ಕೋವಿಡ್‌ ನಿರ್ವಹಣೆಯಲ್ಲಿ ನೂರಕ್ಕೆ ನೂರರಷ್ಟು ಸಮರ್ಪಕವಾಗಿ ಕೆಲಸ ಮಾಡುವುದು ಕಷ್ಟ. ಕೆಲವು ನ್ಯೂನತೆಗಳಿರುವುದು ನಿಜ, ಆದರೂ ಅವುಗಳನ್ನು ಮೀರಿ ಕೆಲಸ ಮಾಡುತ್ತಿದ್ದೇವೆ' ಎಂದು ಆರೋಗ್ಯ ಸಚಿವ ಕೆ.ಸುಧಾಕರ್‌ ಸೋಮವಾರ ಇಲ್ಲಿ ಹೇಳಿದರು.

ಮುಖ್ಯಾಂಶಗಳು

- ಕೋವಿಡ್‌ ನಿರ್ವಹಣೆಯಲ್ಲಿ ನ್ಯೂನತೆಯಿರುವುದು ನಿಜ
- ಸಹಾಯಕ್ಕಾಗಿ ಕೇಂದ್ರದ ಜತೆ ನಿರಂತರ ಸಂಪರ್ಕ

ಸುದ್ದಿಗಾರರ ಜೊತೆ ಮಾತನಾಡಿದ ಅವರು, 'ಕೋವಿಡ್‌ ಸಾಂಕ್ರಾಮಿಕ ರೋಗವಾಗಿದ್ದು ಎಲ್ಲವನ್ನೂ ಸರಿಯಾಗಿ ನಿರ್ವಹಿಸಲು ಸಾಧ್ಯವಾಗುತ್ತಿಲ್ಲ. ಇದರ ನಡುವೆಯೂ ಜನರ ಜೀವ ಉಳಿಸುವ ಕೆಲಸ ಮಾಡುತ್ತಿದ್ದೇವೆ. ರಾಜ್ಯಕ್ಕೆ ಅವಶ್ಯಕತೆಯುಳ್ಳ ಆಮ್ಲಜನಕ ಹಾಗೂ ಇತರ ವೈದ್ಯಕೀಯ ಸಹಾಯಕ್ಕಾಗಿ ಕೇಂದ್ರ ಸರ್ಕಾರದೊಂದಿಗೆ ನಿರಂತರ ಸಂಪರ್ಕದಲ್ಲಿದ್ದೇವೆ' ಎಂದರು.

'ಗ್ರಾಮೀಣ ಭಾಗದಲ್ಲೂ ಕೋವಿಡ್‌ ಪ್ರಕರಣ ಹೆಚ್ಚಾಗುತ್ತಿರುವ ಹಿನ್ನೆಲೆಯಲ್ಲಿ ಬೂತ್‌ ಮಟ್ಟದಲ್ಲಿ ಕಾರ್ಯಪಡೆ ರಚನೆ ಮಾಡಿಕೊಳ್ಳಲು ಸೂಚನೆ ನೀಡಲಾಗಿದೆ. ಸಮಿತಿಯಲ್ಲಿ ಶಿಕ್ಷಣ, ಕಂದಾಯ ಸೇರಿದಂತೆ ವಿವಿಧ ಇಲಾಖೆಯ ಸಿಬ್ಬಂದಿಯನ್ನು ಸೇರಿಸಿಕೊಂಡು ಸೋಂಕು ನಿಯಂತ್ರಣ ಮಾಡಲು ಸೂಚಿಸಲಾಗಿದೆ' ಎಂದರು.

ನೆರೆಯ ಜಿಲ್ಲೆಗಳಲ್ಲೇ ಹೊಂದಾಣಿಕೆ ಕೊರತೆ

ಮೈಸೂರು ಜಿಲ್ಲಾಧಿಕಾರಿ ರೋಹಿಣಿ ಸಿಂಧೂರಿ ಸಿಲಿಂಡರ್‌ ತಡೆ ಹಿಡಿದರೇ?

• ಕೆ. ಓಂಕಾರಮೂರ್ತಿ



ರೋಹಿಣಿ



ಎಂ.ಆರ್‌.ರವಿ

ಚಾಮರಾಜನಗರ: ಆಮ್ಲ ಜನಕ ಮತ್ತು ಸಿಲಿಂಡರ್‌ ಪೂರೈಕೆ ಹಾಗೂ ಹಂಚಿಕೆ ವಿಚಾರದಲ್ಲಿ ನೆರೆಯ ಜಿಲ್ಲೆಗಳಲ್ಲೇ ಹೊಂದಾಣಿಕೆ ಕೊರತೆ ಇರುವುದು ಬಹಿರಂಗವಾಗಿದ್ದು, ಹಲವು ಜೀವಗಳ ಸಾವಿಗೂ ಕಾರಣವಾಗಿದೆ.

ಜಿಲ್ಲೆಗಳ ನಡುವೆ ಹೊಂದಾಣಿಕೆ ಇಲ್ಲದಿರುವ ವಿಚಾರವಾಗಿ ಆರೋಗ್ಯ ಹಾಗೂ ವೈದ್ಯಕೀಯ ಶಿಕ್ಷಣ ಸಚಿವ ಡಾ.ಕೆ.ಸುಧಾಕರ್‌ ಕೂಡ ಅಸಮಾಧಾನ ಹೊರಹಾಕಿದ್ದಾರೆ.

ಕೆಲ ದಿನಗಳ ಹಿಂದೆ ವೈದ್ಯಕೀಯ ಆಮ್ಲಜನಕ ಉತ್ಪಾದಕರು ಹಾಗೂ ರೀಫಿಲ್ಲಿಂಗ್‌ ಸಂಸ್ಥೆಗಳೊಂದಿಗೆ ಸಭೆ ನಡೆಸಿದ್ದ ಮೈಸೂರು ಜಿಲ್ಲಾಧಿಕಾರಿ ರೋಹಿಣಿ ಸಿಂಧೂರಿ, 'ಜಿಲ್ಲೆಗೆ ಅಗತ್ಯವಿರುವ ವೈದ್ಯಕೀಯ ಆಮ್ಲಜನಕ ಪೂರೈಸುವುದು ಈ ಸಂಸ್ಥೆಗಳ ಜವಾಬ್ದಾರಿ. ಯಾವ ಕಾರಣಕ್ಕೂ ಆಮ್ಲಜನಕ ಕೊರತೆಯಾಗದಂತೆ ನೋಡಿಕೊಳ್ಳಬೇಕು' ಎಂದು ಸೂಚನೆ ನೀಡಿದ್ದರು.

'ಮೈಸೂರಿನಿಂದ ನಮಗೆ ಸಮರ್ಪಕವಾಗಿ ಸಿಲಿಂಡರ್‌ ಪೂರೈಕೆ ಆಗುತ್ತಿಲ್ಲ ಎಂಬ ವಿಚಾರವನ್ನು ಮುಖ್ಯ ಕಾರ್ಯದರ್ಶಿ ಗಮನಕ್ಕೆ ತಂದಿದ್ದು, ಅಗತ್ಯಕ್ಕೆ ತಕ್ಕಂತೆ ನಮಗೆ ಪೂರೈಕೆ ಮಾಡಲು ಸೂಚನೆ ನೀಡುವಂತೆ ಕೋರಿದ್ದೇನೆ' ಎಂದು ಚಾಮರಾಜನಗರ ಜಿಲ್ಲಾಧಿಕಾರಿ ಎಂ.ಆರ್‌.ರವಿ ಹೇಳಿರುವುದು ಈ ಅನುಮಾನಗಳನ್ನು ಪುಷ್ಟೀಕರಿಸಿದೆ. ಈ ಸಂಬಂಧ ಮಾಹಿತಿ ಪಡೆಯಲು ಪ್ರಯತ್ನಿಸಿದಾಗ ರೋಹಿಣಿ ಸಿಂಧೂರಿ ಅವರು ಕರೆ ಸ್ವೀಕರಿಸಲಿಲ್ಲ. ಬದಲಾಗಿ ಜಿಲ್ಲಾಡಳಿತದಿಂದ ಪ್ರಕಟಣೆ ಹೊರಡಿಸಲಾಗಿದೆ.

'ಆಮ್ಲಜನಕ ಲಿಕ್ವಿಡ್‌ ಬಳ್ಳಾರಿಯಿಂದ ಚಾಮರಾಜನಗರಕ್ಕೆ ಬರಬೇಕಿತ್ತು. ಅದು ಸರಿಯಾದ ಸಮಯದಲ್ಲಿ ಬಂದಿದೆಯೋ ಇಲ್ಲವೋ ಗೊತ್ತಿಲ್ಲ. ಚಾಮರಾಜನಗರದ ಜಿಲ್ಲಾಡಳಿತದ ಬೇಡಿಕೆಯಂತೆ ಮಾನವೀಯ ದೃಷ್ಟಿಯಿಂದ ಆಮ್ಲಜನಕ ಸಿಲಿಂಡರ್‌ ಕಳುಹಿಸಲಾಗಿದೆ. ಮೈಸೂರಿನ ಸದರನ್‌ ಗ್ಯಾಸ್‌ನಿಂದ 210 ಹಾಗೂ ಮೈಸೂರು ಜಿಲ್ಲಾ ಆಸ್ಪತ್ರೆಯಿಂದ 40 ಸಿಲಿಂಡರ್‌ ರವಾನಿಸಲಾಗಿದೆ' ಎಂದು ಜಿಲ್ಲಾಡಳಿತ ತಿಳಿಸಿದೆ.

ರಾತ್ರಿಯೇ ಪ್ರತಾಪಸಿಂಹ ಟ್ವೀಟ್‌: ಚಾಮರಾಜನಗರದಲ್ಲಿ ಆಮ್ಲಜನಕದ ಕೊರತೆಯಾಗಿರುವ ವಿಷಯ ತಿಳಿದ ಸಂಸದ ಪ್ರತಾಪಸಿಂಹ, ಭಾನುವಾರ ರಾತ್ರಿ 11.25ಕ್ಕೆ ಟ್ವೀಟ್‌ ಮಾಡಿದ್ದಾರೆ. ಅಲ್ಲಿಯ ಜಿಲ್ಲಾಧಿಕಾರಿ ಎಂ.ಆರ್‌. ರವಿ ಜೊತೆ ಮಾತನಾಡಿ, ತಕ್ಷಣವೇ ಸಿಲಿಂಡರ್‌ ಪೂರೈಸಲು ವ್ಯವಸ್ಥೆ ಮಾಡಿದ್ದಾರೆ. ಆದರೆ, ಮೈಸೂರಿನ ಅಧಿಕಾರಿಗಳು ಸಿಲಿಂಡರ್‌ಗಳನ್ನು ಚಾಮರಾಜನಗರ ತಲುಪಿಸಿದ್ದೇ ಮಧ್ಯ ರಾತ್ರಿ 2 ಗಂಟೆಗೆ ಎನ್ನಲಾಗಿದೆ.

ಮೈಸೂರಿನಿಂದ ಸರಿಯಾಗಿ ಆಮ್ಲಜನಕ ಪೂರೈಕೆ ಆಗಿಲ್ಲ ಎಂಬ ವಿಚಾರ ಗೊತ್ತಾಗಿ, ರೋಗಿಗಳ ಸಂಬಂಧಿಕರು,'ಮಾನವೀಯತೆ ಇಲ್ಲದಿದ್ದರೆ ಹೇಗೆ? ಮೈಸೂರು–ಚಾಮರಾಜನಗರ ಏನು ಭಾರತ–ಪಾಕಿಸ್ತಾನವೇ?' ಎಂದು ಪ್ರಶ್ನಿಸಿದರು. ಇದರೊಂದಿಗೆ, ಆಮ್ಲಜನಕ ಕೊರತೆ ಬಗ್ಗೆ ಚಾಮರಾಜನಗರ ಜಿಲ್ಲಾಡಳಿತಕ್ಕೆ ಮೊದಲೇ ಮಾಹಿತಿ ಇದ್ದರೂ ಉದಾಸೀನ ಮನೋಭಾವ ತೋರಿರುವುದಕ್ಕೂ ಟೀಕೆ ವ್ಯಕ್ತವಾಗುತ್ತಿದೆ.

'ಈ ಘಟನೆಗೂ ಮುನ್ನ, 6 ಮಂದಿ ಸೋಂಕಿತರು ಆಮ್ಲಜನಕ ಕೊರತೆಯಿಂದಲೇ ಮೃತಪಟ್ಟಿದ್ದಾರೆ. ಆದರೆ, ಅದನ್ನು ಸೋಂಕು ತೀವ್ರಗೊಂಡು ಮೃತಪಟ್ಟಿದ್ದಾರೆ ಎಂದು ಬಿಂಬಿಸಿದ್ದಾರೆ' ಎಂದು ಬಿಜೆಪಿ ಮುಖಂಡರೊಬ್ಬರು ಮಾಹಿತಿ ನೀಡಿದರು.

ಮುಖ್ಯಾಂಶಗಳು

- ಜಿಲ್ಲಾಧಿಕಾರಿಗಳ ನಡುವೆ ಸಮನ್ವಯ ಕೊರತೆ
- ಮೈಸೂರು–ಚಾಮರಾಜನಗರ ಜಿಲ್ಲಾಡಳಿತದ ಹೇಳಿಕೆಗಳಲ್ಲಿ ಗೊಂದಲ

ಸರ್ಕಾರ ಸತ್ತಿದೆ: ಡಿ.ಕೆ. ಶಿವಕುಮಾರ್‌

ಬೆಂಗಳೂರು: 'ರಾಜ್ಯ ಸರ್ಕಾರ, ಮುಖ್ಯಮಂತ್ರಿ, ಸಚಿವರ ಮೇಲೆ ನಮಗೆ ನಂಬಿಕೆ ಇಲ್ಲ. ಸರ್ಕಾರ ಸತ್ತು ಹೋಗಿದೆ. ಜನರನ್ನೂ ಸಾಯಿಸುತ್ತಿದೆ' ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್‌ ಆಕ್ರೋಶ ವ್ಯಕ್ತಪಡಿಸಿದರು.

ಪಕ್ಷದ ನಿಯೋಗದ ಜೊತೆ ಮುಖ್ಯ ಕಾರ್ಯದರ್ಶಿ ಪಿ. ರವಿಕುಮಾರ್‌ ಅವರನ್ನು ಸೋಮವಾರ ಭೇಟಿಯಾದ ಬಳಿಕ ಮಾತನಾಡಿದ ಅವರು, 'ಜನರ ಸಾವು ನೋವು ತಂದಿದೆ. ವಾಸ್ತವಾಂಶ ತಿಳಿಯಲು ಮುಖ್ಯ ಕಾರ್ಯದರ್ಶಿಯನ್ನು ಭೇಟಿ ಮಾಡಿದ್ದೇವೆ. ಅನೇಕ ವಿಚಾರಗಳನ್ನು ಅವರ ಜೊತೆ ಚರ್ಚೆ ಮಾಡಿದ್ದೇವೆ' ಎಂದರು.

ಔಷಧೀಯ ಸಸ್ಯಗಳ ಕಿಟ್‌

ಬೆಂಗಳೂರು: ಔಷಧೀಯ ಮಹತ್ವ ಹೊಂದಿರುವ ಆರು ಸಸಿಗಳನ್ನು ಕಿಟ್‌ ರೂಪದಲ್ಲಿ ಮಾರಾಟ ಮಾಡಲು ಮೈಸೂರು ಮೂಲದ 'ಲ್ಯಾಬ್‌ಲ್ಯಾಂಡ್‌ ಬಯೋಟೆಕ್‌' ಮುಂದಾಗಿದೆ. ಈ ಕಿಟ್‌ನಲ್ಲಿ ಕೃಷ್ಣತುಳಸಿ, ಅಶ್ವಗಂಧ, ಅಮೃತ ಬಳ್ಳಿ, ಬ್ರಾಹ್ಮಿ, ಒಂದೆಲಗ ಮತ್ತು ದೊಡ್ಡಪತ್ರೆ ಸಸಿಗಳು ಇರುತ್ತವೆ.

ಅಮೆಜಾನ್‌ ಮೂಲಕ ಈ ಕಿಟ್‌ ಖರೀದಿಸಬಹುದು.

ಆರೂ ಸಸ್ಯಗಳ ಮಹತ್ವ ಏನು, ಅವುಗಳನ್ನು ಮನೆಯಲ್ಲಿ ಬೆಳೆಸುವುದು ಹೇಗೆ ಎಂಬುದನ್ನು ವಿವರಿಸುವ ಪುಸ್ತಿಕೆಯೊಂದು ಕಿಟ್‌ ಜೊತೆಯಲ್ಲಿ ಅಡಕವಾಗಿರುತ್ತದೆ ಎಂದು ಕಂಪನಿ ಹೇಳಿದೆ. 'ಗ್ರಾಹಕರಿಗೆ ಔಷಧೀಯ ಮಹತ್ವದ ಸಸಿಗಳನ್ನು ಮಾರಾಟ ಮಾಡುವ, ಅವುಗಳ ಕುರಿತು ವೈಜ್ಞಾನಿಕ ಮಾಹಿತಿ ನೀಡುವ ಕೊರತೆ ಇದೆ' ಎಂದು ಕಂಪನಿ ಹೇಳಿದೆ.

'ಜಿಯೊ' ನೀರು ಆಮಿಷವೊಡ್ಡಿ ₹ 2.98 ಲಕ್ಷ ವಂಚನೆ

ಬೆಂಗಳೂರು: 'ಜಿಯೊ' ಕುಡಿಯುವ ನೀರು ಬಾಟಲಿಗಳ ವಿತರಣಾ ಹಕ್ಕು ನೀಡುವುದಾಗಿ ಆಮಿಷವೊಡ್ಡಿ ನಗರದ ನಿವಾಸಿಯೊಬ್ಬರಿಂದ ₹ 2.98 ಲಕ್ಷ ಪಡೆದು ವಂಚಿಸಲಾಗಿದ್ದು, ಈ ಸಂಬಂಧ ಉತ್ತರ ವಿಭಾಗದ ಸೈಬರ್‌ ಕ್ರೈಂ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ಪ್ಯಾಲೇಸ್‌ ಗುಟ್ಟಹಳ್ಳಿ ಮುಖ್ಯರಸ್ತೆ ನಿವಾಸಿಯಾಗಿರುವ 47 ವರ್ಷದ ವ್ಯಕ್ತಿ ದೂರು ನೀಡಿದ್ದಾರೆ. ಅಪರಿಚಿತರ ವಿರುದ್ಧ ಎಫ್‌ಐಆರ್‌ ದಾಖಲಿಸಿಕೊಳ್ಳಲಾಗಿದೆ' ಎಂದು ಪೊಲೀಸ್‌ ಮೂಲಗಳು ಹೇಳಿವೆ.

'ದೂರುದಾರರಿಗೆ ಕರೆ ಮಾಡಿದ್ದ ಆರೋಪಿ, 'ನಾನು ಜಿಯೊ ಕಂಪನಿ ಪ್ರತಿನಿಧಿ. ಜಿಯೊ ಕುಡಿಯುವ ನೀರಿನ ಬಾಟಲಿ ವಿತರಣಾ ಹಕ್ಕುಗಳನ್ನು ನೀಡಲಾಗುತ್ತಿದೆ. ನಿಮಗೆ ಆಸಕ್ತಿ ಇದ್ದರೆ ತಿಳಿಸಿ' ಎಂದಿದ್ದ. ಅದನ್ನು ನಂಬಿದ್ದ ದೂರುದಾರ, ಆರೋಪಿ ಕೇಳಿದ್ದ ಮಾಹಿತಿ ನೀಡಿದ್ದ.'

'ನೋಂದಣಿ ಶುಲ್ಕ ಹಾಗೂ ಇತರೆ ಶುಲ್ಕ ಪಾವತಿ ಮಾಡಬೇಕೆಂದು ಹೇಳಿದ್ದ ಆರೋಪಿ, ದೂರುದಾರರಿಂದ ಹಂತ ಹಂತವಾಗಿ ₹ 2.98 ಲಕ್ಷ ಪಡೆದಿದ್ದ. ಅದಾದ ನಂತರ ನಾಪತ್ತೆಯಾಗಿದ್ದಾನೆ' ಎಂದೂ ಮೂಲಗಳು ತಿಳಿಸಿವೆ.

ಸುಮ್ಮನಹಳ್ಳಿ ವಿದ್ಯುತ್ ಚಿತಾಗಾರ: ನಾಳೆಯಿಂದ ತಾತ್ಕಾಲಿಕ ಸ್ಥಗಿತ

ಬೆಂಗಳೂರು: ರಾಜರಾಜೇಶ್ವರಿನಗರ ವಲಯ ವ್ಯಾಪ್ತಿಯ ಸುಮ್ಮನಹಳ್ಳಿ ವಿದ್ಯುತ್ ಚಿತಾಗಾರವನ್ನು ತುರ್ತು ನಿರ್ವಹಣಾ ಕಾರ್ಯದ ಸಲುವಗಿ ಇದೇ 4ರಿಂದ 10ರವರೆಗೆ ಮುಚ್ಚಲಾಗುತ್ತಿದೆ.

ಈ ಚಿತಾಗಾರರದ ಯಂತ್ರಗಳನ್ನು (ಫರ್ನೇಸ್) ಬದಲಾಯಿಸಬೇಕಾಗಿದೆ. ಹಾಗಾಗಿ ಚಿತಾಗಾರದಲ್ಲಿ ಅಂತ್ಯಕ್ರಿಯೆಗಳನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಲಾಗಿರುತ್ತದೆ ಎಂದು ರಾಜರಾಜೇಶ್ವರಿ ನಗರ ವಲಯದ ಕಾರ್ಯಪಾಲಕ ಅಭಿಯಂತರರು (ವಿದ್ಯುತ್) ತಿಳಿಸಿದ್ದಾರೆ.

ಈ ಚಿತಾಗಾರವನ್ನು ಕೋವಿಡ್‌ನಿಂದ ಸತ್ತವರ ಅಂತ್ಯಕ್ರಿಯೆಗೆ ಕಾಯ್ದಿರಿಸಲಾಗಿತ್ತು. ಇತ್ತೀಚಿನ ದಿನಗಳಲ್ಲಿ ಇಲ್ಲಿ ನಿತ್ಯವು 20ಕ್ಕೂ ಅಧಿಕ ಮೃತದೇಹಗಳ ಅಂತ್ಯಕ್ರಿಯೆ ನಡೆಸಲಾಗುತ್ತಿತ್ತು. ಹಾಗಾಗಿ ಅತಿ ಒತ್ತಡದಿಂದ ಇಲ್ಲಿನ ಫರ್ನೇಸ್‌ಗಳು ಹದಗೆಟ್ಟಿದ್ದವು.

ಕಳೆದ 15 ದಿನಗಳಿಂದ ನಿತ್ಯವೂ 100ರಿಮದ 150 ಮಂದಿ ಕೋವಿಡ್‌ನಿಮದ ಸಾವಿಗೀಡಾಗುತ್ತಿದ್ದಾರೆ. ಸೋಮವಾರವೂ ನಗರದಲ್ಲಿ ನಗರದಲ್ಲಿ 115 ಮಂದಿ ಕೋವಿಡ್‌ನಿಂದ ಮೃತಪಟ್ಟಿದ್ದಾರೆ. ಈ ಚಿತಾಗಾರವನ್ನು ಮುಚ್ಚುತ್ತಿರುವುದರಿಂದ, ಕೋವಿಡ್‌ನಿಂದ ಸತ್ತವರ ಅಂತ್ಯಕ್ರಿಯೆಗೆ ಮೀಸಲಿಟ್ಟ ಇತರ ಚಿತಾಗಾರಗಳ ಮೇಲೆ ಹೆಚ್ಚಿನ ಒತ್ತಡ ಸೃಷ್ಟಿಯಾಗಲಿದೆ.

1.49 ಲಕ್ಷ ಮಂದಿಯ ಮಾದರಿ ಪರೀಕ್ಷೆ • ಮರಣ ಪ್ರಮಾಣ ದರ ಶೇ 0.53ಕ್ಕೆ ಇಳಿಕೆ

24 ಗಂಟೆ: 44 ಸಾವಿರ ಪ್ರಕರಣ

ಪ್ರಜಾವಾಣಿ ವಾರ್ತೆ


ಬೆಂಗಳೂರು: ರಾಜ್ಯದಲ್ಲಿ ಕೋವಿಡ್ ಪೀಡಿತರ ಸಂಖ್ಯೆ ಮತ್ತೆ 44 ಸಾವಿರದ ಗಡಿ ದಾಟಿದೆ. ಹಿಂದಿನ 24 ಗಂಟೆಗಳಲ್ಲಿ ಒಟ್ಟು 44,438 ಜನರಿಗೆ ಸೋಂಕು ತಗುಲಿರುವುದು ಸೋಮವಾರ ಖಾತರಿಯಾಗಿದೆ. ಈ ಪೈಕಿ ಬೆಂಗಳೂರಿನಲ್ಲೇ ಅರ್ಧದಷ್ಟು (22,112) ಪ್ರಕರಣಗಳು ವರದಿಯಾಗಿವೆ. ಸೋಂಕಿತರ ಪೈಕಿ ಮತ್ತೆ 239 ಮಂದಿ ಮೃತಪಟ್ಟಿದ್ದಾರೆ.

ಸೋಂಕು ಪಸರಿಸುವಿಕೆ ವೇಗ ಪಡೆದುಕೊಂಡಿದ್ದರೂ ಪರೀಕ್ಷೆಗಳ ಸಂಖ್ಯೆ ಇಳಿಮುಖಗೊಂಡಿದೆ. ಸೋಮವಾರ ಒಟ್ಟು 1.49 ಲಕ್ಷ ಮಂದಿಯ ಮಾದರಿಗಳನ್ನಷ್ಟೇ ಪರೀಕ್ಷೆಗೊಳಪಡಿಸಲಾಗಿದೆ. ಸೋಂಕು ದೃಢ ಪ್ರಮಾಣ ಶೇ 29.80ಕ್ಕೆ ಹೆಚ್ಚಿದ್ದು, ಮರಣ ಪ್ರಮಾಣ ದರ ಶೇ 0.53ಕ್ಕೆ ಇಳಿದಿದೆ.

ಧಾರವಾಡ (1,021), ಹಾಸನ (1,673), ಕಲಬುರ್ಗಿ (1,083) ಹಾಗೂ ಮಂಡ್ಯದಲ್ಲಿ (1,367) ಪ್ರಕರಣಗಳ ಸಂಖ್ಯೆ ದಿಢೀರ್ ಏರಿಕೆ ಕಂಡಿದೆ. ಮೈಸೂರಿನಲ್ಲಿ (2,685) ಕೊಂಚ ತಗ್ಗಿದ್ದರೆ, ತುಮಕೂರಿನಲ್ಲಿ (2,361) ದುಪ್ಪಟ್ಟಾಗಿದೆ. ಬಳ್ಳಾರಿ (990), ಬೆಂಗಳೂರು ಗ್ರಾಮಾಂತರ (815), ಚಾಮರಾಜನಗರ (724), ಚಿಕ್ಕಬಳ್ಳಾಪುರ (886), ದಕ್ಷಿಣ ಕನ್ನಡ (793), ಕೊಡಗು (628), ಕೋಲಾರ (656), ಕೊಪ್ಪಳ (617) ಮತ್ತು ಉತ್ತರ ಕನ್ನಡದಲ್ಲೂ (776) ಅಧಿಕ ಪ್ರಕರಣಗಳು ದಾಖಲಾಗಿವೆ.

ಕೋವಿಡ್ ಪೀಡಿತರ ಪೈಕಿ ಬೆಂಗಳೂರಿನಲ್ಲಿ 115 ಜನ ಮೃತರಾಗಿದ್ದಾರೆ. ಬಳ್ಳಾರಿ (13), ಚಾಮರಾಜನಗರ (19), ಹಾಸನ (13), ಮೈಸೂರು (14) ಜಿಲ್ಲೆಗಳಲ್ಲೂ ಅಧಿಕ ಮಂದಿ ಸಾವಿಗೀಡಾಗಿದ್ದಾರೆ. ಶಿವಮೊಗ್ಗ ಮತ್ತು ತುಮಕೂರಿನಲ್ಲಿ ಕ್ರಮವಾಗಿ 7 ಹಾಗೂ 8, ಬಾಗಲಕೋಟೆ, ಚಿಕ್ಕಬಳ್ಳಾಪುರ ಮತ್ತು ಕಲಬುರ್ಗಿಯಲ್ಲಿ ತಲಾ ಐದು ಮಂದಿ ಮೃತರಾಗಿದ್ದಾರೆ. ರಾಜ್ಯದಲ್ಲಿ ಕೋವಿಡ್ ಕಾಣಿಸಿಕೊಂಡ ದಿನದಿಂದ ಇಂದಿನವರೆಗೆ ಒಟ್ಟು 16,250 ಮಂದಿ ಈ ಪಿಡುಗಿಗೆ ಬಲಿಯಾಗಿದ್ದಾರೆ. ಸೋಮವಾರ ಅಸುನೀಗಿರುವವರ ಪೈಕಿ 60 ವರ್ಷ ಮೇಲ್ಪಟ್ಟವರೇ ಅಧಿಕ ಮಂದಿ ಇದ್ದು, ಇವರಲ್ಲಿ ಬಹುತೇಕರು ಉಸಿರಾಟದ ಸಮಸ್ಯೆಯಿಂದ ಬಳಲುತ್ತಿದ್ದರು ಎಂಬುದು ವರದಿಯಿಂದ ದೃಢಪಟ್ಟಿದೆ.

ಇಳಿಕೆಯ ಹಾದಿಯಲ್ಲಿ ಕೋವಿಡ್: ನಿರ್ಲಕ್ಷ್ಯ ಬೇಡ



ನವದೆಹಲಿ: ದೇಶದಲ್ಲಿ ಪ್ರತಿದಿನ ಸುಮಾರು 3.5 ಲಕ್ಷ ಕೋವಿಡ್ ಪ್ರಕರಣಗಳು ದೃಢವಾಗುತ್ತಿದ್ದರೂ, 'ಸೋಂಕಿನ ತೀವ್ರತೆ ಕಡಿಮೆಯಾಗುತ್ತಿರುವುದರ ಆರಂಭಿಕ ಲಕ್ಷಣಗಳು ಕಾಣಲಾರಂಭಿಸಿವೆ' ಎಂದು ಸರ್ಕಾರ ಹೇಳಿದೆ. ಆದರೆ ಮುನ್ನೆಚ್ಚರಿಕೆಯಲ್ಲಿ ಯಾವುದೇ ನಿರ್ಲಕ್ಷ್ಯ ತೋರಬಾರದು ಎಂದು ಎಚ್ಚರಿಸಿದೆ.

ದೇಶದಲ್ಲಿ ಕೋವಿಡ್ ಪೀಡಿತರ ಒಟ್ಟಾರೆ ಸಂಖ್ಯೆಯು ಸೋಮವಾರ 2 ಕೋಟಿ ದಾಟಿದೆ. ಮಾರ್ಚ್ 27ರ ನಂತರ ಈವರೆಗೆ ಸುಮಾರು 80 ಲಕ್ಷ ಮಂದಿಗೆ ಸೋಂಕು ತಗುಲಿದೆ. ಸೋಮವಾರ ಬೆಳಿಗ್ಗೆ ಕೊನೆಗೊಂಡ 24 ಗಂಟೆಗಳ ಅವಧಿಯಲ್ಲಿ 3.68 ಲಕ್ಷ ಮಂದಿಗೆ ಕೋವಿಡ್ ದೃಢಪಟ್ಟಿದೆ. ಮೇ 1ರಂದು 4.01 ಲಕ್ಷ ಮಂದಿ ಸೋಂಕಿತರಾಗಿದ್ದರು. ಅದಕ್ಕೆ ಹೋಲಿಸಿದರೆ ಮೇ 3ರಂದು ಸೋಂಕಿತರ ಸಂಖ್ಯೆ ಇಳಿಮುಖವಾಗಿದೆ.

'ದೆಹಲಿ, ಛತ್ತೀಸಗಡ, ಮಹಾರಾಷ್ಟ್ರ ಪಂಜಾಬ್ ಸೇರಿದಂತೆ 10 ರಾಜ್ಯಗಳಲ್ಲಿ ಸೋಂಕಿನ ತೀವ್ರತೆ ಕಡಿಮೆಯಾಗುತ್ತಿರುವುದರ ಆರಂಭಿಕ ಲಕ್ಷಣಗಳು ಕಾಣಿಸಿವೆ. ಆದರೆ ಇವು ಆರಂಭಿಕ ಲಕ್ಷಣಗಳು ಮಾತ್ರ. ಈಗಲೇ ಪರಿಸ್ಥಿತಿಯನ್ನು ವಿಶ್ಲೇಷಿಸಲಾಗದು' ಎಂದು ಕೇಂದ್ರದ ಆರೋಗ್ಯ ಸಚಿವಾಲಯ ತಿಳಿಸಿದೆ. ಇದೇ ಸ್ಥಿತಿಯನ್ನು ಮುಂದುವರಿಸಲು, ಕೋವಿಡ್ ನಿಯಮಾವಳಿಗಳನ್ನು ಕಟ್ಟುನಿಟ್ಟಾಗಿ ಪಾಲಿಸುವಂತೆ ಜನರಿಗೆ ಮನವಿ ಮಾಡಿದೆ.

ದ್ವಿತೀಯ ಪಿಯು ಪರೀಕ್ಷೆ ಮುಂದೂಡಲು ಆಗ್ರಹ

ಬೆಂಗಳೂರು: ರಾಜ್ಯದಲ್ಲಿ ಕೋವಿಡ್ ಪ್ರಕರಣಗಳ ಸಂಖ್ಯೆ ದಿನೇ ದಿನೇ ಹೆಚ್ಚುತ್ತಿರುವುದರಿಂದ ದ್ವಿತೀಯ ಪಿಯುಸಿ ಪರೀಕ್ಷೆಯನ್ನು ಮುಂದೂಡುವಂತೆ ರಾಜ್ಯ ಪದವಿ ಪೂರ್ವ ಕಾಲೇಜುಗಳ ಉಪನ್ಯಾಸಕರ ಸಂಘ ಹಾಗೂ ರಾಜ್ಯ ಸರ್ಕಾರಿ ನೌಕರರ ಸಂಘ ಆಗ್ರಹಿಸಿವೆ.

ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ಎಸ್. ಸುರೇಶ್‌ಕುಮಾರ್ ಅವರಿಗೆ ಮನವಿ ಸಲ್ಲಿಸಿರುವ ಸಂಘಗಳು, 'ಈಗಾಗಲೇ ನಿಗದಿಪಡಿಸಿರುವ ವೇಳಾಪಟ್ಟಿ ಪ್ರಕಾರ ಇದೇ 24ರಿಂದ ದ್ವಿತೀಯ ಪಿಯುಸಿ ಪರೀಕ್ಷೆಗಳು ಆರಂಭವಾಗಬೇಕಿದೆ. ಆದರೆ, ಸದ್ಯದ ಗಂಭೀರ ಮತ್ತು ಕ್ಲಿಷ್ಟಕರ ಸನ್ನಿವೇಶದಲ್ಲಿ ಪರೀಕ್ಷೆ ನಡೆಸುವುದು ವಿದ್ಯಾರ್ಥಿಗಳು ಮತ್ತು ಉಪನ್ಯಾಸಕರ ಆರೋಗ್ಯದ ದೃಷ್ಟಿಯಿಂದ ಸೂಕ್ತವಲ್ಲ. ಹೀಗಾಗಿ ಪರೀಕ್ಷೆಯನ್ನು ಮುಂದೂಡಬೇಕು' ಎಂದು ಮನವಿ ಮಾಡಿವೆ.



ಹಿರಿಯ ನಾಗರಿಕರೊಬ್ಬರು ಆಮ್ಲಜನಕ ವ್ಯವಸ್ಥೆ ಸಹಿತ ಸ್ಕ್ಯಾನಿಂಗ್ ಮಾಡಿಸಿಕೊಳ್ಳಲು ಬಂದ ದೃಶ್ಯ ಜಯನಗರದಲ್ಲಿ ಸೋಮವಾರ ಕಂಡುಬಂತು –ಪ್ರಜಾವಾಣಿ ಚಿತ್ರ

ರೋಗಿ ಸ್ಥಳಾಂತರ ಹೆಸರಿನಲ್ಲಿ ವಂಚನೆ

ಬೆಂಗಳೂರು: ಆಸ್ಪತ್ರೆಯ ತುರ್ತು ನಿಗಾ ಘಟಕದಲ್ಲಿದ್ದ (ಐಸಿಯು) ರೋಗಿಯನ್ನು ವಾರ್ಡ್‌ಗೆ ಸ್ಥಳಾಂತರಿಸಬೇಕೆಂದು ಹೇಳಿ ನಗರದ ಬ್ಯಾಂಕ್ ಉದ್ಯೋಗಿಯೊಬ್ಬರಿಂದ ₹ 39,999 ಪಡೆದು ವಂಚಿಸಲಾಗಿದೆ.

'ಜೆ.ಪಿ. ನಗರ 5ನೇ ಹಂತದ ನಿವಾಸಿಯಾಗಿರುವ 36 ವರ್ಷದ ಮಹಿಳೆ ದೂರು ನೀಡಿದ್ದಾರೆ. ಅಪರಿಚಿತರ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಲಾಗಿದೆ' ಎಂದು ದಕ್ಷಿಣ ವಿಭಾಗ ಸೈಬರ್ ಕ್ರೈಂ ಠಾಣೆ ಪೊಲೀಸ್ ಮೂಲಗಳು ತಿಳಿಸಿವೆ.

'ನಗರದ ಬ್ಯಾಂಕ್‌ನಲ್ಲಿ ಕೆಲಸ ಮಾಡುತ್ತಿರುವ ಮಹಿಳೆಯ ಸಂಬಂಧಿಕರೊಬ್ಬರು ಅನಾರೋಗ್ಯದಿಂದ ಬಳಲುತ್ತಿದ್ದು, ಅವರನ್ನು ಬಿಹಾರದ ಆಸ್ಪತ್ರೆಯೊಂದಕ್ಕೆ ದಾಖಲಿಸಲಾಗಿದೆ. ಅಲ್ಲಿಯ ವೈದ್ಯರು ಚಿಕಿತ್ಸೆ ನೀಡುತ್ತಿದ್ದು, ಸಂಬಂಧಿ ಜೊತೆ ದೂರುದಾರ ಮಹಿಳೆ ಆಗಾಗ ಮಾತನಾಡುತ್ತಿದ್ದರು.'

'ಇತ್ತೀಚೆಗೆ 9771****82 ಸಂಖ್ಯೆಯಿಂದ ದೂರುದಾರರ ಮೊಬೈಲ್‌ಗೆ ಕರೆ ಮಾಡಿದ್ದ ಆರೋಪಿ, ತಾನು ಆಸ್ಪತ್ರೆ ಸಿಬ್ಬಂದಿ ಎಂದು ಪರಿಚಯಿಸಿಕೊಂಡಿದ್ದ. 'ನಿಮ್ಮ ಸಂಬಂಧಿಯನ್ನು ಐಸಿಯುನಿಂದ ವಾರ್ಡ್‌ಗೆ ಸ್ಥಳಾಂತರಿಸಬೇಕು. ಅದಕ್ಕಾಗಿ ನೀವು ಕೆಲ ವೈದ್ಯಕೀಯ ಶುಲ್ಕಗಳನ್ನು ಪಾವತಿಸಬೇಕು' ಎಂದಿದ್ದ' ಎಂದೂ ಪೊಲೀಸ್ ಮೂಲಗಳು ಹೇಳಿವೆ.

'ಆರೋಪಿ ಮಾತು ನಂಬಿದ್ದ ದೂರುದಾರ ಮಹಿಳೆ, ಗೂಗಲ್ ಪೇ ಮೂಲಕ ₹ 39,999 ಪಾವತಿಸಿದ್ದರು. ಅದಾದ ನಂತರ ಆರೋಪಿ ನಾಪತ್ತೆಯಾಗಿದ್ದಾನೆ. ಆಸ್ಪತ್ರೆಯಲ್ಲಿ ವಿಚಾರಿಸಿದಾಗ, ತಮ್ಮ ಕಡೆಯವರು ಕರೆ ಮಾಡಿಲ್ಲವೆಂದು ಹೇಳಿದ್ದಾರೆ' ಎಂದೂ ತಿಳಿಸಿವೆ.

ಆರೈಕೆ ಕೇಂದ್ರಗಳಿಗೆ ಆಮ್ಲಜನಕ ಸಾಂದ್ರೀಕರಣ ಸಾಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿ ವತಿಯಿಂದ ಸ್ಥಾಪಿಸಲಾದ ಕೋವಿಡ್ ಆರೈಕೆ ಕೇಂದ್ರಗಳಲ್ಲಿ ರೋಗಿಗಳಿಗೆ ತುರ್ತು ಸಂದರ್ಭದಲ್ಲಿ ಆಮ್ಲಜನಕ ಒದಗಿಸುವ ಸಲುವಾಗಿ ಆಮ್ಲಜನಕ ಸಾಂದ್ರೀಕರಣ ಸಾಧನಗಳನ್ನು (ಆಕ್ಸಿಜನ್ ಕಾನ್ಸಂಟ್ರೇಟರ್) ಪೂರೈಸಲಾಗಿದೆ.

ಬಿಬಿಎಂಪಿ ವ್ಯಾಪ್ತಿಯಲ್ಲಿ ಕೋವಿಡ್ ಪ್ರಕರಣಗಳ ಸಂಖ್ಯೆ ಹಾಗೂ ಕೋವಿಡ್ ಸೋಂಕು ದೃಢಪಡುವ ಪ್ರಮಾಣವು ಹೆಚ್ಚುತ್ತಿದೆ. ಹಾಗಾಗಿ ಸೋಂಕಿನ ಲಕ್ಷಣ ಇಲ್ಲದವರ ಅಥವಾ ಅಲ್ಪ ಪ್ರಮಾಣದಲ್ಲಿ ಸೋಂಕಿನ ಲಕ್ಷಣಗಳನ್ನು ಹೊಂದಿರುವವ ಆರೈಕೆಗಾಗಿ ಬಿಬಿಎಂಪಿ 8 ವಲಯಗಳಲ್ಲಿ 14 ಕೋವಿಡ್ ಆರೈಕೆ ಕೇಂದ್ರಗಳನ್ನು ಸ್ಥಾಪಿಸಿ ನಿರ್ವಹಿಸುತ್ತಿದೆ. ಇವುಗಳಲ್ಲಿ 2,081 ಹಾಸಿಗೆಗಳ ವ್ಯವಸ್ಥೆ ಕಲ್ಪಿಸಲಾಗಿದೆ. ಮನೆಯಲ್ಲೇ ಪ್ರತ್ಯೇಕವಾಗಿ ಆರೈಕೆ ಹೊಂದಲು ವ್ಯವಸ್ಥೆ ಇಲ್ಲದವರು ಇದರ ಪ್ರಯೋಜನ ಪಡೆಯುತ್ತಿದ್ದಾರೆ.

ಸೋಂಕಿತರ ಚಿಕಿತ್ಸೆಗಾಗಿ ಆಮ್ಲಜನಕ ಪೂರೈಕೆ ವ್ಯವಸ್ಥೆ ಇರುವ ಹಾಸಿಗೆಗಳ ಅವಶ್ಯಕತೆ ಹೆಚ್ಚಾಗುತ್ತಿದೆ. ಹಾಗಾಗಿ, ಈಗಾಗಲೇ ಸ್ಥಾಪಿಸಲಾಗಿರುವ ಹಾಗೂ ಮುಂದಿನ ದಿನಗಳಲ್ಲಿ ಸ್ಥಾಪಿಸಲಾಗುವ ಕೋವಿಡ್ ಆರೈಕೆ ಕೇಂದ್ರಗಳಲ್ಲಿ ಕನಿಷ್ಠ ಪಕ್ಷ ಶೇ 20ರಷ್ಟು ಹಾಸಿಗೆಗಳಿಗೆ ಆಮ್ಲಜನಕ ಪೂರೈಕೆ ವ್ಯವಸ್ಥೆ ಕಲ್ಪಿಸಲು ಕ್ರಮ ಕೈಗೊಳ್ಳುವಂತೆ ಮುಖ್ಯ ಆಯುಕ್ತರು ಸೂಚಿಸಿದ್ದಾರೆ. ಈ ಸಲುವಾಗಿ ಮೊದಲ ಹಂತದಲ್ಲಿ 100 ಆಮ್ಲಜನಕ ಸಾಂದ್ರೀಕರಣ ಸಾಧನಗಳನ್ನು ವಿವಿಧ ವಲಯಗಳ ಕೋವಿಡ್ ಆರೈಕೆ ಕೇಂದ್ರಗಳಿಗೆ ಬಿಬಿಎಂಪಿ ಹಂಚಿಕೆ ಮಾಡಿದೆ.

ಕೆಲ ಖಾಸಗಿ ಸಂಸ್ಥೆಗಳು ಆಮ್ಲಜನಕ ಸಿಲಿಂಡರ್, ಆಮ್ಲಜನಕ ಸಾಂದ್ರೀಕರಣ ಸಾಧನಗಳು ಸೇರಿದಂತೆ ಅವಶ್ಯಕ ಆರೋಗ್ಯ ಆರೈಕೆ ಪರಿಕರಗಳನ್ನು ಒದಗಿಸಬಹುದು ಎಂದು ಬಿಬಿಎಂಪಿ ಕೋರಿದೆ.

ಸರ್ಕಾರ ಸಾರ್ವಜನಿಕ ಆರೋಗ್ಯ ವ್ಯವಸ್ಥೆ ಬಲಪಡಿಸಲು ಯೋಜನೆ ರೂಪಿಸಿದೆ. ಆಮ್ಲಜನಕ ತಯಾರಿಕ ಘಟಕ ಸ್ಥಾಪನೆ, ಅವುಗಳ ಪೂರೈಕೆಗೆ ಕೊಳವೆ ಮಾರ್ಗ ಅಳವಡಿಕೆಗೆ ಕ್ರಮ ಕೈಗೊಂಡಿದೆ. ಅದಕ್ಕೆ ಪೂರಕವಾಗಿ ಆಮ್ಲಜನಕ ಸಾಂದ್ರೀಕರಣ ಸಾಧನಗಳು, ಸಿಲಿಂಡರ್‌ಗಳು, ಎನ್‌ಐವಿ ವೆಂಟಿಲೇಟರ್‌ಗಳ ಅಗತ್ಯವಿದೆ. ರೋಗಿಗಳ ಜೀವ ಉಳಿಸುವುದಕ್ಕೆ ಮಾತ್ರವಲ್ಲ ಕೋವಿಡ್ ಹರಡುವಿಕೆ ನಿಯಂತ್ರಣಕ್ಕೂ ಇವು ಅತಿಮುಖ್ಯ. ಸಂಘ ಸಂಸ್ಥೆಗಳು, ಖಾಸಗಿ ಕಂಪನಿಗಳು ಇವುಗಳನ್ನು ಕೊಡುಗೆಯಾಗಿ ನೀಡಬಹುದು. ಈ ಸಂಬಂಧ ಬಿಬಿಎಂಪಿ ಜಂಟಿ ಆಯುಕ್ತ ಸರ್ಫರಾಜ್ ಖಾನ್ (ಮೊ:9448111066) ಅವರನ್ನು ಸಂಪರ್ಕಿಸಬಹುದು ಎಂದು ಗೌರವ್ ಗುಪ್ತ ಕೋರಿದ್ದಾರೆ.

ಆಮ್ಲಜನಕ ಸಾಂದ್ರೀಕರಣ ಸಾಧನ: ಯಾವ ವಲಯಕ್ಕೆ ಎಷ್ಟು?

ವಲಯ	ಸಾಧನಗಳು
ಪೂರ್ವ	25
ದಕ್ಷಿಣ	10
ಪಶ್ಚಿಮ	15
ಮಹದೇವಪುರ	13
ಆರ್‌.ಆರ್‌.ನಗರ	25
ಬೊಮ್ಮನಹಳ್ಳಿ	12
ಕೇಂದ್ರ ಕಚೇರಿ	05

ನಗರದ ಕೋವಿಡ್ ೨೦೨೦–೨೦೨೧

- 8,19,404 ಒಟ್ಟು ಪ್ರಕರಣಗಳು (7,97,292 ನಿನ್ನೆಯ ವಿವರ)
- 2,94,917 ಸಕ್ರಿಯ ಪ್ರಕರಣಗಳು
- 5,17,770 ಗುಣಮುಖರಾದವರು
- 6,716 ಒಟ್ಟು ಸಾವು

ದಿನದ ಏರಿಕೆ

ಹೊಸ ಪ್ರಕರಣ	22,112
ಗುಣಮುಖ	8,847
ಸಾವು	115

ಆಧಾರ: ರಾಜ್ಯ ಆರೋಗ್ಯ ಇಲಾಖೆ ಪ್ರಜಾವಾಣಿ ಗ್ರಾಫಿಕ್ಸ್

'ಮರುಭರ್ತಿ ಘಟಕಗಳ ಮೇಲೆ ಮೊಕದ್ದಮೆ'

ಎಲ್ಲ ಜಿಲ್ಲೆಗಳು ಮತ್ತು ಬಿಬಿಎಂಪಿ ವ್ಯಾಪ್ತಿಯಲ್ಲಿರುವ ಆಮ್ಲಜನಕ ಮರುಭರ್ತಿ ಘಟಕಗಳು, ತಮ್ಮಲ್ಲಿಂದ ತುಂಬಿಸಿಕೊಂಡ ಮತ್ತು ಸಂಗ್ರಹದಲ್ಲಿರುವ ಆಮ್ಲಜನಕದ ವಿವರಗಳನ್ನು ನಿಗದಿತ ನಮೂನೆಯಲ್ಲಿ ಆಯಾ ಜಿಲ್ಲಾಧಿಕಾರಿಗಳು ಮತ್ತು ಬಿಬಿಎಂಪಿ ಆಯುಕ್ತರಿಗೆ ಪ್ರತಿನಿತ್ಯ ನೀಡಬೇಕು. ಯಾವ ಆಸ್ಪತ್ರೆಗೆ ಅಥವಾ ಸಂಸ್ಥೆಗೆ ಎಷ್ಟು ಪ್ರಮಾಣದ ಆಮ್ಲಜನಕ ಪೂರೈಕೆಯಾಗಿದೆ ಎಂಬ ಮಾಹಿತಿ ಸಲ್ಲಿಸಬೇಕು ಎಂದು ರಾಜ್ಯ ಸರ್ಕಾರ ಆದೇಶಿಸಿದೆ.

'ಆದೇಶ ಉಲ್ಲಂಘಿಸಿದರೆ ಮರುಭರ್ತಿ ಘಟಕಗಳ ಮಾಲೀಕರು ಅಥವಾ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳ ಮೇಲೆ ಕ್ರಿಮಿನಲ್ ಮೊಕದ್ದಮೆ ದಾಖಲಿಸಲಾಗುವುದು' ಎಂದು ಕಂದಾಯ ಇಲಾಖೆ (ವಿಪತ್ತು ನಿರ್ವಹಣೆ) ಪ್ರಧಾನ ಕಾರ್ಯದರ್ಶಿ ಎನ್. ಮಂಜುನಾಥ ಪ್ರಸಾದ್ ಎಚ್ಚರಿಕೆ ನೀಡಿದ್ದಾರೆ.

'ಮರುಭರ್ತಿ ಘಟಕಗಳಲ್ಲಿ ಖುದ್ದು ಹಾಜರಿದ್ದು, ಆಮ್ಲಜನಕ ಪೂರೈಕೆಯ ಮೇಲುಸ್ತುವಾರಿಗೆ ತಹಶೀಲ್ದಾರ್ ಶ್ರೇಣಿಗೆ ಸಮಾನ ಅಧಿಕಾರಿಯೊಬ್ಬರನ್ನು 'ಕ್ಯಾಂಪ್ ಅಧಿಕಾರಿ'ಯಾಗಿ ಜಿಲ್ಲಾಧಿಕಾರಿಗಳು ಮತ್ತು ಬಿಬಿಎಂಪಿ ಆಯುಕ್ತರು ನಿಯೋಜಿಸಿ, ಸಾರ್ವಜನಿಕರಿಗೆ ಮರುಭರ್ತಿ ಘಟಕಗಳಲ್ಲಿನ ಆಮ್ಲಜನಕಕ್ಕೆ ಸಂಬಂಧಿಸಿದ ಮಾಹಿತಿ ಲಭ್ಯವಾಗುವಂತೆ ಮಾಡಬೇಕು. ಜಿಲ್ಲೆಗಳಲ್ಲಿ ಹೆಚ್ಚುವರಿ ಜಿಲ್ಲಾಧಿಕಾರಿ ಮತ್ತು ಬಿಬಿಎಂಪಿಯಲ್ಲಿ ವಿಶೇಷ ಆಯುಕ್ತರು ಆಮ್ಲಜನಕ ಪೂರೈಕೆಯ ನೋಡಲ್ ಅಧಿಕಾರಿಗಳಾಗಿರುತ್ತಾರೆ. ತಕ್ಷಣದಿಂದಲೇ ಜಿಲ್ಲಾಧಿಕಾರಿಗಳು ಮತ್ತು ಬಿಬಿಎಂಪಿ ಮುಖ್ಯ ಆಯುಕ್ತರು ಈ ಆದೇಶವನ್ನು ಜಾರಿಗೆ ತರಬೇಕು' ಎಂದೂ ನಿರ್ದೇಶಿಸಿದ್ದಾರೆ

ಲಸಿಕೆ ಬೆಲೆ ನೀತಿ ಪರಿಷ್ಕರಿಸಿ: 'ಸುಪ್ರೀಂ'

ನವದೆಹಲಿ (ಪಿಟಿಐ): ಪ್ರಸ್ತುತ ಜಾರಿಯಲ್ಲಿರುವ ಕೋವಿಡ್ ಲಸಿಕೆ ಬೆಲೆ ನೀತಿಯನ್ನು ಪರಿಷ್ಕರಿಸುವಂತೆ ಸುಪ್ರೀಂ ಕೋರ್ಟ್ ನಿರ್ದೇಶನ ನೀಡಿದೆ.

'ಲಸಿಕೆ ಬೆಲೆ ದುಬಾರಿಯಾದರೆ, ಸಾರ್ವನಿಕ ಆರೋಗ್ಯದ ಹಕ್ಕಿಗೆ ಧಕ್ಕೆ ಉಂಟಾಗುತ್ತದೆ' ಎಂದು ನ್ಯಾಯಾಲಯ ಅಭಿಪ್ರಾಯಪಟ್ಟಿದೆ. ನ್ಯಾಯಮೂರ್ತಿ ಡಿ.ವೈ.ಚಂದ್ರಚೂಡ್ ನೇತೃತ್ವದ ಪೀಠ, 'ಲಸಿಕೆ ತಯಾರಕರು ಎರಡು ವಿಭಿನ್ನ ದರಗಳನ್ನು ಸೂಚಿಸಿದ್ದಾರೆ. ಕಡಿಮೆ ದರ ಕೇಂದ್ರಕ್ಕೆ ಅನ್ವಯವಾದರೆ, ರಾಜ್ಯಗಳು ಖರೀದಿಸಿರುವ ಲಸಿಕೆಗಳಿಗೆ ಹೆಚ್ಚು ದರ ಅನ್ವಯವಾಗುತ್ತದೆ' ಎಂದು ಹೇಳಿದೆ.

'ನಾಚಿಕೆಯಾಗಬೇಕು ನಿಮಗೆ'

ಅಂತ್ಯಕ್ರಿಯೆಗೆ ಬಂದವರಿಗೆ ತಿಂಡಿ: ನಗುಮೊಗದ ಪ್ರಚಾರ ಫ್ಲೆಕ್ಸ್ !

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಹೊರವಲಯದಲ್ಲಿ ಕೋವಿಡ್ ಶವಗಳ ಸಾಮೂಹಿಕ ಅಂತ್ಯಸಂಸ್ಕಾರಕ್ಕೆ ವ್ಯವಸ್ಥೆ ಮಾಡಲಾಗಿದ್ದು, ಇಲ್ಲಿ ಬರುವವರಿಗೆ ಕಾಫಿ, ತಿಂಡಿಯ ವ್ಯವಸ್ಥೆ ಮಾಡಿದ್ದನ್ನು ಪ್ರಚಾರಕ್ಕೆ ಬಳಸಿಕೊಂಡ ಬಿಜೆಪಿ ನಾಯಕರ ವಿರುದ್ಧ ಸೋಮವಾರ ವ್ಯಾಪಕ ಟೀಕೆ ವ್ಯಕ್ತವಾಯಿತು.

ಈ ಕುರಿತು ಗಿಡ್ಡೇನಹಳ್ಳಿ ಬಳಿ ಹಾಕಲಾಗಿದ್ದ ಫ್ಲೆಕ್ಸ್‌ನಲ್ಲಿ 'ಕೋವಿಡ್‌ನಿಂದ ಸಾವಿಗೀಡಾದವರವನ್ನು 'ಸಕಲ ಸರ್ಕಾರಿ ಮರ್ಯಾದೆಯೊಂದಿಗೆ' ಅಂತ್ಯ ಸಂಸ್ಕಾರ ಮಾಡಲು ಜಿಲ್ಲಾಡಳಿತ ವತಿಯಿಂದ ವ್ಯವಸ್ಥೆ ಮಾಡಲಾಗಿದೆ. ಈ ಕಾರ್ಯಕ್ಕೆ ಬಂದವರಿಗೆ ಉಚಿತವಾಗಿ ನೀರು, ಕಾಫಿ, ಟೀ, ತಿಂಡಿ ವ್ಯವಸ್ಥೆ ಮಾಡಲಾಗಿದೆ' ಎಂದು ಫ್ಲೆಕ್ಸ್‌ನಲ್ಲಿ ಬರೆಯಲಾಗಿದ್ದು, ಪ್ರಧಾನಿ ನರೇಂದ್ರ ಮೋದಿ, ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ, ಸಚಿವ ಆರ್. ಅಶೋಕ, ಯಲಹಂಕ ಶಾಸಕ ಎಸ್. ಆರ್. ವಿಶ್ವನಾಥ್ ಅವರ ನಗುಮೊಗದ ಭಾವಚಿತ್ರವನ್ನು ಹಾಕಲಾಗಿತ್ತು.

ಈ ಫ್ಲೆಕ್ಸ್ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದ್ದಂತೆ ಸಾರ್ವಜನಿಕರು ವ್ಯಾಪಕ ಟೀಕೆ ಮಾಡಿದರು. ತೀವ್ರ ಅಸಮಾಧಾನ ವ್ಯಕ್ತಪಡಿಸಿದರು. 'ಸಾವಿನ ಸಂದರ್ಭದಲ್ಲಿಯೂ ಇಂತಹ ಪ್ರಚಾರ ಬೇಕಾ? ಹಾಸಿಗೆ ನೀಡದೆ ಜನರನ್ನು ಸಾಯಿಸುವ ಯೋಜನೆಗೆ ಪ್ರಚಾರ ಬೇರೆ ಕೇಡು' ಎಂದು ಹಲವು ಆಕ್ರೋಶ ವ್ಯಕ್ತಪಡಿಸಿದರು.

'ಉಚಿತ ಚಿಕಿತ್ಸೆ ಕೊಟ್ಟು ಜನರನ್ನು ಕಾಪಾಡ್ರೊ ಅಂದ್ರೆ, ಬಡ್ಡಿ ಮಕ್ಳು ಸರಿಯಾದ ವ್ಯವಸ್ಥೆ ಮಾಡದೆ ಜನರನ್ನು ಸಾಯಿಸೋಕೆ ಬಿಟ್ಟು ಉಚಿತ ಅಂತ್ಯಸಂಸ್ಕಾರವಂತೆ, ಬಂದವರಿಗೆಲ್ಲ ಫ್ರೀ ಟೀ ಕಾಫಿ ಬೇರೆ ಕೊಡ್ತಾರಂತೆ, ನಾಚಿಕೆ ಆಗಲ್ವ ನಿಮ್ಮ ಜನ್ಮಕ್ಕೆ' ಎಂದು ಮೋಹನ್ ಗೌಡ ಎಂಬುವರು ಅಸಮಾಧಾನ ವ್ಯಕ್ತಪಡಿಸಿದರು.

ಸಾಮಾಜಿಕ ಮಾಧ್ಯಮದಲ್ಲಿ ವ್ಯಾಪಕ ಟೀಕೆ ವ್ಯಕ್ತವಾಗುತ್ತಿದ್ದಂತೆ ಈ ಫ್ಲೆಕ್ಸ್ ಅನ್ನು ತೆರವುಗೊಳಿಸಲಾಯಿತು.

ವಿಶ್ವನಾಥ್ ವಿಷಾದ: 'ಗಿಡ್ಡೇನಹಳ್ಳಿ ಸುತ್ತ-ಮುತ್ತ ಜನ ವಾಸವಿಲ್ಲ. ಸುತ್ತಲೂ ಕಲ್ಲು ಬಂಡೆಗಳು ಇವೆ. ಅಲ್ಲಿ ಕುಡಿಯಲು ನೀರು ಸೇರಿದಂತೆ ಯಾವುದೇ ಸೌಲಭ್ಯವೂ ಇಲ್ಲ. ಶವಸಂಸ್ಕಾರಕ್ಕೆ ಬರುವವರಿಗೆ ತೊಂದರೆಯಾಗಬಾರದು, ಅವರಿಗೆ ನೀರು ಮತ್ತು ಆಹಾರ ಪೂರೈಕೆ ಮಾಡುವಂತೆ ಮಾನವೀಯತೆಯ ದೃಷ್ಟಿಯಿಂದ ಅಧಿಕಾರಿಗಳಿಗೆ ಸೂಚನೆ ನೀಡಿದ್ದೆ. ಆದರೆ, ಈ ಬಗ್ಗೆ ಪ್ರಧಾನಿ, ಮುಖ್ಯಮಂತ್ರಿ ಮತ್ತು ನನ್ನ ಫೋಟೊ ಇರುವ ಫ್ಲೆಕ್ಸ್ ಹಾಕಿರುವುದು ಸರಿಯಾದ ಕ್ರಮವಲ್ಲ. ಇದಕ್ಕಾಗಿ ವಿಷಾದ ವ್ಯಕ್ತಪಡಿಸುತ್ತೇನೆ' ಎಂದು ಯಲಹಂಕ ಶಾಸಕ ಎಸ್.ಆರ್. ವಿಶ್ವನಾಥ್ ಹೇಳಿದರು.



ಗಿಡ್ಡೇನಹಳ್ಳಿ ಬಳಿ ಹಾಕಲಾಗಿದ್ದ ಫ್ಲೆಕ್ಸ್



ಆಟದ ಸಮಯ...

ಕೆ.ಆರ್.ಮಾರುಕಟ್ಟೆಯಲ್ಲಿ ಕರ್ತವ್ಯಕ್ಕೆ ನಿಯೋಜಿತರಾಗಿರುವ ಕರ್ನಾಟಕ ರಾಜ್ಯ ಮೀಸಲು ಪಡೆಯ ಪೊಲೀಸರು ಬಿಡುವಿನ ವೇಳೆಯಲ್ಲಿ ಕೇರಂ ಆಡುತ್ತಿದ್ದ ದೃಶ್ಯ ಸೋಮವಾರ ಕಂಡುಬಂತು. ಸದಾ ಒತ್ತಡದಲ್ಲಿ ಕಾರ್ಯನಿರ್ವಹಿಸುವ ಮೀಸಲು ಪಡೆಯ ಪೊಲೀಸರಲ್ಲಿ ಹೊಸ ಚೈತನ್ಯ ಮೂಡಿಸುವ ಸಲುವಾಗಿ ಇಲಾಖೆಯ ವತಿಯಿಂದಲೇ ಕೇರಂ ಬೋರ್ಡ್ ಒದಗಿಸಲಾಗಿದೆ -ಪ್ರಜಾವಾಣಿ ಚಿತ್ರ

100 ಹಾಸಿಗೆ ನೀಡುವಂತೆ ಸಚಿವರ ಮನವಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬಿಜಿಎಸ್ ಜಿಮ್ಸ್ ಆಸ್ಪತ್ರೆಯು ಸಾರ್ವಜನಿಕರ ಬಳಕೆಗೆ ಆಮ್ಲಜನಕ ಸಹಿತ 100 ಹಾಸಿಗೆಗಳ ವ್ಯವಸ್ಥೆ ಮಾಡಬೇಕು' ಎಂದು ಸಹಕಾರ ಸಚಿವ ಎಸ್.ಟಿ.ಸೋಮಶೇಖರ್ ಮನವಿ ಮಾಡಿದರು.

ಬಿಜಿಎಸ್ ಜಿಮ್ಸ್ ಆಸ್ಪತ್ರೆಗೆ ಸೋಮವಾರ ಭೇಟಿ ನೀಡಿದ ಅವರು ಆಸ್ಪತ್ರೆಯ ಆಡಳಿತ ಮಂಡಳಿಯೊಂದಿಗೆ ಚರ್ಚಿಸಿದರು.

'ಕೊರೊನಾ ಪ್ರಕರಣ ಹೆಚ್ಚಳಗೊಳ್ಳುತ್ತಿವೆ. ಎಲ್ಲ ಕಡೆ ಆಮ್ಲಜನಕ ಹಾಗೂ ಹಾಸಿಗೆ ಕೊರತೆ ಎದುರಾಗಿದೆ. ಸ್ವಕ್ಷೇತ್ರ ಯಶವಂತಪುರ ವ್ಯಾಪ್ತಿಯಲ್ಲಿ ಈ ಸಮಸ್ಯೆ ತೀವ್ರಗೊಳ್ಳದೆ, ಜನರಿಗೆ ಉತ್ತಮ ಚಿಕಿತ್ಸೆ ಸಿಗಬೇಕು' ಎಂದರು.

'ಕುಟುಂಬದಿಂದ ಅಂತರ ಸವಾಲು'

ಪ್ರಜಾವಾಣಿ ವಾರ್ತೆ

ಶುಶ್ರೂಷಕರ ಅಂತರಂಗ

ಬೆಂಗಳೂರು: 'ಕೋವಿಡ್ ಮೊದಲನೇ ಅಲೆ ಸಂದರ್ಭದಲ್ಲಿ ಸೇವೆ ಮುಗಿದ ಬಳಿಕ ಸಿಬ್ಬಂದಿಗೆ ಪ್ರತ್ಯೇಕ ಕ್ವಾರಂಟೈನ್ ಹಾಗೂ ವಿಶ್ರಾಂತಿಗಾಗಿ ಸಮಯ ಸಿಗುತ್ತಿತ್ತು. ಆಗ ಕುಟುಂಬಸ್ಥರಿಂದ ದೂರವೇ ಉಳಿಯುತ್ತಿದ್ದೆ'.

'ಸದ್ಯ ತೀವ್ರಗೊಂಡಿರುವ ಕೋವಿಡ್‌ನಿಂದ ಸಿಬ್ಬಂದಿಗೆ ಕ್ವಾರಂಟೈನ್‌ಗೆ ಪ್ರತ್ಯೇಕ ಸ್ಥಳವಿಲ್ಲ. ವಿಶ್ರಾಂತಿಗೂ ಸಮಯ ಸಾಕಾಗುತ್ತಿಲ್ಲ. ಕೋವಿಡ್ ಸೇವೆಯ ಪಾಳಿ ಮುಗಿದ ನಂತರ ನೇರವಾಗಿ ಮನೆಗೆ ಹೋಗಬೇಕಿದೆ. ಒಂದೇ ಮನೆಯಲ್ಲಿ ಕುಟುಂಬಸ್ಥರಿಂದ ಅಂತರ ಕಾಯ್ದುಕೊಳ್ಳುವುದೇ ಈಗ ಸವಾಲಾಗಿದೆ. ಸೋಂಕಿತರೊಂದಿಗೆ ಸಮಯ ಕಳೆಯುವ ನನ್ನಿಂದ ಮನೆಯವರಿಗೆ ಎಲ್ಲಿ ಅಪಾಯ ಎದುರಾಗುವುದೋ? ಎಂಬ ಭಯ ಸದಾ ಕಾಡುತ್ತದೆ'.

'ಕೋವಿಡ್ ಬಿಗಡಾಯಿಸಿರುವುದರಿಂದ ಆಸ್ಪತ್ರೆಗೆ ಬರುವ ಸೋಂಕಿತರ ಸಂಖ್ಯೆಯೂ ಹೆಚ್ಚು. ಈ ವೇಳೆ ಸಾಮಾನ್ಯವಾಗಿ ಸಿಬ್ಬಂದಿಗೆ ಕೆಲಸದ ಒತ್ತಡವೂ ಹೆಚ್ಚುತ್ತದೆ. ಕೋವಿಡ್ ಸೇವೆ ಮಾಡುವುದರಲ್ಲಿ ಹೆಮ್ಮೆ ಇದೆ. ಕುಟುಂಬದ ವಿಚಾರಕ್ಕೆ ಬಂದಾಗ ಅಷ್ಟೇ ಭಯವೂ ಇದೆ'.



ಪ್ರಶಾಂತ್ ಗುತ್ತೇದಾರ್

'ಮನೆಯವರು ಹಲವು ಬಾರಿ 'ಅಪಾಯದ ಈ ಕೆಲಸ ತೊರೆದು ಮನೆಯಲ್ಲೇ ಇರಿ, ಜೀವ ಇದ್ದರೆ ಏನಾದರೂ ಮಾಡಬಹುದು' ಎಂದು ಹೇಳುತ್ತಲೇ ಇರುತ್ತಾರೆ. ಆದರೆ, ಈಗ ನಡೆಯುತ್ತಿರುವುದು ಕೋವಿಡ್ ಯುದ್ಧ. ಮನೆಯವರ ಮಾತು ಕೇಳಿ ಕೆಲಸ ಬಿಟ್ಟರೆ, ಯುದ್ಧದಿಂದ ಪಲಾಯನ ಮಾಡಿದಂತೆ ಹಾಗೂ ವೃತ್ತಿಗೂ ದ್ರೋಹ ಬಗೆದಂತೆ'.

'ಆಸ್ಪತ್ರೆಗೆ ಬರುವ ರೋಗಿಗಳು ಮೊದಲೇ ಭೀತಿಯಲ್ಲಿರುತ್ತಾರೆ. ಅವರಿಗೆ ಸೂಕ್ತ ಸಲಹೆಗಳನ್ನು ನೀಡಿ ಧೈರ್ಯ ತುಂಬುತ್ತೇವೆ. ತಮ್ಮ ಆರೋಗ್ಯ ರಕ್ಷಣೆ ತಮ್ಮ ಕೈಯಲ್ಲೇ ಎಂಬುದನ್ನು ಜನ ಮರೆಯಬಾರದು'.

ಪರಿಚಯ


ಹೆಸರು: ಪ್ರಶಾಂತ್ ಗುತ್ತೇದಾರ್
ಊರು: ಕಲಬುರ್ಗಿ
ವೃತ್ತಿ: ಶುಶ್ರೂಷಕ ಅಧಿಕಾರಿ
ಸೇವೆ: 5 ವರ್ಷ
ಕಾರ್ಯನಿರ್ವಹಿಸುತ್ತಿರುವ ಆಸ್ಪತ್ರೆ: ವಿಕ್ಟೋರಿಯಾ ಆಸ್ಪತ್ರೆ, ಬೆಂಗಳೂರು

'ಕೋವಿಡ್‌ನಂತಹ ಕ್ಲಿಷ್ಟ ಸಂದರ್ಭದಲ್ಲೂ ಎದೆಗುಂದದೆ, ಕಾರ್ಯನಿರ್ವಹಿಸುತ್ತಿರುವ ನಮ್ಮಂತವರಿಗೆ ಸರ್ಕಾರ ಪ್ರೋತ್ಸಾಹ ನೀಡಬೇಕು. ಬಿಡುವಿಲ್ಲದೆ ಕೋವಿಡ್ ಸೇವೆ ಮಾಡುತ್ತಿರುವುದು ಸವಾಲಿನ ಕೆಲಸ. ಸರ್ಕಾರವೂ ನಮ್ಮನ್ನು ವಿಶೇಷವಾಗಿ ಪರಿಗಣಿಸಬೇಕು'.

'ಕೋವಿಡ್ ಅವಧಿಯಲ್ಲಿ ವಿಶೇಷ ಭತ್ಯೆ, ಕುಟುಂಬದ ಆರೋಗ್ಯ ಜವಾಬ್ದಾರಿ, ಮೃತರಿಗೆ ನೆರವು ಸೇರಿದಂತೆ ನಮ್ಮ ಪರ ನಿಲ್ಲಬೇಕು. ಆಗ ಸೇವೆ ಮಾಡಲು ನಮಗೂ ಹೆಚ್ಚಿನ ಉತ್ಸಾಹ ಬರುತ್ತದೆ. ಈಗಿನ ಪರಿಸ್ಥಿತಿಯೇ ಮುಂದುವರಿದರೆ ಆರೋಗ್ಯ ಕಾಪಾಡುವ ಸಿಬ್ಬಂದಿಯ ಕೊರತೆ ಎದುರಾಗಲಿದೆ'.

ನಿಧನ ವಾರ್ತೆ

ಕೋ.ವೆಂ. ರಾಮಕೃಷ್ಣೇಗೌಡ



ಬೆಂಗಳೂರು: ಕನ್ನಡ ಸಂಘರ್ಷ ಸಮಿತಿಯ ಅಧ್ಯಕ್ಷ ಕೋ.ವೆಂ. ರಾಮಕೃಷ್ಣೇಗೌಡ (59) ಅವರು ಅನಾರೋಗ್ಯದಿಂದಾಗಿ ಸೋಮವಾರ ನಿಧನರಾದರು.

ಅವರು, ಬೆಂಗಳೂರು ವಿಶ್ವವಿದ್ಯಾಲಯದ ಕಾಲೇಜು ಕನ್ನಡ ಅಧ್ಯಾಪಕರ ಒಕ್ಕೂಟದ ಅಧ್ಯಕ್ಷ ಹಾಗೂ ಬಿ.ಎಂ.ಶ್ರೀ ಪ್ರತಿಷ್ಠಾನದ ಕಾರ್ಯಕಾರಿ ಸಮಿತಿ ಸದಸ್ಯರೂ ಆಗಿದ್ದರು. 40ಕ್ಕೂ ಹೆಚ್ಚು ಕೃತಿಗಳನ್ನು ಹೊರತಂದಿದ್ದರು.


ಕನ್ನಡ ಸಾಹಿತ್ಯ ಪರಿಷತ್ ಬೆಂಗಳೂರು ನಗರ ಘಟಕದ ಮಾಜಿ ಅಧ್ಯಕ್ಷರಾಗಿಯೂ ಕೆಲಸ ಮಾಡಿದ್ದರು. ಅವರ ಸಾಹಿತ್ಯ ಕ್ಷೇತ್ರದ ಸಾಧನೆಗಾಗಿ ಕೆಂಪೇಗೌಡ ಪ್ರಶಸ್ತಿ, ಅತ್ತಿಮಬ್ಬೆ ಸಾಹಿತ್ಯ ಪ್ರಶಸ್ತಿ, ಉತ್ತಮ ಉಪನ್ಯಾಸಕ ಪ್ರಶಸ್ತಿ, ಕನ್ನಡ ಭೂಷಣ ಪ್ರಶಸ್ತಿ ಸೇರಿ ಹಲವು ಪ್ರಶಸ್ತಿಗಳು ಸಂದಿದ್ದವು.

ಅರ್ಜುನ್ ಜನ್ಯ ಅಣ್ಣ ಕಿರಣ್

ಬೆಂಗಳೂರು: ಸಂಗೀತ ನಿರ್ದೇಶಕ ಅರ್ಜುನ್ ಜನ್ಯ ಅವರ ಅಣ್ಣ ಕಿರಣ್(44), ಕೋವಿಡ್‌ನಿಂದ ಮೃತಪಟ್ಟಿದ್ದಾರೆ.

ಈ ಕುರಿತು ಇನ್‌ಸ್ಟಾಗ್ರಾಂನಲ್ಲಿ ಮಾಹಿತಿ ಹಂಚಿಕೊಂಡಿರುವ ಅರ್ಜುನ್ ಜನ್ಯ, 'ಅಣ್ಣ ಕೋವಿಡ್‌ನಿಂದ ಮೃತಪಟ್ಟಿದ್ದಾನೆ. ನೀನಿಲ್ಲದೆ ಇರುವ ನೋವನ್ನು ಹೇಗೆ ವ್ಯಕ್ತಪಡಿಸಬೇಕು ಎನ್ನುವುದು ತಿಳಿಯುತ್ತಿಲ್ಲ. ನನ್ನ ಕೊನೆಯ ಉಸಿರು ಇರುವವರೆಗೂ ನೀನು ನನ್ನ ಉಸಿರಲ್ಲಿರುವೆ' ಎಂದು ಬರೆದಿದ್ದಾರೆ. ಅನಾರೋಗ್ಯದ ಕಾರಣ 15 ದಿನಗಳ ಹಿಂದೆ ಮಲ್ಯ ಆಸ್ಪತ್ರೆಗೆ ದಾಖಲಾಗಿದ್ದ ಕಿರಣ್ ಅವರು, ಭಾನುವಾರ ರಾತ್ರಿ ಮೃತಪಟ್ಟಿದ್ದರು.

ಎಂ.ಪಿ.ಚಿನ್ನಪ್ಪ



ಬೆಂಗಳೂರು: ಹೈಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ಎಂ.ಪಿ. ಚಿನ್ನಪ್ಪ (79) ಅನಾರೋಗ್ಯ ಸಮಸ್ಯೆಯಿಂದ ನಗರದ ಖಾಸಗಿ ಆಸ್ಪತ್ರೆಯಲ್ಲಿ ಸೋಮವಾರ ನಿಧನರಾದರು.

ಯಲಹಂಕ ಬಳಿಯ ನ್ಯಾಯಾಂಗ ಬಡಾವಣೆಯಲ್ಲಿ ವಾಸವಿದ್ದ ಅವರಿಗೆ ಪತ್ನಿ ಹಾಗೂ ಇಬ್ಬರು ಪುತ್ರರು ಇದ್ದಾರೆ.

ಹೆಬ್ಬಾಳ ಚಿತಾಗಾರದಲ್ಲಿ ಮಂಗಳವಾರ ಮಧ್ಯಾಹ್ನ 1 ಗಂಟೆಗೆ ಅಂತ್ಯಕ್ರಿಯೆ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಆರ್.ನಾಗರಾಜ ರಾವ್



ಬೆಂಗಳೂರು: ಕೆಎಸ್‌ಆರ್‌ಟಿಸಿಯ ನಿವೃತ್ತ ಖರೀದಿ ಮತ್ತು ಉಗ್ರಾಣಾಧಿಕಾರಿ ಆರ್.ನಾಗರಾಜ ರಾವ್ (67) ಅವರು ಕೋವಿಡ್‌ನಿಂದ ಸೋಮವಾರ ನಿಧನರಾದರು.

ಅವರು ದಾವಣಗೆರೆಯಲ್ಲಿ ಕೆಎಸ್‌ಆರ್‌ಟಿಸಿ ವಿಭಾಗೀಯ ನಿಯಂತ್ರಣ ಅಧಿಕಾರಿಯಾಗಿಯೂ ಕೆಲಸ ಮಾಡಿದ್ದರು.

'ಎರಡು ದಿನದಲ್ಲಿ ಸಹಾಯವಾಣಿ ಸರಿಪಡಿಸಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನಗರದಲ್ಲಿ ಕೋವಿಡ್‌ಗೆ ಸಂಬಂಧಿಸಿದ ಎಲ್ಲಾ ಸೇವೆಗಳನ್ನು 1912 ಸಹಾಯವಾಣಿಗೆ ಜೋಡಿಸಬೇಕು. ಈ ಕೆಲಸ ಎರಡೇ ದಿನದಲ್ಲಿ ಮುಗಿಯಬೇಕು. ಹಾಸಿಗೆ ಹಂಚಿಕೆ ವ್ಯವಸ್ಥೆಯನ್ನೂ ಪಾರದರ್ಶಕಗೊಳಿಸಬೇಕು' ಎಂದು ರಾಜ್ಯ ಕೋವಿಡ್ ಕಾರ್ಯಪಡೆಯ ನೂತನ ಅಧ್ಯಕ್ಷರೂ ಆಗಿರುವ ಉಪಮುಖ್ಯಮಂತ್ರಿ ಡಾ.ಸಿ. ಎನ್.ಅಶ್ವತ್ಥನಾರಾಯಣ ಅಧಿಕಾರಿಗಳಿಗೆ ತಾಕೀತು ಮಾಡಿದರು.

ಹಿರಿಯ ಅಧಿಕಾರಿಗಳೊಂದಿಗೆ ಸೋಮವಾರ ಸಭೆ ನಡೆಸಿದ ಬಳಿಕ ಮಾತನಾಡಿದ ಅವರು 'ಇನ್ನು ಮುಂದೆ 1912 ಸಹಾಯವಾಣಿಗೆ ಕರೆ ಮಾಡಿದರೆ ಕೋವಿಡ್ ರೋಗಿಗಳಿಗಾಗಿ ಆಸ್ಪತ್ರೆಗಳಲ್ಲಿ ಲಭ್ಯವಿರುವ ಹಾಸಿಗೆ, ಆಪ್ತಮಿತ್ರ, 108, 102 ನಿಯಂತ್ರಣ ಕೊಠಡಿಗಳ ಮಾಹಿತಿ, ಲಸಿಕೆ ಅಭಿಯಾನ ಮತ್ತು ಔಷಧ ವಿತರಣೆಯ ಮಾಹಿತಿ ಸಿಗುವಂತಾಗಬೇಕು. ತಾಂತ್ರಿಕ ಸಮಸ್ಯೆಗಳಿದ್ದರೆ ಶೀಘ್ರವೇ ಬಗೆಹರಿಸಬೇಕು. ಹೊಸ ಸಾಫ್ಟ್‌ವೇರ್ ಬೇಕಿದ್ದರೆ ಖರೀದಿಸಬೇಕು. ಹೆಚ್ಚುವರಿ ಸಿಬ್ಬಂದಿಯ ಅಗತ್ಯವಿದ್ದರೇ ಕೂಡಲೇ ನೇಮಕ ಮಾಡಿಕೊಳ್ಳಬೇಕು' ಎಂದು ಸೂಚಿಸಿದರು.

'ನೀತಿ ಜಾರಿಗಿಂತ ಜನರ ಜೀವ ಮುಖ್ಯ'

ಪ್ರಜಾವಾಣಿ ವಾರ್ತೆ

ಬೆಂಗಳೂರು:'ಬಿಜೆಪಿ ಸರ್ಕಾರವು ಕೋವಿಡ್ ಸೋಂಕಿತರ ಸಾವು ನೋವು ತಡೆಯುವ ಬದಲಿಗೆ ಕಾರ್ಮಿಕ ಸಂಹಿತೆಯಡಿ ತರಾತುರಿಯಲ್ಲಿ ನಿಯಮಗಳನ್ನು ಜಾರಿ ಮಾಡಲು ಮುಂದಾಗಿರುವುದು ಅವಿವೇಕದ ಪರಮಾವಧಿ' ಎಂದು ಭಾರತ ಕಮ್ಯೂನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಖಂಡಿಸಿದೆ.

ನಿಯಮ ರಚಿಸಲು ಗಮನ ನೀಡುವ ಬದಲು ಜನತೆಯ ಜೀವ ಉಳಿಸಲು ಆದ್ಯತೆ ನೀಡಬೇಕೆಂದು ಒತ್ತಾಯಿಸಿದೆ.

ಕೋವಿಡ್ ಜಯಿಸಿದ ದಿವ್ಯಾ ಅನುಭವ

'ಗುಣಮುಖವಾದ ನಂತರವೂ ಎಚ್ಚರ ತಪ್ಪಿಲ್ಲ'

ಪ್ರಜಾವಾಣಿ ವಾರ್ತೆ

ಕೋವಿಡ್ ಗೆದ್ದವರ ಕಥೆಗಳು

ಬೆಂಗಳೂರು: 'ಕೋವಿಡ್ ಪಾಸಿಟಿವ್ ಆದರೂ ನನಗೆ ಸೋಂಕಿನ ಸೌಮ್ಯ ಲಕ್ಷಣಗಳು ಇದ್ದವು. ಹೋಂ ಐಸೊಲೇಷನ್‌ನಲ್ಲಿರಲು ವೈದ್ಯರು ಹೇಳಿದ್ದರು. ಅದರಂತೆ 15 ದಿನ ಮನೆಯಲ್ಲಿಯೇ ಪ್ರತ್ಯೇಕವಾಗಿದ್ದುಕೊಂಡು ಆರೈಕೆ ಮಾಡಿಕೊಳ್ಳಲು ಹೇಳಿದ್ದರು' ಎಂದು ನಗರದ ಎಸ್.ಪಿ. ದಿವ್ಯಾ ಹೇಳಿದರು.

'ಏ.8ರಂದು ನನಗೆ ಜ್ವರ ಬಂದಿತ್ತು. ಒಂದೆರಡು ದಿನ ಹಾಗೆಯೇ ಇತ್ತು. 12ಕ್ಕೆ ಕಚೇರಿಗೆ ಹೋಗಿದ್ದೆ. ಕೆಲಸ ಮಾಡುವಾಗ ತುಂಬಾ ಸುಸ್ತು ಎನಿಸಿತು. ಮಧ್ಯಾಹ್ನ ಊಟ ಸೇರಲಿಲ್ಲ. ಜ್ವರ ಕಡಿಮೆಯಾಗಿದ್ದರೂ ಮೈ ಕೈ ನೋಯುತ್ತಿತ್ತು. 13ರಂದು ಪರೀಕ್ಷೆ ಮಾಡಿಸಿದೆ. 14ರಂದು ಕೋವಿಡ್ ಪಾಸಿಟಿವ್ ಎಂದು ವರದಿ ಬಂತು'

'ಮನೆಯಲ್ಲಿ ಪತಿ ಮತ್ತು ಮಗಳು ಪರೀಕ್ಷೆ ಮಾಡಿಸಿದಾಗ ಅವರಿಗೆ ನೆಗೆಟಿವ್ ಎಂದು ಬಂದಿತ್ತು. ನನ್ನಿಂದ ಅವರಿಗೂ ಸೋಂಕು ತಗುಲಬಾರದು ಎಂಬ ಉದ್ದೇಶದಿಂದ ತುಂಬಾ ಎಚ್ಚರಿಕೆ ವಹಿಸಿದೆ. ತಟ್ಟೆ, ಲೋಟ ಸೇರಿದಂತೆ ಪ್ರತಿಯೊಂದನ್ನೂ ಪ್ರತ್ಯೇಕವಾಗಿ ಇಟ್ಟುಕೊಂಡಿದ್ದೆ. ಶೌಚಾಲಯ ಬಳಸಿದ ನಂತರ ತಪ್ಪದೇ ಸ್ಯಾನಿಟೈಸ್ ಮಾಡುತ್ತಿದ್ದೆ'

'ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದರೆ ಅಲ್ಲಿಯೇ ವೈದ್ಯರು, ಶುಶ್ರೂಷಕರು ಇರುತ್ತಾರೆ. ಗೊಂದಲಗಳಿದ್ದರೆ ಅಲ್ಲಿಯೇ ಪರಿಹರಿಸಿಕೊಳ್ಳಬಹುದು. ಮನೆಯಲ್ಲಿಯೇ ಆರೈಕೆ ಮಾಡಿಕೊಳ್ಳುವಾಗ ಹೆಚ್ಚು ಎಚ್ಚರಿಕೆಯಿಂದ ಇರಬೇಕಾಗುತ್ತದೆ'

'ಪ್ರಾರಂಭದಲ್ಲಿ ವಾಸನೆ ಮತ್ತು ರುಚಿಯೇ ಗೊತ್ತಾಗುತ್ತಿರಲಿಲ್ಲ. ಬೆಳಿಗ್ಗೆ 5, ಮಧ್ಯಾಹ್ನ 2 ಮತ್ತು ರಾತ್ರಿ 5 ಹೀಗೆ ದಿನಕ್ಕೆ 12 ಮಾತ್ರೆಗಳನ್ನು ಸೇವಿಸಬೇಕಾಗುತ್ತಿತ್ತು. ಹಸಿವು ಆಗುತ್ತಿರಲಿಲ್ಲ. ದೇಹದ ಉಷ್ಣಾಂಶ ಮತ್ತು ಆಮ್ಲಜನಕ ಮಟ್ಟ ಪರೀಕ್ಷಿಸಿಕೊಳ್ಳುವ ಸಾಧನಗಳನ್ನು ತಂದಿಟ್ಟುಕೊಂಡಿದ್ದೆ. ಆಮ್ಲಜನಕ ಮಟ್ಟ 92ಕ್ಕಿಂತ ಕಡಿಮೆಯಾದರೆ ಆಸ್ಪತ್ರೆಗೆ ದಾಖಲಾಗಿ ಎಂದು ವೈದ್ಯರು ಹೇಳಿದ್ದರು. ಆದರೆ, 15 ದಿನಗಳೂ ನನ್ನ ಆಮ್ಲಜನಕ ಮಟ್ಟ 96ರಿಂದ 98ರಲ್ಲೇ ಇತ್ತು'

'ಏನೇ ತಿಂದರೂ ರುಚಿಸುತ್ತಿರಲಿಲ್ಲ. ಮೋಸಂಬಿ, ದ್ರಾಕ್ಷಿ, ಸಪೋಟಾ, ದಾಳಿಂಬೆ ಹಣ್ಣು ಹೆಚ್ಚು ಸೇವಿಸುತ್ತಿದ್ದೆ. ಹೆಚ್ಚು ಮಾತ್ರೆಗಳು ತೆಗೆದುಕೊಳ್ಳುತ್ತಿದ್ದುದರಿಂದ ದೇಹದ ಉಷ್ಣಾಂಶ ಹೆಚ್ಚಾಗುತ್ತಿತ್ತು. ಮಜ್ಜಿಗೆ, ಮೊಸರು ಹೆಚ್ಚು ಸೇವಿಸಿದರೆ ಕಫ ಉಂಟಾಗಿ ಉಸಿರಾಟಕ್ಕೆ ಸಮಸ್ಯೆಯಾಗಬಹುದು ಉದ್ದೇಶದಿಂದ ಎಳನೀರು ಹೆಚ್ಚು ಕುಡಿಯುತ್ತಿದ್ದೆ' ಎಂದರು.

'12, 13 ದಿನಗಳು ಕಳೆದ ನಂತರ ವಾಸನೆ ಮತ್ತು ರುಚಿ ಗೊತ್ತಾಗತೊಡಗಿತು. ಯಾವುದೇ ಸುಸ್ತು ಕಾಣಲಿಲ್ಲ. ವೈದ್ಯರಿಗೆ ಕರೆ ಮಾಡಿದಾಗ, ನೀವು ಗುಣಮುಖರಾಗಿದ್ದೀರಿ. ಆದರೆ, ಈಗಲೇ ಮತ್ತೆ ಪರೀಕ್ಷೆ ಮಾಡಿಸಿಕೊಳ್ಳಬೇಡಿ. ಈಗ ಪರೀಕ್ಷೆ ಮಾಡಿಸಿದರೆ ಕೋವಿಡ್ ಪಾಸಿಟಿವ್ ಎಂದೇ ಬರಬಹುದು. ಸೋಂಕಿನ ಲಕ್ಷಣಗಳು ಮತ್ತೆ ಕಾಣಿಸಿಕೊಂಡರೆ ಮಾತ್ರ ಪರೀಕ್ಷೆ ಮಾಡಿಸಿಕೊಳ್ಳಿ ಎಂದು ಸಲಹೆ ನೀಡಿದರು'

'ಈಗಲೂ ನಾನು ಮನೆಯಲ್ಲಿಯೇ ಪ್ರತ್ಯೇಕವಾಗಿಯೇ ಇದ್ದೇನೆ. ಹಾಲ್‌ಗೆ ಹೋದರೂ ನಿರ್ದಿಷ್ಟ ಜಾಗದಲ್ಲಿ ಮಾತ್ರ ಕುಳಿತುಕೊಳ್ಳುತ್ತೇನೆ. ಮನೆಯ ಮಂದಿಯೆಲ್ಲ ನಿತ್ಯ ಈಗಲೂ ವಿಟಮಿನ್ ಸಿ ಮಾತ್ರೆ ತೆಗೆದುಕೊಳ್ಳುತ್ತಿದ್ದೇವೆ' ಎಂದರು.

ಉಸಿರಾಟ ನಿಲ್ಲಿಸಿದ ರಾಜ್ಯದ ಆಮ್ಲಜನಕ 'ವಾರ್' ರೂಂ!

• ರಾಜೇಶ್ ರೈ ಚಟ್ಲ

ಬೆಂಗಳೂರು: ರಾಜ್ಯದಾದ್ಯಂತ ಕೋವಿಡ್ ರೋಗಿಗಳು ಉಸಿರಾಟ ಸಮಸ್ಯೆ ತೀವ್ರಗೊಂಡು ನರಳಾಡು-ತ್ತಿದ್ದರೆ, ಜೀವರಕ್ಷಕ ವೈದ್ಯಕೀಯ ಆಮ್ಲಜನಕದ ತುರ್ತು ಅಗತ್ಯವಿರುವ ಆಸ್ಪತ್ರೆಗಳಿಗೆ ಅನುಕೂಲ ಮಾಡಿಕೊಡಲು (ಫೆಸಿಲಿಟೇಟ್) ರಾಜ್ಯ ಸರ್ಕಾರ ಆರಂಭಿಸಿರುವ 'ವಾರ್ ರೂಂ' ಉಸಿರಾ-ಡುತ್ತಿಲ್ಲ!

ಆಮ್ಲಜನಕ ಕೊರತೆ ತೀವ್ರ-ಗೊಳ್ಳುತ್ತಿರುವ ಮುನ್ಸೂಚನೆ ಸಿಗುತ್ತಿದ್ದಂತೆ, ಔಷಧ ನಿಯಂತ್ರಕರ ಕಚೇರಿಯಲ್ಲಿ ಸ್ಥಿರ ದೂರವಾಣಿ ಸಂಖ್ಯೆ (080-22262846), ಮೊಬೈಲ್ (9448478874) ಸಂಖ್ಯೆ ಸಮೇತ 'ವಾರ್ ರೂಂ' ಅನ್ನು ಸರ್ಕಾರ ಏ. 8 ರಂದು ಆರಂಭಿಸಿತ್ತು. ರಾಜ್ಯದಾದ್ಯಂತ ಆಸ್ಪತ್ರೆಗಳು, ವೈದ್ಯರು, ಸಾರ್ವಜನಿಕರು ಸೇರಿದಂತೆ ಎಲ್ಲ ಭಾಗಿದಾರರು ಈ ಸೌಲಭ್ಯ ಬಳಸಿಕೊಳ್ಳಬಹುದು ಎಂದು ಔಷಧ ನಿಯಂತ್ರಕರು ಸುತ್ತೋಲೆಯಲ್ಲಿ ತಿಳಿಸಿದ್ದರು. ಆದರೆ, ಇದು ನಾಮ್‌ಕೆ ವಾಸ್ತೆ ಎಂಬಂತಾಗಿದೆ. ಈ ಸಂಖ್ಯೆಗಳಿಗೆ ಕರೆ ಮಾಡಿದರೆ ಸ್ವೀಕರಿಸುವವರೇ ಇಲ್ಲ!



ಈ ವಾರ್ ರೂಂ ಯಾಕೆ ಮಾಡಿದ್ದಾರೋ ಗೊತ್ತಿಲ್ಲ. ಅಲ್ಲಿ ಕರೆಯೇ ಸ್ವೀಕರಿಸುವವರಿಲ್ಲ. ನಾವು ಪೂರೈಕೆದಾರರಲ್ಲಿ ಕಾದು, ಬೇಡಿ ಆಮ್ಲಜನಕ ಪಡೆಯುತ್ತಿದ್ದೇವೆ

ಡಾ. ಪ್ರಸನ್ನ ಎಚ್.ಎಂ.
ಅಧ್ಯಕ್ಷ, ಖಾಸಗಿ ಆಸ್ಪತ್ರೆ ಮತ್ತು ನರ್ಸಿಂಗ್ ಹೋಂ ಅಸೋಸಿಯೇಷನ್

ಔಷಧ ನಿಯಂತ್ರಕ (ಭಾಗೋಜಿ ಟಿ. ಖಾನಾಪುರೆ), ಹೆಚ್ಚುವರಿ ಔಷಧ ನಿಯಂತ್ರಕ (ಅಮರೇಶ ತುಂಬಗಿ), ಉಪ ಮತ್ತು ಸಹಾಯಕ ಔಷಧ ನಿಯಂತ್ರಕರ ಪೈಕಿ ಐವರು, ಮೂರು ಪಾಳಿಯಲ್ಲಿ ಮೇಲುಸ್ತುವಾರಿಗೆಂದು ತಲಾ ಮೂವರು, ಸದ್ಯರಗೊಂದು ತಲಾ 10 ಸಿಬ್ಬಂದಿ ಹೀಗೆ ಈ ವಾರ್ ರೂಮ್‌ಗೆ ನೇಮಕ ಮಾಡಿಕೊಳ್ಳಲಾಗಿದೆ. ಬಂದ ಕರೆಯನ್ನು ಸ್ವೀಕರಿಸಿ, ಆಯಾ ವ್ಯಾಪ್ತಿಯ ಔಷಧ ಸಹಾಯಕ ನಿಯಂತ್ರಕರಿಗೆ ಮಾಹಿತಿ ನೀಡುವ ಕೆಲಸವನ್ನು ಸಿಬ್ಬಂದಿ ಮಾಡಬೇಕು. ಆದರೆ, ಈ ಸಿಬ್ಬಂದಿಯ ಮೊಬೈಲ್ ಸಂಖ್ಯೆಗೆ ಕರೆ ಮಾಡಿದರೆ ಅನೇಕರದ್ದು ಸ್ವಿಚ್ಡ್ ಆಫ್. ಕೆಲವರದ್ದು ರಿಂಗಣಿಸಿದರೂ ಸ್ವೀಕರಿಸುವುದೇ ಇಲ್ಲ. ಇದು ಈ ವಾರ್ ರೂಂ ಕಾರ್ಯವೈಖರಿ!

'ಅಯ್ಯೋ ಈ ವಾರ್ ರೂಂ ಬಗ್ಗೆ ಯಾಕೆಕೇಳುತ್ತೀರಿ.ಅದರಿಂದಯಾವುದೇ ಪ್ರಯೋಜನ ಇಲ್ಲ. ಆರಂಭವಾದ ಮೊದಲ ಎರಡು ದಿನ ಕರೆ ಸ್ವೀಕರಿಸಿ, 'ಆ ಮೇಲೆ ಕರೆ ಮಾಡುತ್ತೇವೆ' ಎಂದಿದ್ದು ಬಿಟ್ಟರೆ ಏನ್ನೇನೂ ಮಾಡಿಲ್ಲ. ಮತ್ತೆ ಕರೆ ಮಾಡಿದರೆ, 'ಯಾಕ್ರೀ...ಪದೇ ಪದೇ ಕರೆ ಮಾಡುತ್ತೀರಾ, ಗೊತ್ತಾಗಲ್ವಾ ನಿಮಗೆ' ಎಂದು ಖಾಸಗಿ ಆಸ್ಪತ್ರೆ ಮತ್ತು ನರ್ಸಿಂಗ್ ಹೋಂ ಅಸೋಸಿಯೇಷನ್ (ಫಾನಾ) ಅಧ್ಯಕ್ಷ ಡಾ. ಪ್ರಸನ್ನ ಎಚ್.ಎಂ. ಆಕ್ರೋಶ ವ್ಯಕ್ತಪಡಿಸಿದರು.

'ಆಮ್ಲಜನಕ ಸಿಗದೆ ತುಂಬಾ ಕಷ್ಟವಾಗಿದೆ. ಎಲ್ಲ ಆಸ್ಪತ್ರೆಗಳ ಮಾಲೀಕರೂ ಗೋಗರೆಯುತ್ತಿದ್ದಾರೆ. ಜನರು ಅಳುತ್ತಿದ್ದಾರೆ. ಪೂರೈಕೆದಾರರ ಕಾಲಿಗೆ ನಮಸ್ಕರಿಸಿ ಆಮ್ಲಜನಕ ಪಡೆಯುವಂಥ ಸ್ಥಿತಿ ಬಂದಿದೆ. ಇದೀಗ ಕೆಪಿಎಂಇ ಪೋರ್ಟಲ್‌ನಲ್ಲಿ ಆಮ್ಲಜನಕ ಮತ್ತು ರೆಮ್‌ಡಿಸಿವಿರ್ ಚುಚ್ಚುಮದ್ದು ಅಗತ್ಯದ ಬಗ್ಗೆ ಮಾಹಿತಿ ಪಡೆಯುತ್ತಿದ್ದಾರೆ. ಸಂಗ್ರಹದಲ್ಲಿ ಎಷ್ಟಿದೆ, ಬೇಡಿಕೆ ಎಷ್ಟು ಎಂದು ಮಾಹಿತಿ ನೀಡಿದ್ದೇವೆ. ಎಲ್ಲ ಆಸ್ಪತ್ರೆಯವರು ಆಮ್ಲಜನಕ ಬೇಡಿಕೆ ಬಗ್ಗೆ ಇಂಡೆಂಟ್ ಹಾಕಿದ್ದಾರೆ. ಪೂರೈಕೆಯ ಭರವಸೆ ಸಿಕ್ಕಿದೆ. ಆದರೆ, ಆಮ್ಲಜನಕ ಬಂದಿಲ್ಲ. ಚಾಮರಾಜನಗರದ ಸರ್ಕಾರಿ ಆಸ್ಪತ್ರೆಯಲ್ಲಿ ನಡೆದ ಘಟನೆ ಒಂದೆಡೆ. ಖಾಸಗಿ ಆಸ್ಪತ್ರೆಯಲ್ಲಿ ಸಂಭವಿಸುತ್ತಿರುವ 24 ಗಂಟೆಗಳಲ್ಲಿ ಆಸ್ಪತ್ರೆಯ ಮಾಲೀಕರ ಮೇಲೆ ಕ್ರಮ ತೆಗೆದುಕೊಳ್ಳುತ್ತಿದ್ದಾರೆ' ಎಂದರು.

ಕೊರೊನಾ ಕಾರ್ಯಪಡೆ: ಡಾ.ಅಶ್ವತ್ಥನಾರಾಯಣ ಅಧ್ಯಕ್ಷ

ಬೆಂಗಳೂರು: ಕೋವಿಡ್ ನಿಯಂತ್ರಣಕ್ಕಾಗಿ ರಾಜ್ಯ ಸರ್ಕಾರ ರಚಿಸಿರುವ ಕೋವಿಡ್ ಕಾರ್ಯಪಡೆಯನ್ನು ಪುನರ್ ರಚನೆ ಮಾಡಿ, ಉಪಮುಖ್ಯಮಂತ್ರಿ ಡಾ.ಸಿ.ಎನ್.ಅಶ್ವತ್ಥನಾರಾಯಣ ಅವರನ್ನು ಅಧ್ಯಕ್ಷರನ್ನಾಗಿ ನೇಮಿಸಲಾಗಿದೆ.

ಈ ಹಿಂದೆ ಉಪಮುಖ್ಯಮಂತ್ರಿ ಗೋವಿಂದಕಾರಜೋಳ ಕಾರ್ಯಪಡೆ ಅಧ್ಯಕ್ಷರಾಗಿದ್ದರು. ಪುನರ್ ರಚನೆಗೊಂಡ ಕಾರ್ಯಪಡೆಯಲ್ಲಿ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ಎಸ್.ಸುರೇಶ್ ಕುಮಾರ್, [illegible] ಸಚಿವ ಸಿ.ಸಿ.ಪಾಟೀಲ ಮತ್ತು ಆರೋಗ್ಯ ಸಚಿವ ಡಾ.ಕೆ.ಸುಧಾಕರ್ ಇದ್ದಾರೆ.

ರಾಜ್ಯದ ಕೋವಿಡ್ ಪರಿಸ್ಥಿತಿಯ ಉಸ್ತುವಾರಿ ಜತೆಗೆ, ಉನ್ನತ ಮಟ್ಟದ ನಿರ್ಧಾರಗಳನ್ನು ಕೈಗೊಳ್ಳುವ ಅಧಿಕಾರ ಕಾರ್ಯಪಡೆಗಿದೆ.

ಅನಾಥ ಮಕ್ಕಳಿಗೆ ವ್ಯವಸ್ಥೆ: ನೋಡಲ್ ಅಧಿಕಾರಿ ನೇಮಕ

ಕೋವಿಡ್–19ನಿಂದ ತಂದೆ–ತಾಯಿಯನ್ನು ಕಳೆದುಕೊಂಡು ಅನಾಥರಾಗಿರುವ ಮಕ್ಕಳಿಗೆ ಅತ್ಯವಶ್ಯಕ ಸೌಕರ್ಯಗಳನ್ನು ಆದ್ಯತೆ ಮೇರೆಗೆ ಒದಗಿಸುವ ಕಾರ್ಯವನ್ನು ಕೈಗೆತ್ತಿಕೊಳ್ಳಲು ಮುದ್ರಾಂಕ ಇಲಾಖೆ ಆಯುಕ್ತ ಕೆ.ಪಿ.ಮೋಹನ್ ರಾಜ್ ಅವರನ್ನು ನೋಡಲ್ ಅಧಿಕಾರಿಯನ್ನಾಗಿ ನೇಮಿಸಿ ಆದೇಶ ಹೊರಡಿಸಲಾಗಿದೆ.

ಇಂತಹ ಮಕ್ಕಳಿಗೆ ದೀರ್ಘಕಾಲದ ವ್ಯವಸ್ಥೆ ಮಾಡಲು ಸಹಕಾರ ನೀಡಬೇಕು. ಇದಕ್ಕಾಗಿ ಸಂಬಂಧಪಟ್ಟ ಎಲ್ಲ ಪ್ರಾಧಿಕಾರಗಳು ಕ್ರಮವಹಿಸಬೇಕು ಎಂದು ಆದೇಶದಲ್ಲಿ ಸೂಚಿಸಲಾಗಿದೆ.

ಮಳೆ: ಸಿಡಿಲು ಬಡಿದು ರೈತ ಸಾವು

ಬೆಂಗಳೂರು: ಕನಕಪುರ ತಾಲ್ಲೂಕಿನ ಕೋಡಿಹಳ್ಳಿಯಲ್ಲಿ ಸೋಮವಾರ ಸಿಡಿಲು ಬಡಿದು ರೇಷ್ಮೆ ತೋಟದಲ್ಲಿ ಸೊಪ್ಪು ಕಟಾವು ಮಾಡುತ್ತಿದ್ದ ರೈತ ರಮೇಶ್ (32) ಮೃತಪಟ್ಟಿದ್ದಾರೆ.

ಕರಾವಳಿ ಜಿಲ್ಲೆಗಳು, ಕಲಬುರ್ಗಿ, ಬೆಳಗಾವಿ ಜಿಲ್ಲೆಗಳಲ್ಲಿ ಸೋಮವಾರ ಉತ್ತಮ ಮಳೆಯಾಗಿದೆ.

ಕೊಡಗು ಜಿಲ್ಲೆಯಲ್ಲಿ ಕೆಲದಿನಗಳಿಂದ ಸುರಿದ ಮಳೆಯಿಂದಾಗಿ ಕಾವೇರಿ ನದಿಯಲ್ಲಿ ನೀರಿನ ಹರಿವು ಹೆಚ್ಚಳವಾಗಿದೆ.

ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರು, ಕಡಬ, ಸುಳ್ಯ ಸೇರಿ ವಿವಿಧೆಡೆ ಗಾಳಿ ಸಹಿತ ಮಳೆಯಾಗಿದೆ. ಕಲಬುರ್ಗಿ, ಬೀದರ್, ಬೆಳಗಾವಿ ಜಿಲ್ಲೆಯ ಕೆಲವು ತಾಲ್ಲೂಕುಗಳಲ್ಲಿ ಗುಡುಗು ಸಹಿತ ಸಾಧಾರಣ ಮಳೆ ಬಿದ್ದಿದೆ.

ಕೆಲವೆಡೆ ತಳಮಳ, ಉಳಿದೆಡೆ ಸದ್ಯಕ್ಕಿಲ್ಲ ಕಳವಳ

ವೈದ್ಯಕೀಯ ಆಮ್ಲಜನಕದ ತೀವ್ರ ಕೊರತೆಯಿಂದ ರಾಜಧಾನಿ ಬೆಂಗಳೂರಿನಲ್ಲಿ ಕೋವಿಡ್ ರೋಗಿಗಳು ಸಂಕಷ್ಟದಲ್ಲಿದ್ದಾರೆ. ಚಾಮರಾಜನಗರದಲ್ಲಿ ಪ್ರಾಣವಾಯುವಿನ ಕೊರತೆಯಿಂದ ಭಾನುವಾರ ರಾತ್ರಿಯಿಂದ ಸೋಮವಾರ ಬೆಳಿಗ್ಗೆವರೆಗೆ ಸರಣಿ ಸಾವು ಸಂಭವಿಸಿದೆ. ರಾಜ್ಯದ ಇನ್ನೊಂದು ಮೂಲೆಯ ಕಲಬುರ್ಗಿಯಲ್ಲೂ ಸಾವುನೋವುಗಳಾಗಿವೆ. ಮೈಸೂರು, ಮಂಡ್ಯ, ಯಾದಗಿರಿ, ಚಿತ್ರದುರ್ಗ ಜಿಲ್ಲೆಗಳು ಆಮ್ಲಜನಕಕ್ಕೆ 'ಏದುಸಿರು' ಬಿಡುತ್ತಿವೆ. ಉಳಿದ ಜಿಲ್ಲೆಗಳು ಸದ್ಯ ಗಂಭೀರ ಸಮಸ್ಯೆ ಎದುರಿಸುತ್ತಿಲ್ಲ. ಆದರೆ ಸೋಂಕಿತರ ಸಂಖ್ಯೆ ಅಂಕೆ ತಪ್ಪಿದರೆ ಇಲ್ಲೂ ಅಪಾಯದ ಸಾಧ್ಯತೆಯಿದೆ.

ಹೆಚ್ಚುತ್ತಿರುವ ಪ್ರಕರಣ: ಸಾಲುತ್ತಿಲ್ಲ ಆಮ್ಲಜನಕ

ಆಳೆದೂ ತೂಗಿ ಪೂರೈಕೆ: ಕ್ಷಣ ಕ್ಷಣಕ್ಕೂ ಆತಂಕದಲ್ಲಿರುವ ಮಂಡ್ಯದ ವೈದ್ಯಕೀಯ ಸಿಬ್ಬಂದಿ

ಮೈಸೂರು: ಚಾಮರಾಜನಗರದಲ್ಲಿ ವೈದ್ಯಕೀಯ ಆಮ್ಲಜನಕದ ಕೊರತೆಯಿಂದ ಕೋವಿಡ್ ರೋಗಿಗಳು ಮೃತಪಟ್ಟಿರುವ ಬೆನ್ನಲ್ಲೇ, ನೆರೆಯ ಜಿಲ್ಲೆಗಳಾದ ಮೈಸೂರು, ಮಂಡ್ಯ, ಹಾಸನ ಹಾಗೂ ಕೊಡಗು ಜಿಲ್ಲೆಗಳಲ್ಲೂ ಆತಂಕ ವ್ಯಕ್ತವಾಗುತ್ತಿದೆ.

ಸದ್ಯಕ್ಕೆ ಈ ಜಿಲ್ಲೆಗಳಲ್ಲಿ ಆಮ್ಲಜನಕದ 'ಕೊರತೆ' ಅಷ್ಟೇನೂ ಇಲ್ಲ. ಆದರೆ, ಹೆಚ್ಚುತ್ತಿರುವ ಕೊರೊನಾ ಸೋಂಕಿತರ ಸಂಖ್ಯೆಯಿಂದ ಹಾಗೂ ಗಂಭೀರ ಪರಿಸ್ಥಿತಿಯಲ್ಲಿ ಆಸ್ಪತ್ರೆಗೆ ದಾಖಲಾಗುತ್ತಿರುವವರ ಸಂಖ್ಯೆಯನ್ನು ಗಮನಿಸಿದರೆ, ಪೂರೈಕೆಯಾಗುತ್ತಿರುವ ಆಮ್ಲಜನಕ ಸಾಕಾಗುತ್ತಿಲ್ಲ. ಅಲ್ಲದೇ ಪೂರೈಕೆಯು ಒಂದು ದಿನವಲ್ಲ; ಒಂದು ಗಂಟೆ ತಡವಾದರೂ ಚಾಮರಾಜನಗರದ ಪರಿಸ್ಥಿತಿಯೇ ಇಲ್ಲಿಯೂ ಮರುಕಳಿಸಬಹುದು ಎಂಬ ಆತಂಕ ವೈದ್ಯರದ್ದು.

ಮೈಸೂರು ಜಿಲ್ಲೆಯಲ್ಲಿ ಆಮ್ಲಜನಕದ ಸಿಲಿಂಡರ್ ಕೊರತೆ ಎದುರಾಗುವ ಸಾಧ್ಯತೆ ದಟ್ಟವಾಗಿದೆ. ಖಾಸಗಿ ಆಸ್ಪತ್ರೆಗಳಿಗೆ ನಿತ್ಯ 50 ಕಿಲೋ ಲೀಟರ್ ಪೂರೈಕೆಯಾಗಬೇಕಿರುವ ಆಮ್ಲಜನಕದ ಪ್ರಮಾಣದಲ್ಲಿ, ಸದ್ಯ 24 ಕೆ.ಎಲ್‌ನಷ್ಟು ಮಾತ್ರವೇ ಪೂರೈಕೆಯಾಗುತ್ತಿರುವುದಾಗಿ ಔಷಧ ನಿಯಂತ್ರಣ ಕಚೇರಿಯ ಮೂಲಗಳು ತಿಳಿಸಿವೆ. ಸಂಸದ ಪ್ರತಾಪಸಿಂಹ ಅವರೂ ಇದನ್ನು ದೃಢೀಕರಿಸಿದ್ದಾರೆ.

ಸರ್ಕಾರಿ ಆಸ್ಪತ್ರೆಗಳಾದ ಕೆ.ಆರ್.ಆಸ್ಪತ್ರೆ, ಟ್ರಾಮಾ ಸೆಂಟರ್ ಹಾಗೂ ಕೋವಿಡ್ ಆಸ್ಪತ್ರೆಗಳಿಗೆ ಸದ್ಯದ ಮಟ್ಟಿಗೆ ಸಾಕಾಗುವಷ್ಟು ಆಮ್ಲಜನಕ ಪೂರೈಕೆಯಾಗುತ್ತಿದೆ ಎಂದು ಜಿಲ್ಲಾ ಆರೋಗ್ಯಾಧಿಕಾರಿ ಡಾ.ಅಮರನಾಥ್ ತಿಳಿಸಿದ್ದಾರೆ.

'ಎರಡು ದಿನಗಳಿಗೊಮ್ಮೆ 19 ಕೆ.ಎಲ್‌ನಷ್ಟು ಪ್ರಮಾಣದ ಮೂರು ಲಾರಿಗಳು ಜಿಲ್ಲೆಗೆ ಬಂದರೆ ಆಮ್ಲಜನಕದ ಕೊರತೆ ಎದುರಾಗುವ ಸಾಧ್ಯತೆಯಿಲ್ಲ. ಸದ್ಯ, ಇಷ್ಟು ಪ್ರಮಾಣದಲ್ಲಿ ಬಳ್ಳಾರಿಯಿಂದ ಪೂರೈಕೆಯಾಗುತ್ತಿದೆ' ಎನ್ನುತ್ತಾರೆ ಮೈಸೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆಯ ಡೀನ್ ಮತ್ತು ನಿರ್ದೇಶಕ ಡಾ.ನಂಜರಾಜ್.

ಹಾಸನದ ಹಿಮ್ಸ್‌ನಲ್ಲಿ 13 ಸಾವಿರ ಕಿಲೋ ಲೀಟರ್ ಸಾಮರ್ಥ್ಯದ ಆಮ್ಲಜನಕ ಘಟಕ ಇರುವುದರಿಂದ ಸದ್ಯಕ್ಕೆ ಸಮಸ್ಯೆ ಇಲ್ಲ.

ಏಳು ತಾಲ್ಲೂಕು ಕೇಂದ್ರಗಳ ಆಸ್ಪತ್ರೆಗಳಲ್ಲಿ 235 ಹಾಸಿಗೆ ಹಾಗೂ ಆರು ಸಮುದಾಯ ಆರೋಗ್ಯ ಕೇಂದ್ರಗಳಲ್ಲಿ 220 ಹಾಸಿಗೆ ವ್ಯವಸ್ಥೆ ಮಾಡಲಾಗಿದೆ. ಆಮ್ಲಜನಕದ ಕೊರತೆ ನೀಗಿಸಲು, ನಗರದ ಕೈಗಾರಿಕಾ ಪ್ರದೇಶದಲ್ಲಿರುವ ಅನಘ ಎಂಟರ್ ಪ್ರೈಸಸ್ (ಮಲ್ನಾಡ್ ಗ್ಯಾಸ್) ಗೆ ನಿತ್ಯ 500 ಸಿಲಿಂಡರ್ ಪೂರೈಸುವ ಜವಾಬ್ದಾರಿ ನೀಡಲಾಗಿದೆ. ತಾಲ್ಲೂಕು ಆಸ್ಪತ್ರೆ ಮತ್ತು ಸಮುದಾಯ ಆರೋಗ್ಯ ಕೇಂದ್ರಗಳಿಗೆ ಅನಘ ಎಂಟರ್‌ಪ್ರೈಸಸ್‌ನಿಂದ ವೈದ್ಯಕೀಯ ಆಮ್ಲಜನಕ (ಜಂಬೊ) ಸಿಲಿಂಡರ್ ದೊರೆಯುತ್ತಿದೆ.

ಹೆಚ್ಚಿದ ಒತ್ತಡ: ಮಡಿಕೇರಿಯ ಕೊಡಗು ಜಿಲ್ಲಾ ಆಸ್ಪತ್ರೆಯನ್ನೇ ಕೋವಿಡ್ ಆಸ್ಪತ್ರೆಯಾಗಿ ಪರಿವರ್ತಿಸಲಾಗಿದ್ದು, ಇಲ್ಲಿ 13 ಸಾವಿರ ಲೀಟರ್ ಸಾಮರ್ಥ್ಯದ ಆಮ್ಲಜನಕದ ಟ್ಯಾಂಕ್ ಅಳವಡಿಕೆ ಮಾಡಲಾಗಿದೆ. ಸದ್ಯಕ್ಕೆ ಆಮ್ಲಜನಕದ ಕೊರತೆ ಇಲ್ಲದಿದ್ದರೂ ಜಿಲ್ಲೆಯಲ್ಲಿ ಕೋವಿಡ್ ಪೀಡಿತರು ಹೆಚ್ಚುತ್ತಿರುವುದು ಆತಂಕಕ್ಕೆ ಕಾರಣವಾಗಿದೆ.

ಹೊರ ಜಿಲ್ಲೆಗಳಿಂದ ಮಡಿಕೇರಿಗೆ ರೋಗಿಗಳು ಬಂದು ಚಿಕಿತ್ಸೆಗೆ ದಾಖಲಾಗುತ್ತಿದ್ದು, ಹಾಸಿಗೆ ಕೊರತೆಯೂ ಎದುರಾಗುವ ಸಾಧ್ಯತೆ ಇದೆ. ಕೊಡಗಿನಲ್ಲಿ ಖಾಸಗಿ ಆಸ್ಪತ್ರೆಗಳ ಕೊರತೆಯಿದ್ದು ಜಿಲ್ಲಾ ಆಸ್ಪತ್ರೆಯ ಮೇಲೆಯೇ ಒತ್ತಡ ಹೆಚ್ಚಾಗಿದೆ.

ಪೂರೈಕೆಯಲ್ಲಿ ತಡವಾದರೆ ಢವಢವ

ಮಂಡ್ಯ: ಕೋವಿಡ್ ರೋಗಿಗಳಿಗೆ ಚಿಕಿತ್ಸೆ ನೀಡಲು ವೈದ್ಯರಿಗೆ ಯಾವುದೇ ಭಯವಿಲ್ಲ, ಆದರೆ ಆಮ್ಲಜನಕ ಪೂರೈಕೆಯಲ್ಲಿ ತಡವಾಗುತ್ತಿದ್ದರೆ ವೈದ್ಯರ ಎದೆಯಲ್ಲಿ ಢವಢವ ಆರಂಭವಾಗುತ್ತದೆ. ಇದು ಜಿಲ್ಲಾಸ್ಪತ್ರೆ ಹಾಗೂ ಜಿಲ್ಲೆಯ ತಾಲ್ಲೂಕು ಆಸ್ಪತ್ರೆಗಳ ಸ್ಥಿತಿ.

ಜಿಲ್ಲೆಯ 6 ತಾಲ್ಲೂಕು ಆಸ್ಪತ್ರೆಗಳಿಗೆ ಮೈಸೂರಿನಿಂದ ನಿತ್ಯ ಆಮ್ಲಜನಕದ 300 ಸಿಲಿಂಡರ್‌ಗಳು ಪೂರೈಕೆಯಾಗುತ್ತವೆ. ಸದ್ಯ ಸಿಲಿಂಡರ್ ಪೂರೈಕೆಯಲ್ಲಿ ವ್ಯತ್ಯಯ ಉಂಟಾಗುತ್ತಿರುವುದರಿಂದ, ವೈದ್ಯರು ಭಯಬೀಳುತ್ತಿದ್ದಾರೆ. ಜಿಲ್ಲೆಯ 10 ಸಮುದಾಯ ಆರೋಗ್ಯ ಕೇಂದ್ರ (ಸಿಎಚ್‌ಸಿ)ಗಳಿಗೆ ಆಮ್ಲಜನಕ ಪೂರೈಕೆ ಸ್ಥಗಿತಗೊಂಡಿದ್ದು, ಅಲ್ಲಿ ರೋಗಿಗಳನ್ನು ದಾಖಲಿಸಿಕೊಂಡಿಲ್ಲ.

ಜಿಲ್ಲಾ ಆಸ್ಪತ್ರೆಯಲ್ಲಿ 13 ಕಿಲೋ ಲೀಟರ್ ಸಾಮರ್ಥ್ಯದ ದ್ರವರೂಪದ ಆಮ್ಲಜನಕ ಘಟಕವಿದ್ದು 400 ರೋಗಿಗಳಿಗೆ ಚಿಕಿತ್ಸೆ ನೀಡಲಾಗುತ್ತಿದೆ. 2 ದಿನಗಳಿಗೊಮ್ಮೆ ಕಡ್ಡಾಯವಾಗಿ ಆಮ್ಲಜನಕ ಪೂರೈಕೆಯಾಗಬೇಕು. ಬೆಳ್ಳೂರು ಕ್ರಾಸ್‌ನ ಆದಿಚುಂಚನಗಿರಿ ಆಸ್ಪತ್ರೆಯಲ್ಲಿ 2 ಕಿಲೋ ಲೀಟರ್ ಸಾಮರ್ಥ್ಯದ ಆಮ್ಲಜನಕ ಘಟಕವಿದೆ. ಅಲ್ಲಿ ಆಮ್ಲಜನಕ ಪೂರೈಕೆಯಲ್ಲಿ ವ್ಯತ್ಯಯವಾಗಿರುವ ಕಾರಣ ರೋಗಿಗಳನ್ನು ಮಂಡ್ಯಕ್ಕೆ ಕಳುಹಿಸುತ್ತಿದ್ದಾರೆ.

'2 ದಿನಕ್ಕೊಮ್ಮೆ ದೊಡ್ಡ ಟ್ಯಾಂಕರ್ ಬರಬೇಕು. ಮೊನ್ನೆ ಸಣ್ಣ ಟ್ಯಾಂಕರ್ ಬಂದಿದ್ದನ್ನು ಕಂಡು ಗಾಬರಿಗೊಂಡೆವು. ತಕ್ಷಣ ಜಿಲ್ಲಾಧಿಕಾರಿಗೆ ಮಾಹಿತಿ ನೀಡಿ, ಇನ್ನೊಂದು ಟ್ಯಾಂಕರ್ ತರಿಸಿಕೊಳ್ಳುವಲ್ಲಿ ಯಶಸ್ವಿಯಾದೆವು. ನಿತ್ಯ ಎದೆಬಡಿತ ಹೆಚ್ಚಾಗುತ್ತಿದೆ. ಪರಿಸ್ಥಿತಿ ನಿಭಾಯಿಸುವುದು ಹೇಗೆ ಎಂಬ ಪ್ರಶ್ನೆ ಕಾಡುತ್ತಿದೆ' ಎಂದು ಮಿಮ್ಸ್ ನಿರ್ದೇಶಕ ಡಾ.ಎಂ.ಆರ್.ಹರೀಶ್ ಕಳವಳ ವ್ಯಕ್ತಪಡಿಸಿದರು.

ಕಲಬುರ್ಗಿ, ಬೀದರ್ ಜಿಲ್ಲೆಗಳಲ್ಲಿ ತೀವ್ರ ಕೊರತೆ

ಕಲಬುರ್ಗಿ: ಕಲ್ಯಾಣ ಕರ್ನಾಟಕದ ಹಲವೆಡೆ ಆಮ್ಲಜನಕ ಪೂರೈಕೆಯ ಸಮಸ್ಯೆ ತೀವ್ರವಾಗಿದೆ. ಉತ್ಪಾದನೆ ಇದ್ದರೂ ಅದನ್ನು ದಾಸ್ತಾನು ಮಾಡಿಕೊಳ್ಳುವ ವ್ಯವಸ್ಥೆ ಬಹುತೇಕ ಕಡೆ ಇಲ್ಲ.

ಕಲಬುರ್ಗಿಯ ಜಿಮ್ಸ್ ಆಸ್ಪತ್ರೆ (20 ಕೆ.ಎಲ್) ಹಾಗೂ ಬಸವೇಶ್ವರ ಆಸ್ಪತ್ರೆ (6 ಕೆ.ಎಲ್) ಹೊರತುಪಡಿಸಿ ಜಿಲ್ಲೆಯ ಯಾವ ಆಸ್ಪತ್ರೆಯಲ್ಲಿಯೂ ಆಮ್ಲಜನಕ ದಾಸ್ತಾನು ಮಾಡಿಕೊಳ್ಳುವ ವ್ಯವಸ್ಥೆ ಇಲ್ಲ. ಈ ಭಾಗದ ಬಹುದೊಡ್ಡ ಆಸ್ಪತ್ರೆ ಇಎಸ್‌ಐಸಿಯಲ್ಲಿಯೂ ಆಮ್ಲಜನಕ ಘಟಕ ಇಲ್ಲ. ಈಗಷ್ಟೇ ಟೆಂಡರ್ ಪ್ರಕ್ರಿಯೆ ಆರಂಭಗೊಂಡಿದೆ.

ಸದ್ಯ ಜಿಲ್ಲಾಡಳಿತದ ಬಳಿ 68 ಜಂಬೊ ಸಿಲಿಂಡರ್‌ಗಳು ಮಾತ್ರ ಇವೆ. ಆದರೆ, ತತ್‌ಕ್ಷಣಕ್ಕೆ 450 ಸಿಲಿಂಡರ್‌ಗಳ ಅವಶ್ಯಕತೆ ಇದೆ. ಸಿಲಿಂಡರ್‌ಗಳನ್ನು ತುಂಬಿಸಿಕೊಂಡು ಆಸ್ಪತ್ರೆಗಳಿಗೆ ಪೂರೈಕೆ ಮಾಡುವ ಸಂದರ್ಭದಲ್ಲಿಯೇ ರೋಗಿಗಳು ಕೊನೆಯುಸಿರೆಳೆಯುತ್ತಿರುವ ಘಟನೆಗಳು ವರದಿಯಾಗಿವೆ.

ಬೇಡಿಕೆ ಹೆಚ್ಚುತ್ತಿರುವುದರಿಂದ ಜಿಲ್ಲಾಡಳಿತ ಬಳ್ಳಾರಿಯಿಂದ ಟ್ಯಾಂಕರ್ ಮೂಲಕ ಆಮ್ಲಜನಕವನ್ನು ತರಿಸಿಕೊಂಡು ಹಂಚಿಕೆ ಮಾಡುತ್ತಿದೆ. ಆದರೆ, ಕೊರೊನಾ ಸೋಂಕಿತರ ಸಂಖ್ಯೆ ಹೆಚ್ಚುತ್ತಲೇ ಇರುವುದರಿಂದ ಆಮ್ಲಜನಕ ಬೇಡಿಕೆ ಹಾಗೂ ಪೂರೈಕೆಯ ಮಧ್ಯೆ ಅಗಾಧ ಅಂತರ ಕಂಡು ಬರುತ್ತಿದೆ. ನಗರದ ಕಾರ್ಖಾನೆಯೊಂದು ಆಮ್ಲಜನಕವನ್ನು ಉತ್ಪಾದನೆ ಮಾಡಿ ಹೆಚ್ಚಿನ ಬೆಲೆಗೆ ಮಹಾರಾಷ್ಟ್ರಕ್ಕೆ ಮಾರಾಟ ಮಾಡಿಕೊಳ್ಳುತ್ತಿದೆ ಎಂಬ ಆರೋಪವೂ ಇದೆ.

ಆಮ್ಲಜನಕ ಹೊತ್ತ ಟ್ಯಾಂಕರ್ ಬಂದರೆ ಅದನ್ನು ವಿವಿಧ ಸಿಲಿಂಡರ್‌ಗಳಿಗೆ ತುಂಬಿಸಲು ಗಂಟೆಗಟ್ಟಲೇ ಸಮಯ ಹಿಡಿಯುತ್ತದೆ.

'ನಮ್ಮ ಆಸ್ಪತ್ರೆಗೆ ನಿತ್ಯ 200 ಸಿಲಿಂಡರ್ ಅಗತ್ಯವಿದ್ದು, ಅದರ ಪೈಕಿ 100 ಸಿಲಿಂಡರ್‌ಗಳು ರಾಯಚೂರಿನಿಂದ ಬರುತ್ತಿದ್ದವು. ಅವು ಸ್ಥಗಿತಗೊಂಡಿದ್ದು, ಸ್ಥಳೀಯ ಉತ್ಪಾದಕರಿಂದ ಪಡೆಯಬೇಕಿದೆ. ಆದರೆ, ಇಲ್ಲಿ 50 ಸಿಲಿಂಡರ್‌ಗಳು ಮಾತ್ರ ಸಿಗುತ್ತಿವೆ' ಎಂದು ನಗರದ ಪ್ರಮುಖ ಖಾಸಗಿ ಆಸ್ಪತ್ರೆಯೊಂದರ ಮುಖ್ಯಸ್ಥರು ಹೇಳಿದರು.

ಬೀದರ್ ಜಿಲ್ಲೆಯಲ್ಲಿ ಬೇಡಿಕೆಯ ಶೇ 35ರಷ್ಟು ಸಿಲಿಂಡರ್‌ಗಳು ಮಾತ್ರ ಪೂರೈಕೆಯಾಗುತ್ತಿವೆ.

ಕೊಪ್ಪಳ ಜಿಲ್ಲೆಯಲ್ಲಿ ನಿತ್ಯ 1 ಸಾವಿರ ಟನ್ ಆಮ್ಲಜನಕ ಉತ್ಪಾದಿಸುವ 4 ಬೃಹತ್ ಕಾರ್ಖಾನೆಗಳು ಇವೆ. ಜಿಲ್ಲಾ ಆಸ್ಪತ್ರೆಯಲ್ಲಿ 6 ಸಾವಿರ ಲೀಟರ್ ಸಾಮರ್ಥ್ಯದ ಆಮ್ಲಜನಕ ಟ್ಯಾಂಕರ್ ಅಳವಡಿಸಲಾಗಿದೆ. ಜಿಲ್ಲೆಗೆ ಅಗತ್ಯವಾಗಿರುವಷ್ಟು ಸಿಲಿಂಡರ್‌ಗಳನ್ನು ತುಂಬಿಸಿಕೊಂಡು ಉಳಿದದ್ದನ್ನು ಮಾರಾಟ ಮಾಡಲಾಗುತ್ತಿದೆ.

ಯಾದಗಿರಿ, ರಾಯಚೂರು ಜಿಲ್ಲೆಯಲ್ಲಿ ಸದ್ಯಕ್ಕೆ ಯಾವುದೇ ಸಮಸ್ಯೆ ಇಲ್ಲ.

ಖಾಸಗಿ ಆಸ್ಪತ್ರೆಯಲ್ಲಿ ರೋಗಿಗಳ ಸಾವು

ಆಮ್ಲಜನಕ ಪೂರೈಕೆಯಲ್ಲಿನ ವ್ಯತ್ಯಯದಿಂದಾಗಿ ಮೇ 1ರಂದು ಕಲಬುರ್ಗಿಯ ಕೆಬಿಎನ್ ಆಸ್ಪತ್ರೆಯಲ್ಲಿ ಮೂವರು ರೋಗಿಗಳು ಸಾವಿಗೀಡಾಗಿದ್ದಾರೆ. ಆಸ್ಪತ್ರೆಯಿಂದಾದ ಲೋಪಗಳ ಬಗ್ಗೆ ತನಿಖೆ ನಡೆಸಲು ಜಿಲ್ಲಾಡಳಿತ ಸಮಿತಿ ರಚಿಸಿದೆ. ರೋಗಿಗಳ ಸಾವಿನ ಬಗ್ಗೆ ಮಾಹಿತಿ ಪಡೆದ ಜಿಲ್ಲಾ ಉಸ್ತುವಾರಿ ಸಚಿವ ಮುರುಗೇಶ ನಿರಾಣಿ ಮೂರು ದಿನಗಳಲ್ಲಿ ವರದಿ ಸಲ್ಲಿಸುವಂತೆ ಜಿಲ್ಲಾಧಿಕಾರಿ ಅವರಿಗೆ ಸೂಚನೆ ನೀಡಿದ್ದಾರೆ.



ಬಳ್ಳಾರಿ, ಧಾರವಾಡವೇ ನೆರೆ ಜಿಲ್ಲೆಗಳಿಗೆ ಆಧಾರ

ಹುಬ್ಬಳ್ಳಿ: ಬಳ್ಳಾರಿಯಲ್ಲಿ ನಾಲ್ಕು ಆಮ್ಲಜನಕ ಉತ್ಪಾದನಾ ಘಟಕಗಳಿದ್ದು ಧಾರವಾಡ ಜಿಲ್ಲೆಯಲ್ಲಿ ಮೂರು ಆಮ್ಲಜನಕ ಮರುಪೂರಣ ಘಟಕಗಳಿವೆ. ನೆರೆಯ ಬೆಳಗಾವಿ, ಬಾಗಲಕೋಟೆ, ಗದಗ, ಹಾವೇರಿ, ವಿಜಯಪುರ ಹಾಗೂ ಉತ್ತರ ಕನ್ನಡ ಜಿಲ್ಲೆಗಳ ವಿವಿಧ ಆಸ್ಪತ್ರೆಗೆ ಅಗತ್ಯದ ಆಮ್ಲಜನಕ ಟ್ಯಾಂಕರ್‌ಗಳಲ್ಲಿ ಪ್ರತಿದಿನ ಇಲ್ಲಿಂದಲೇ ಪೂರೈಕೆಯಾಗುತ್ತಿವೆ.



ಧಾರವಾಡದ ಸತ್ತೂರಿನಲ್ಲಿರುವ ಆಮ್ಲಜನಕ ಘಟಕ

ಬಳ್ಳಾರಿ ಜಿಲ್ಲೆಯ ಸಂಡೂರಿನಲ್ಲಿ ಆಮ್ಲಜನಕ ಉತ್ಪಾದಿಸುವ ನಾಲ್ಕು (ಪ್ರಾಕ್ಸ್ ಏರ್, ಬೈಲಾಕ್ಸ್, ಏರ್ ವಾಟರ್ ಸರ್ವಿಸ್ ಮತ್ತು ಜೆಎಸ್‌ಡಬ್ಲ್ಯು ಗ್ಯಾಸಸ್) ಘಟಕಗಳಿದ್ದು, ಪ್ರತಿ ದಿನ ಸರಾಸರಿ 1,000 ಟನ್ ಆಮ್ಲಜನಕ ಉತ್ಪಾದಿಸಲಾಗುತ್ತಿದೆ. ಜಿಲ್ಲೆಯಲ್ಲಿ ದಿನವೂ 40 ಕಿಲೋ ಲೀಟರ್ ಬಳಕೆಯಾಗುತ್ತಿದ್ದು, ಉಳಿದವನ್ನು ಮಂಗಳೂರಿನ ವೆನ್ಲಾಕ್, ಬಾಗಲಕೋಟೆ, ಬೆಳಗಾವಿ, ಉತ್ತರಕನ್ನಡ ಸೇರಿದಂತೆ ವಿವಿಧ ಜಿಲ್ಲೆಗಳ ಆಸ್ಪತ್ರೆಗಳಿಗೆ ರವಾನಿಸಲಾಗುತ್ತಿದೆ.

ಹುಬ್ಬಳ್ಳಿಯ ಕಿಮ್ಸ್‌ನಂತಹ ದೊಡ್ಡ ಆಸ್ಪತ್ರೆಗಳಲ್ಲಿ ಆಮ್ಲಜನಕ ಘಟಕಗಳೇ ಇರುವುದರಿಂದ ಅಲ್ಲಿಗೆ ನೇರವಾಗಿ ದ್ರವರೂಪದ ಆಮ್ಲಜನಕ ಪೂರೈಕೆ ಮಾಡಲಾಗುತ್ತಿದೆ. ಇಂತಹ ಘಟಕಗಳು ಇಲ್ಲದ ಆಸ್ಪತ್ರೆಗಳಿಗೆ ಸಿಲಿಂಡರ್ ಭರ್ತಿ ಮಾಡಿ ನೀಡಲಾಗುತ್ತಿದೆ. ಈ ಮೂರು ಆಮ್ಲಜನಕ ಮರುಪೂರಣ ಘಟಕಗಳು ನಿತ್ಯ ತಲಾ 25 ಟನ್ ಆಮ್ಲಜನಕ ಮರುಪೂರಣ ಮಾಡುತ್ತಿವೆ.

ಬೆಳಗಾವಿಯಲ್ಲಿ 2–3 ದಿನಗಳಷ್ಟೇ ಸಾಕು: ಬೆಳಗಾವಿ ಜಿಲ್ಲೆಯಲ್ಲಿ ಸದ್ಯ 2–3 ದಿನಗಳಿಗಷ್ಟೇ ಸಾಕಾಗಬಹುದಾದಷ್ಟು ಆಮ್ಲಜನಕ ಇದ್ದು, ನಿಯಮಿತವಾಗಿ ಪೂರೈಕೆ ಆಗದಿದ್ದಲ್ಲಿ ಕೊರತೆಯಾಗುವ ಸಾಧ್ಯತೆಯಿದೆ. ಧಾರವಾಡ ಹಾಗೂ ಬಳ್ಳಾರಿಯಿಂದ ಬರುವ ಆಮ್ಲಜನಕ ಟ್ಯಾಂಕರ್‌ಗಳನ್ನು ಬಿಮ್ಸ್ ಆಸ್ಪತ್ರೆಯ ಘಟಕದಲ್ಲಿ ತುಂಬಿಟ್ಟುಕೊಂಡು, ಬೇಡಿಕೆ ಇರುವ ಕಡೆ ಹಂಚಿಕೆ ಮಾಡಲಾಗುತ್ತಿದೆ. ಕೆಲವು ಖಾಸಗಿ ಆಸ್ಪತ್ರೆಗಳಲ್ಲಿ ಆಮ್ಲಜನಕದ ಕೊರತೆ ಕಾರಣ ಐವರು ರೋಗಿಗಳನ್ನು ಭಾನುವಾರ ಜಿಲ್ಲಾ ಆಸ್ಪತ್ರೆಗೆ ದಾಖಲಿಸಿದ್ದು ವರದಿಯಾಗಿದೆ.

ಸರ್ಕಾರಿ ಹಾಗೂ ಖಾಸಗಿ ಆಸ್ಪತ್ರೆಗಳಿಗೆ ನಿತ್ಯ 700 ಆಕ್ಸಿಜನ್ ಸಿಲಿಂಡರ್‌ಗಳಿಗೆ ಬೇಡಿಕೆ ಇದೆ. ಮಹಾರಾಷ್ಟ್ರದಲ್ಲಿ ಕೋವಿಡ್ ಪ್ರಕರಣಗಳಿರುವ ಕಾರಣ, ಕೊಲ್ಹಾಪುರದಿಂದ ಕರ್ನಾಟಕಕ್ಕೆ, ಪೂರೈಕೆಗೆ ತಡೆ ನೀಡಲಾಗಿದೆ. ಇದರಿಂದ ಶೇ 20ರಷ್ಟು ಕೊರತೆ ಉಂಟಾಗಿದೆ.

'ಇನ್ನೆರಡು ದಿನಗಳಲ್ಲಿ ಆಮ್ಲಜನಕ ಬೇಡಿಕೆ ನಿತ್ಯ 13 ಕಿಲೋ ಲೀಟರ್ ಗೆ ಹೆಚ್ಚಲಿದೆ. ಈಗಾಗಲೇ ಜಿಲ್ಲಾಡಳಿತದಿಂದ ಬೇಡಿಕೆ ಸಲ್ಲಿಸಲಾಗಿದೆ.

ಡಾ.ಅನಂತ ದೇಸಾಯಿ, ಜಿಲ್ಲಾ ಆರೋಗ್ಯಾಧಿಕಾರಿ, ಬಾಗಲಕೋಟೆ

ಆಮ್ಲಜನಕ ಬಳಕೆ ಪರಿಶೀಲನೆಗೆ ನೋಡಲ್ ಅಧಿಕಾರಿಗಳನ್ನು ನೇಮಿಸಲಾಗಿದೆ. ಸೋಂಕಿತರ ಸಂಖ್ಯೆ ಹೆಚ್ಚುತ್ತಿದ್ದು, ಇನ್ನೂ ಹೆಚ್ಚು ಪಡೆಯಲು ಕ್ರಮ ವಹಿಸಲಾಗಿದೆ

ಡಾ.ಕೆ. ಹರೀಶ್‌ಕುಮಾರ್
ಜಿಲ್ಲಾಧಿಕಾರಿ, ಬೆಳಗಾವಿ

ರೋಗಿಗಳು ಹೆಚ್ಚಾದರಷ್ಟೇ ಚಿಂತೆ

ಶಿವಮೊಗ್ಗ/ ದಾವಣಗೆರೆ/ ಚಿತ್ರದುರ್ಗ: ಶಿವಮೊಗ್ಗದ ಮೆಗ್ಗಾನ್ ಆಸ್ಪತ್ರೆಯಲ್ಲಿ 1,250 ಹಾಸಿಗೆಗಳಿವೆ. 1,100 ಹಾಸಿಗೆಗಳಿಗೆ ಆಮ್ಲಜನಕ ಪೂರೈಕೆ ವ್ಯವಸ್ಥೆ ಇದೆ. ಸದ್ಯ 300 ಕೋವಿಡ್ ರೋಗಿಗಳಿದ್ದಾರೆ. ಎಲ್ಲ ವ್ಯವಸ್ಥೆಗಳುಳ್ಳ 500 ಹಾಸಿಗೆಗಳು ಸಿದ್ಧವಿವೆ. ಉಳಿದ ಹಾಸಿಗೆಗಳಿಗೆ ಆಮ್ಲಜನಕ ಸೌಲಭ್ಯವಿದ್ದರೂ, ರೋಗಿಗಳ ಮುಖಕ್ಕೆ ಅಳವಡಿಸಲು ಪರಿಕರಗಳ ಕೊರತೆ ಇದೆ.

ಆಸ್ಪತ್ರೆ ಆಡಳಿತ ಮಂಡಳಿ ಅಗತ್ಯ ಯಂತ್ರಗಳನ್ನು ಖರೀದಿಸಿಲ್ಲ. ಇದರಿಂದ ಇನ್ನೂ 300 ಹಾಸಿಗೆಗಳು ಬಳಕೆಗೆ ಲಭ್ಯವಾಗಿಲ್ಲ.

ಆಸ್ಪತ್ರೆ ಆವರಣದಲ್ಲಿ 16 ಸಾವಿರ ಲೀಟರ್ ಆಮ್ಲಜನಕ ಸಂಗ್ರಹದ ಟ್ಯಾಂಕ್ ಸದಾ ತುಂಬಿರುತ್ತದೆ. ಬಳ್ಳಾರಿ ಜಿಲ್ಲೆಯ ತೋರಣಗಲ್‌ನ ಜಿಂದಾಲ್‌ನಿಂದ ಪ್ರತಿ ಎರಡು ದಿನಗಳಿಗೆ ಮೆಗ್ಗಾನ್ ಆವರಣಕ್ಕೆ ಆಮ್ಲಜನಕ ತುಂಬಿದ ಟ್ಯಾಂಕರ್ ಬರುತ್ತವೆ. ಇದರಿಂದ ಜಿಲ್ಲೆಯ ಎಲ್ಲೂ ಆಮ್ಲಜನಕ ಕೊರತೆಯಾಗಿಲ್ಲ.

ಶಿಕಾರಿಪುರ ತಾಲ್ಲೂಕು ಆಸ್ಪತ್ರೆಯಲ್ಲಿ ಸ್ಥಳೀಯವಾಗಿ ಆಮ್ಲಜನಕ ಉತ್ಪಾದಿಸಲು ಜನರೇಟರ್ ವ್ಯವಸ್ಥೆ ಕಲ್ಪಿಸಲಾಗಿದೆ. ಭದ್ರಾವತಿಯ ವಿಐಎಸ್‌ಎಲ್ ಆವರಣದ ಬಾಲದೋಟ ಆಮ್ಲಜನಕ ಘಟಕದಿಂದ ಭದ್ರಾವತಿಯ ಸರ್ಕಾರಿ, ಖಾಸಗಿ ಆಸ್ಪತ್ರೆಗಳಿಗೆ 500 ಲೀಟರ್ ಪೂರೈಸಲಾಗುತ್ತಿದೆ.

ಜಿಲ್ಲೆಯ ಎಲ್ಲ ತಾಲ್ಲೂಕು ಆಸ್ಪತ್ರೆಗಳಲ್ಲಿ ಕನಿಷ್ಠ 50 ಆಮ್ಲಜನಕ ಪೂರೈಕೆಯ ಹಾಸಿಗೆ ವ್ಯವಸ್ಥೆ ಕಲ್ಪಿಸಲಾಗಿದೆ.

ದಾವಣಗೆರೆಯಲ್ಲಿ ಕೊರತೆ ಇಲ್ಲ: ದಾವಣಗೆರೆ ಜಿಲ್ಲೆಯಲ್ಲಿ ಸದ್ಯಕ್ಕೆ ಆಮ್ಲಜನಕದ ಕೊರತೆ ಇಲ್ಲ. ರೋಗಿಗಳ ಸಂಖ್ಯೆ ಹೆಚ್ಚಾದರೆ ಈಗಿರುವ ವ್ಯವಸ್ಥೆ ಸಾಕಾಗುವುದಿಲ್ಲ.

ಖಾಲಿ ಆಗುವ ಆತಂಕದಲ್ಲೇ ಪೂರೈಕೆ

ಆಮ್ಲಜನಕ ಯಾವಾಗ ಖಾಲಿ ಆಗುತ್ತದೆ ಎಂಬ ಆತಂಕ ಚಿತ್ರದುರ್ಗ ಜಿಲ್ಲಾ ಆಸ್ಪತ್ರೆಯ ವೈದ್ಯರು ಹಾಗೂ ಕೋವಿಡ್ ರೋಗಿಗಳನ್ನು ಸದಾ ಕಾಡುತ್ತಿದೆ. ಆಮ್ಲಜನಕ ಪೂರೈಕೆಯಲ್ಲಿ ವ್ಯತ್ಯಯ ಉಂಟಾಗಿ ರೋಗಿಗಳು ಪರದಾಡಿದ ನಿದರ್ಶನವೂ ಇದೆ.

ಬಳ್ಳಾರಿ ಜಿಲ್ಲೆಯ ಜಿಂದಾಲ್‌ನಿಂದ ಹರಿಹರಕ್ಕೆ ಬರುವ ಆಮ್ಲಜನಕ ಚಿತ್ರದುರ್ಗಕ್ಕೂ ಸರಬರಾಜು ಆಗುತ್ತಿದೆ. ಎರಡು ದಿನಕ್ಕೆ ಒಂದು ಟ್ಯಾಂಕರ್ ಆಮ್ಲಜನಕವನ್ನು ಜಿಲ್ಲೆಗೆ ಒದಗಿಸಲಾಗುತ್ತಿದೆ. ಬಸವೇಶ್ವರ ವೈದ್ಯಕೀಯ ಕಾಲೇಜು ಆಸ್ಪತ್ರೆಯಲ್ಲಿ ಆಮ್ಲಜನಕ ಉತ್ಪಾದನಾ ಘಟಕ ಇದ್ದರೂ ಅಲ್ಲಿನ ರೋಗಿಗಳಿಗಷ್ಟೇ ಅದು ಸಾಕಾಗುತ್ತಿದೆ.

ತುರ್ತು ಸ್ಥಿತಿ ಎದುರಿಸುವಷ್ಟು ಸಂಗ್ರಹ

ಕೋಲಾರ, ಚಿಕ್ಕಬಳ್ಳಾಪುರ ಮತ್ತು ರಾಮನಗರ ಜಿಲ್ಲೆಗಳಲ್ಲಿ ಸದ್ಯಕ್ಕೆ ಆಮ್ಲಜನಕದ ಕೊರತೆ ಕಾಣುತ್ತಿಲ್ಲ. ತುರ್ತು ಪರಿಸ್ಥಿತಿ ಎದುರಿಸಲು ಬೇಕಾಗುವಷ್ಟು ಸಂಗ್ರಹ ಇದೆ ಎಂಬ ಆತ್ಮವಿಶ್ವಾಸದಲ್ಲಿ ಜಿಲ್ಲಾಡಳಿತ ಮತ್ತು ಆರೋಗ್ಯ ಇಲಾಖೆಗಳಿವೆ.

ಹೆಚ್ಚಿನ ಜಿಲ್ಲಾ ಆಸ್ಪತ್ರೆಗಳಲ್ಲಿ ಆಮ್ಲಜನಕ ಉತ್ಪಾದನಾ ಘಟಕಗಳಿರುವ ಕಾರಣ ಸಮಸ್ಯೆ ಆಗಿಲ್ಲ ಎನ್ನುವುದು ಮೇಲ್ನೋಟಕ್ಕೆ ಕಂಡುಬರುತ್ತಿದೆ. ಸರಬರಾಜು, ಸಂಗ್ರಹ ನೇರವಾಗಿ ಜಿಲ್ಲಾಧಿಕಾರಿಯ ನಿಗಾವಣೆಗೆ ಒಳಪಟ್ಟಿರುವ ಕಾರಣ ಕೊರತೆಯಾಗದಂತೆ ಮುನ್ನೆಚ್ಚರಿಕೆ ವಹಿಸಲಾಗಿದೆ. ಕೆಲವೆಡೆ ಖಾಸಗಿ ಕಂಪನಿಗಳಿಂದಲೂ ಆಮ್ಲಜನಕ ಖರೀದಿಸಲಾಗುತ್ತಿದೆ.

ತುಮಕೂರು ಜಿಲ್ಲಾ ಆಸ್ಪತ್ರೆಯಲ್ಲಿ ವೈದ್ಯಕೀಯ ಆಮ್ಲಜನಕ ಸಂಗ್ರಹ ಘಟಕವಿದ್ದು, ಈವರೆಗೂ ಹೆಚ್ಚಿನ ಸಮಸ್ಯೆಯಾಗಿಲ್ಲ. ಆಸ್ಪತ್ರೆಯಲ್ಲಿರುವ 250 ಹಾಸಿಗಗಳಲ್ಲಿ 50 ಹಾಸಿಗೆಗಳಿಗೆ ಮಾತ್ರ ವೆಂಟಿಲೇಟರ್, ಆಮ್ಲಜನಕದ ಸೌಲಭ್ಯ ಕಲ್ಪಿಸಲಾಗಿದೆ. ಆದರೆ, ತಾಲ್ಲೂಕು ಆಸ್ಪತ್ರೆಗಳಲ್ಲಿ ಬೆರಳೆಣಿಕೆಯಷ್ಟು ಹಾಸಿಗೆಗಳಿಗೆ ಮಾತ್ರ ಆಮ್ಲಜನಕದ ಸೌಲಭ್ಯ ಇದೆ.

ಖಾಸಗಿ ಸಹಭಾಗಿತ್ವ: ಕೋಲಾರ ಜಿಲ್ಲಾಡಳಿತವು ಹೋಂಡಾ ಕಂಪನಿಯ ನೆರವು ಪಡೆದು ಎಸ್‌ಎನ್‌ಆರ್ ಆಸ್ಪತ್ರೆಯಲ್ಲಿ 6 ಸಾವಿರ ಲೀಟರ್ ಸಾಮರ್ಥ್ಯದ ವೈದ್ಯಕೀಯ ಆಮ್ಲಜನಕ ಘಟಕ ಸ್ಥಾಪನೆಗೆ ಪ್ರಯತ್ನ ಆರಂಭಿಸಿದೆ.

ಆಮ್ಲಜನಕ ಸರಬರಾಜಿನ ಬಗ್ಗೆ ಪ್ರತಿದಿನ ನೋಡಲ್ ಅಧಿಕಾರಿಗಳಿಂದ ಮಾಹಿತಿ ಪಡೆಯುತ್ತಿದ್ದೇನೆ

ಆರ್. ಲತಾ, ಜಿಲ್ಲಾಧಿಕಾರಿ, ಚಿಕ್ಕಬಳ್ಳಾಪುರ

ಖಾಸಗಿ ಕಂಪನಿ ಜತೆ ಒಡಂಬಡಿಕೆ

ಬಿಡದಿಯಲ್ಲಿ ಇರುವ ಬೆನ್‌ಟ್ಲೀ ಕಂಪನಿಯಿಂದ ರಾಮನಗರ ಜಿಲ್ಲೆಗೆ ವೈದ್ಯಕೀಯ ಆಮ್ಲಜನಕ ಪೂರೈಕೆ ಆಗುತ್ತಿದೆ. ಜಿಲ್ಲೆಗೆ ನಿತ್ಯ 250 ಸಿಲಿಂಡರ್ ಪೂರೈಕೆ ಮಾಡುವಂತೆ ಕಂಪನಿ ಜೊತೆ ಒಪ್ಪಂದ ಮಾಡಿಕೊಳ್ಳಲಾಗಿದೆ. ನಿರಂತರವಾಗಿ ಆಮ್ಲಜನಕ ಉತ್ಪಾದನೆಗೆ ಅನುವಾಗುವಂತೆ ಕಂಪನಿಗೆ ಬೆಸ್ಕಾಂನಿಂದ ಪ್ರತ್ಯೇಕ ವಿದ್ಯುತ್ ಸಂಪರ್ಕ ವ್ಯವಸ್ಥೆ ಮಾಡಿಕೊಡಲಾಗಿದೆ.

ಕರಾವಳಿ: ಸದ್ಯಕ್ಕಿಲ್ಲ ಕೊರತೆ

ಮಂಗಳೂರು: ಕರಾವಳಿ ಹಾಗೂ ಚಿಕ್ಕಮಗಳೂರು ಜಿಲ್ಲೆಗಳಲ್ಲಿ ಸದ್ಯಕ್ಕೆ ವೈದ್ಯಕೀಯ ಆಮ್ಲಜನಕದ ಕೊರತೆ ಎದುರಾಗಿಲ್ಲ. ಮುಂಜಾಗ್ರತಾ ಕ್ರಮವಾಗಿ ಸರ್ಕಾರಿ ಹಾಗೂ ಖಾಸಗಿ ಕಂಪನಿಗಳ ಸಹಭಾಗಿತ್ವದಲ್ಲಿ ಜಿಲ್ಲಾ ಮತ್ತು ತಾಲ್ಲೂಕು ಆಸ್ಪತ್ರೆಗಳಲ್ಲಿ ಆಮ್ಲಜನಕ ಉತ್ಪಾದನಾ ಘಟಕ ನಿರ್ಮಾಣಕ್ಕೆ ಕಾರ್ಯಾದೇಶ ನೀಡಲಾಗಿದೆ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಈಗ ಪ್ರತಿದಿನ 8 ಟನ್ ಆಮ್ಲಜನಕ ಅಗತ್ಯವಿದೆ. ಸದ್ಯ 6.5 ಟನ್ ಸರಬರಾಜು ಇದೆ. ಜಿಲ್ಲೆಯ ವೆನ್ಲಾಕ್ ಆಸ್ಪತ್ರೆ ಮತ್ತು 8 ಖಾಸಗಿ ಆಸ್ಪತ್ರೆಗಳು 15 ದಿನಗಳಿಗೆ ಆಗುವಷ್ಟು ಆಮ್ಲಜನಕ ಸಂಗ್ರಹದ ವ್ಯವಸ್ಥೆಯನ್ನು ಹೊಂದಿವೆ.

ಬಳ್ಳಾರಿಯಿಂದ ದ್ರವೀಕೃತ ಆಮ್ಲಜನಕ: ಚಿಕ್ಕಮಗಳೂರು ಜಿಲ್ಲೆಯ ಸರ್ಕಾರಿ ಆಸ್ಪತ್ರೆಗಳಲ್ಲಿ ನಿತ್ಯ ಸರಾಸರಿ 1.5 ಸಾವಿರದಿಂದ 1.8 ಸಾವಿರ ಲೀಟರ್ ಆಕ್ಸಿಜನ್ ಬಳಕೆಯಾಗುತ್ತಿದೆ. ಈವರೆಗೆ ಆಮ್ಲಜನಕದ ಕೊರತೆ ಉಂಟಾಗಿಲ್ಲ.

ಉಡುಪಿ–ಬೇಡಿಕೆಯಷ್ಟು ಪೂರೈಕೆ: ಉಡುಪಿ ಜಿಲ್ಲೆಗೆ ನಿತ್ಯ 5 ರಿಂದ 6 ಸಾವಿರ ಕಿಲೋಲೀಟರ್ ಆಮ್ಲಜನಕ ಅಗತ್ಯವಿದ್ದು, ಬೇಡಿಕೆಯಷ್ಟು ಆಮ್ಲಜನಕ ಪೂರೈಕೆ ಇದೆ. ಮೂರು ಕಡೆ 51ಸಾವಿರ ಲೀಟರ್ ಸಾಮರ್ಥ್ಯದ ಆಮ್ಲಜನಕ ಸಂಗ್ರಹಣಾ ಘಟಕಗಳಿವೆ. ಜಿಲ್ಲಾ ಆಸ್ಪತ್ರೆಯಲ್ಲಿ 6ಸಾವಿರ ಕಿ.ಲೀ, ಮಣಿಪಾಲದ ಕೆಎಂಸಿ ಆಸ್ಪತ್ರೆಯಲ್ಲಿ 20ಸಾವಿರ ಕಿ.ಲೀ ಹಾಗೂ ಕಾಪು ತಾಲ್ಲೂಕಿನ ಬೆಳಪುವಿನಲ್ಲಿ 25ಸಾವಿರ ಕಿ.ಲೀ ಸಾಮರ್ಥ್ಯದ ಆಮ್ಲಜನಕ ಸಂಗ್ರಹಣಾ ಸ್ಥಾವರಗಳು ಇವೆ. ಆದರೆ, ಜಿಲ್ಲೆಯಲ್ಲಿ ಉತ್ಪಾದನಾ ಘಟಕಗಳಿಲ್ಲ.

ಜಿಲ್ಲೆಯಲ್ಲಿ ಸೋಂಕಿತರ ಸಂಖ್ಯೆ ಹೆಚ್ಚಾಗುತ್ತಿದ್ದು, ಮುಂದಿನ ದಿನಗಳಲ್ಲಿ ಕೊರತೆ ಕಾಡಬಹುದು ಎಂಬ ಆತಂಕವಿದೆ.

ಎಂಆರ್‌ಪಿಎಲ್‌ನಿಂದ ರಾಜ್ಯದಲ್ಲಿ 5 ಘಟಕ

'ಎಂಆರ್‌ಪಿಎಲ್ ಕಂಪನಿಯ ಮಂಗಳೂರಿನ ವೆನ್ಲಾಕ್ ಆಸ್ಪತ್ರೆ ಸೇರಿದಂತೆ ರಾಜ್ಯದ 5 ಕಡೆ ಆಮ್ಲಜನಕ ಉತ್ಪಾದನಾ ಘಟಕಗಳ ಸ್ಥಾಪನೆ ಮಾಡಲಿದೆ. ₹1.12 ಕೋಟಿ ವೆಚ್ಚದಲ್ಲಿ ವೆನ್ಲಾಕ್‌ನಲ್ಲಿ 930 ಎಲ್‌ಪಿಎಂ ಸಾಮರ್ಥ್ಯದ ಘಟಕ ಆರಂಭಿಸಲು ಈಗಾಗಲೇ ಕಾರ್ಯಾದೇಶ ನೀಡಲಾಗಿದೆ' ಎಂದು ಕಂಪನಿಯ ವ್ಯವಸ್ಥಾಪಕ ನಿರ್ದೇಶಕ ಎಂ. ವೆಂಕಟೇಶ್ ತಿಳಿಸಿದ್ದಾರೆ.

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in



❦ ಸುಭಾಷಿತ ❦

ಪುಸ್ತಕಗಳಿರುವುದು ಅದಕ್ಕಾಗಿಯೇ... ಒಂದಿಂಚೂ ಚಲಿಸದೆ ಸಂಚರಿಸುವ ಸಲುವಾಗಿ.

-ಜುಂಪಾ ಲಹಿರಿ

ಸಾವಿನ ಬಾಗಿಲಿಗೆ ಬಲವಂತದಿಂದ ತಳ್ಳಬೇಡಿ, ಪ್ರಾಣವಾಯು ಒದಗಿಸಿ

ಚಾಮರಾಜನಗರದ ಸರ್ಕಾರಿ ಕೋವಿಡ್ ಆಸ್ಪತ್ರೆಯಲ್ಲಿ ಒಂದೇ ದಿನ 23 ಜನ ಕೋವಿಡ್‌ಪೀಡಿತರು ಹಾಗೂ ಜಿಲ್ಲೆಯ ಹನೂರು ಸಮೀಪದ ಆಸ್ಪತ್ರೆಯೊಂದರಲ್ಲಿ ಮತ್ತೊಬ್ಬ ರೋಗಿ ಸೇರಿದಂತೆ 24 ಮಂದಿ ಸಾವಿಗೀಡಾಗಿರುವ ವಿದ್ಯಮಾನ ಆಘಾತಕಾರಿ, ಹೃದಯವಿದ್ರಾವಕ. ಅದರಲ್ಲೂ ಹಲವರು ಆಮ್ಲಜನಕದ ಕೊರತೆಯಿಂದ ಕೊನೆಯುಸಿರು ಎಳೆಯುವಂತಾಗಿದ್ದು ಸದ್ಯದ ಪರಿಸ್ಥಿತಿಯ ಕ್ರೂರ ವ್ಯಂಗ್ಯ. ರಾಜ್ಯದ ಆಡಳಿತದ ಚುಕ್ಕಾಣಿ ಹಿಡಿದವರು ಸಾಂಕ್ರಾಮಿಕದ ಈ ಸನ್ನಿವೇಶವನ್ನು ಎಷ್ಟೊಂದು ಕೆಟ್ಟದಾಗಿ ನಿರ್ವಹಣೆ ಮಾಡುತ್ತಿದ್ದಾರೆ ಎನ್ನುವುದಕ್ಕೂ ಈ ಘಟನೆ ದ್ಯೋತಕ. ಆಸ್ಪತ್ರೆಗಳಲ್ಲಿ ತರಗೆಲೆಗಳಂತೆ ಜೀವಗಳು ಉದುರುತ್ತಿರುವಾಗ ಕಣ್ಮುಚ್ಚಿ ಕುಳಿತಿದ್ದ ಜನಪ್ರತಿನಿಧಿಗಳು, ಈಗ ತಮ್ಮ ಜನಪರ ಕಾಳಜಿ ಕುರಿತು ಟ್ವೀಟ್‌ಗಳಲ್ಲಿ ಪುಂಖಾನುಪುಂಖವಾಗಿ ಬರೆಯುತ್ತಿದ್ದಾರೆ. ಇಂಥವರನ್ನು ಆಯ್ಕೆ ಮಾಡಿ ಕಳುಹಿಸಿದ್ದಕ್ಕೆ ಜನಸಾಮಾನ್ಯರು ತಮ್ಮನ್ನೇ ತಾವು ಹಳಿದುಕೊಳ್ಳುವಂತಾಗಿದೆ. ಕೋವಿಡ್‌ನ ಎರಡನೇ ಅಲೆಯ ತೀವ್ರತೆ ಕುರಿತು ತಜ್ಞರು ಪದೇ ಪದೇ ಎಚ್ಚರಿಕೆ ನೀಡಿದರೂ ಜಿಲ್ಲಾ ಆಡಳಿತಗಳನ್ನು ಸನ್ನದ್ಧಗೊಳಿಸಲು ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರೂ ವಿಫಲರಾಗಿದ್ದಾರೆ ಎನ್ನದೆ ವಿಧಿಯಿಲ್ಲ. ಕೋವಿಡ್ ಸೋಂಕಿತರ ಸಾವಿನ ಪ್ರಮಾಣ ಇಷ್ಟೊಂದು ಹೆಚ್ಚುತ್ತಿರುವುದಕ್ಕೆ ಸಕಾಲದಲ್ಲಿ ಅವರಿಗೆ ಆಮ್ಲಜನಕದ ವ್ಯವಸ್ಥೆ ಆಗದಿರುವುದೇ ಪ್ರಮುಖ ಕಾರಣ. ವೈದ್ಯಕೀಯ ಸೌಲಭ್ಯಗಳ ಸಿದ್ಧತೆಗೆ ಹೆಚ್ಚಿನ ಸಮಯಾವಕಾಶ ಇದ್ದರೂ ನಿರ್ಲಕ್ಷ್ಯದಿಂದ ಕೈಕಟ್ಟಿ ಕುಳಿತ ಆರೋಗ್ಯ ಇಲಾಖೆಯು ಕೋವಿಡ್‌ಪೀಡಿತರ ಸಂಕಟವನ್ನು ಹೆಚ್ಚಿಸಿದೆ. ಆಮ್ಲಜನಕ ಪೂರೈಕೆಗೆ ಸಮರ್ಪಕ ವ್ಯವಸ್ಥೆ ಮಾಡದೆ ಸೋಂಕಿತರು ಏದುಸಿರುಬಿಡಲು ಕಾರಣವಾಗಿದೆ. 'ಚಾಮರಾಜನಗರ ಆಸ್ಪತ್ರೆಯ ಎಲ್ಲ ಸೋಂಕಿತರ ಸಾವನ್ನು ಆಮ್ಲಜನಕದ ಕೊರತೆಯೊಂದಿಗೆ ಸಮೀಕರಿಸುವುದು ಸರಿಯಲ್ಲ' ಎಂದು ಅಲ್ಲಿನ ಜಿಲ್ಲಾಧಿಕಾರಿ ಅವರೇನೋ ಹೇಳಿಕೆ ನೀಡಿದ್ದಾರೆ. ಆದರೆ, ಸಾವಿಗೀಡಾದ ಎಲ್ಲ ರೋಗಿಗಳೂ ಉಸಿರಾಟದ ಸಮಸ್ಯೆಯಿಂದ ಬಳಲುತ್ತಿದ್ದರು. ಅವರೆಲ್ಲರೂ ಉಸಿರಾಟಕ್ಕೆ ಆಮ್ಲಜನಕದ ಸಿಲಿಂಡರ್‌ಗಳನ್ನೇ ಅವಲಂಬಿಸಿದ್ದರು ಮತ್ತು ಅದೇ ಸಮಯದಲ್ಲಿ ಆಸ್ಪತ್ರೆಗೆ ಆಮ್ಲಜನಕದ ಕೊರತೆ ಎದುರಾಗಿತ್ತು ಎನ್ನುತ್ತವೆ ವರದಿಗಳು. ಕುದುರೆಗಳೆಲ್ಲ ಓಡಿಹೋದ ಮೇಲೆ ಲಾಯಕ್ಕೆ ಬೀಗ ಹಾಕಿದಂತೆ ಈಗ ಸಾವಿನ ಕಾರಣವನ್ನು ಪತ್ತೆ ಮಾಡಲು ಜಿಲ್ಲಾ ಉಸ್ತುವಾರಿ ಸಚಿವರು ಆದೇಶಿಸಿದ್ದಾರೆ. ಆದರೆ, ಜನ ಕೇಳುತ್ತಿರುವುದು ಸಾವಿನ ಕಾರಣ ಪತ್ತೆ ಮಾಡಿ ಎಂದಲ್ಲ; ಉಸಿರು ನಿಲ್ಲದಂತೆ ನೋಡಿಕೊಳ್ಳಲು ಪ್ರಾಣವಾಯು ಕೊಟ್ಟು ಪುಣ್ಯ ಕಟ್ಟಿಕೊಳ್ಳಿ ಎಂದು. ಸರ್ಕಾರಿ ಆಸ್ಪತ್ರೆಗಳಲ್ಲಿ ಆಮ್ಲಜನಕವಿಲ್ಲದೆ ಬಿದ್ದು ಒದ್ದಾಡುವವರ ಸಂಕಟ, ಸುಸಜ್ಜಿತ ಖಾಸಗಿ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆಯುವವರಿಗೆ ಹೇಗೆ ಅರ್ಥವಾಗಬೇಕು?



ಚಾಮರಾಜನಗರದಲ್ಲಿ ನಡೆದಿರುವ ದುರಂತವು ಮಾನವೀಯತೆಗೆ ಬಿದ್ದ ಕೊಡಲಿ ಪೆಟ್ಟಲ್ಲದೆ ಬೇರೇನಲ್ಲ. ತಪ್ಪಿತಸ್ಥರಿಗೆ ಶಿಕ್ಷೆ ಆಗಲೇಬೇಕು. ಪ್ರತಿಯೊಂದು ವೈಫಲ್ಯಕ್ಕೂ ಉತ್ತರದಾಯಿತ್ವದ ಹೊಣೆಗಾರಿಕೆ ಸ್ಪಷ್ಟಗೊಳ್ಳಬೇಕು

ಆರೋಗ್ಯ ಸಚಿವ ಕೆ.ಸುಧಾಕರ್ ಅವರಿಗೆ ಪರಿಸ್ಥಿತಿಯ ತೀವ್ರತೆ ಎಷ್ಟಿದೆ ಎಂಬ ಅಂದಾಜು ಇದ್ದಂತಿಲ್ಲ. ಹೋದಲ್ಲೆಲ್ಲ 'ಆಮ್ಲಜನಕದ ಕೊರತೆ ಇಲ್ಲ' ಎಂದು ಬಿಡುಬೀಸಾಗಿ ಹೇಳಿಕೆ ನೀಡುತ್ತಿರುವ ಅವರು, ಜಿಲ್ಲೆಗಳ ಸ್ಥಿತಿಯನ್ನು ಕಣ್ತೆರೆದು ನೋಡಬೇಕು. ಕಲಬುರ್ಗಿಯಲ್ಲಿ ಆಮ್ಲಜನಕದ ಕೊರತೆಯಿಂದ ಸಾವುಗಳು ಸಂಭವಿಸಿದ ಬೆನ್ನ ಹಿಂದೆಯೇ ಈಗ ಚಾಮರಾಜನಗರದಲ್ಲಿ ದುರಂತ ಸಂಭವಿಸಿದೆ. ಸಚಿವರು ನೀಡುವ ಮಾಹಿತಿಗೂ ವಾಸ್ತವಿಕ ಅಂಶಗಳಿಗೂ ಅಜಗಜಾಂತರ ಇರುವುದು ಸುಸ್ಪಷ್ಟ. ಜನಸಾಮಾನ್ಯರು ಆಮ್ಲಜನಕದ ಸಿಲಿಂಡರ್ ಮತ್ತು ಕಾನ್ಸಂಟ್ರೇಟರ್‌ಗಳಿಗೆ ಹೇಗೆ ಒದ್ದಾಡುತ್ತಿದ್ದಾರೆ ಎಂಬುದು ನಗರ ಪ್ರದೇಶಗಳಲ್ಲಿ ಒಂದು ಸುತ್ತು ಹಾಕಿದರೆ ಅರಿವಿಗೆ ಬರುತ್ತದೆ. 'ಪಿಎಂ ಕೇರ್ಸ್' ಅಡಿಯಲ್ಲಿ ಕಳೆದ ಅಕ್ಟೋಬರ್‌ನಲ್ಲಿಯೇ ರಾಜ್ಯಕ್ಕೆ ಆರು ಆಮ್ಲಜನಕ ಉತ್ಪಾದನಾ ಘಟಕಗಳು ಮಂಜೂರಾಗಿವೆ. ಇದುವರೆಗೆ ಒಂದು ಘಟಕವೂ ಕಾರ್ಯಾರಂಭ ಮಾಡಿಲ್ಲ. ಅದೇ ಪಕ್ಕದ ಕೇರಳವು ಆಮ್ಲಜನಕ ಉತ್ಪಾದನೆಯ ವಿಚಾರದಲ್ಲಿ ಮುನ್ನೆಚ್ಚರಿಕೆಯ ಕ್ರಮ ಕೈಗೊಂಡು ಕೊರತೆಯಾಗದಂತೆ ನೋಡಿಕೊಂಡಿದೆ. ತುರ್ತು ನಿಗಾ ಘಟಕಗಳ ವ್ಯವಸ್ಥೆ, ಕೋವಿಡ್ ಆರೈಕೆ ಕೇಂದ್ರಗಳ ಸ್ಥಾಪನೆ, ಜೀವರಕ್ಷಕ ಔಷಧಿಗಳ ಪೂರೈಕೆ ಹಾಗೂ ಲಸಿಕೆ ನೀಡುವಿಕೆ ಯಾವ ವಿಷಯದಲ್ಲೂ ರಾಜ್ಯ ವ್ಯವಸ್ಥಿತವಾಗಿ ಕಾರ್ಯ ನಿರ್ವಹಿಸುತ್ತಿಲ್ಲ. ಚಾಮರಾಜನಗರದಲ್ಲಿ ನಡೆದ ಈ ದುರಂತವು ಮಾನವೀಯತೆಗೆ ಬಿದ್ದ ಕೊಡಲಿ ಪೆಟ್ಟಲ್ಲದೆ ಬೇರೇನಲ್ಲ. ತಪ್ಪಿತಸ್ಥರಿಗೆ ಶಿಕ್ಷೆ ಆಗಲೇಬೇಕು. ಪ್ರತಿಯೊಂದು ವೈಫಲ್ಯಕ್ಕೂ ಉತ್ತರದಾಯಿತ್ವದ ಹೊಣೆಗಾರಿಕೆ ಸ್ಪಷ್ಟಗೊಳ್ಳಬೇಕು. ಜೋರ್ಡನ್‌ನಲ್ಲಿ ಕೆಲವು ಸೋಂಕಿತರು ಆಮ್ಲಜನಕದ ಕೊರತೆಯಿಂದ ಸತ್ತಾಗ ಅಲ್ಲಿನ ಆರೋಗ್ಯ ಸಚಿವರು ನೈತಿಕ ಹೊಣೆ ಹೊತ್ತು ರಾಜೀನಾಮೆಯನ್ನೇ ನೀಡಿದರು. ನಮ್ಮ ದೇಶದಲ್ಲಿ ನೈತಿಕತೆಯನ್ನು ಅಷ್ಟೊಂದು ಉಚ್ಛ್ರಾಯ ಸ್ಥಿತಿಯಲ್ಲಿ ನಿರೀಕ್ಷಿಸುವಂತಿಲ್ಲ. ಏಕೆಂದರೆ, ಮನುಷ್ಯರ ಸಾವುಗಳೆಂದರೆ ಇಲ್ಲಿ ಅಧಿಕಾರದ ಚುಕ್ಕಾಣಿ ಹಿಡಿದವರ ಪಾಲಿಗೆ ಅಂಕಿಗಳು ಮಾತ್ರ.

ದಿನದ ಟ್ವೀಟ್

ಪಾರದರ್ಶಕ ವ್ಯವಸ್ಥೆ ಇರಲಿ



ಚಾಮರಾಜನಗರದಿಂದ ಭಯಾನಕ ಸುದ್ದಿ ಬಂದಿದೆ. ಸರ್ಕಾರಿ ಆಸ್ಪತ್ರೆಯಲ್ಲಿ ಆಮ್ಲಜನಕದ ಕೊರತೆಯಿಂದ ಕೋವಿಡ್ ರೋಗಿಗಳು ಸಾವಿಗೀಡಾಗಿದ್ದಾರೆ. ಸಚಿವರು ಮತ್ತು ಜಿಲ್ಲಾಧಿಕಾರಿ ನಡುವೆ ಪರಸ್ಪರ ದೋಷಾರೋಪದ ಆಟ ಶುರುವಾಗಿದೆ. ಆಮ್ಲಜನಕದ ಲಭ್ಯತೆ ಕುರಿತು ಪಾರದರ್ಶಕ ಮೇಲ್ವಿಚಾರಣಾ ವ್ಯವಸ್ಥೆ ಯಾಕಿಲ್ಲ? ಇಂತಹದ್ದೊಂದು ವ್ಯವಸ್ಥೆ ಜಾರಿಗೆ ಬರಲಿ.

ಸುಪ್ರೀತ್ ವಸಿಷ್ಠ, ನಾಗರಿಕ

25 ವರ್ಷಗಳ ಹಿಂದೆ

ಶನಿವಾರ, 4-5-1996

• ಬಂಧಿತ ಚಂದ್ರಸ್ವಾಮಿ ತಿಹಾರ್ ಜೈಲಿಗೆ

ನವದೆಹಲಿ, ಮೇ 3 (ಪಿಟಿಐ, ಯುಎನ್‌ಐ)– ವಂಚನೆ ಪ್ರಕರಣದಲ್ಲಿ ಶಾಮೀಲಾಗಿ, ಬಹುದಿನಗಳ ನಿರೀಕ್ಷೆಯಂತೆ ನಿನ್ನೆ ರಾತ್ರಿ ಹಠಾತ್ತಾಗಿ ಬಂಧನಕ್ಕೊಳಗಾದ, ಪ್ರತಿಷ್ಠಿತ ರಾಜಕಾರಣಿಗಳನ್ನು ಬುಟ್ಟಿಯಲ್ಲಿ ಹಾಕಿಕೊಂಡು ತಿರುಗಾಡುತ್ತಿದ್ದ ವಿವಾದಾಸ್ಪದ ಸಾಧು ಚಂದ್ರಸ್ವಾಮಿ ಅವರನ್ನು ಇಂದು ತಿಹಾರ್ ಸೆರೆಮನೆಗೆ ಕಳುಹಿಸಲಾಯಿತು.

ಚಂದ್ರಸ್ವಾಮಿ ಹಾಗೂ ಅವರ ಕಾರ್ಯದರ್ಶಿ ಕೈಲಾಸ್‌ನಾಥ್ ಅಗರ್‌ವಾಲ್ ಅವರನ್ನು ನಿನ್ನೆ ರಾತ್ರಿ ಮದ್ರಾಸಿನಲ್ಲಿ ಬಂಧಿಸಲಾಗಿತ್ತು.

• ದಳದ ಅಧ್ಯಕ್ಷ ಸ್ಥಾನಕ್ಕೆ ಇಬ್ರಾಹಿಂ ರಾಜೀನಾಮೆ

ಬೆಂಗಳೂರು, ಮೇ 3– ಪ್ರದೇಶ ಜನತಾ ದಳದ ಅಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ನೀಡಲು ತಾವು ನಿರ್ಧರಿಸಿರುವುದಾಗಿ ಸಿ.ಎಂ.ಇಬ್ರಾಹಿಂ ಇಂದು ತಿಳಿಸಿದರು.

ಪಕ್ಷದ ಬಗೆಗಿನ ಸಮಸ್ಯೆಗಳ ಬಗ್ಗೆ ಚರ್ಚಿಸಲು ರಾಜ್ಯ ಸಮಿತಿ ಸಭೆ ಕರೆಯಬೇಕೆಂಬ ರಾಮಕೃಷ್ಣ ಹೆಗಡೆ ಅವರ ಸೂಚನೆಯನ್ನು ತಾವು ತಳ್ಳಿಹಾಕಿದುದಾಗಿ ಪ್ರಕಟವಾಗಿರುವುದು ಮತ್ತು ಇದರಿಂದಾಗಿ ತಾವು ರಾಜೀನಾಮೆ ನೀಡುತ್ತಿರುವುದಾಗಿ ಹೇಳುವುದು ಸರಿಯಲ್ಲ, ವೈಯಕ್ತಿಕ ಕಾರಣಗಳಿಗಾಗಿ ರಾಜೀನಾಮೆ ನೀಡುತ್ತಿರುವುದಾಗಿ ಅವರು ತಿಳಿಸಿದರು.

50 ವರ್ಷಗಳ ಹಿಂದೆ

ಮಂಗಳವಾರ, 4-5-1971

• 'ಕ್ಯಾಬರೆ'ಗಳ ಮೇಲೆ ಸೆನ್ಸಾರ್ ಕೆಂಗಣ್ಣು

ಮದ್ರಾಸ್, ಮೇ 3– 'ಚಲನಚಿತ್ರಗಳಲ್ಲಿ ಕತೆಗೆ ಸಂಬಂಧಿಸದೇ ಇರುವ ಕ್ಯಾಬರೆ ನೃತ್ಯಗಳನ್ನು ಸೇರಿಸುವ ಪ್ರವೃತ್ತಿ ನಿರ್ಮಾಪಕರಲ್ಲಿ ಬೆಳೆದು ಬಂದಿದೆ. ಕೆಲವು ಸಂದರ್ಭಗಳಲ್ಲಂತೂ ಈ ನೃತ್ಯಗಳಲ್ಲಿನ ಚಲನವಲನಗಳು, ಹೆಣ್ಣಿನ ಅಂಗಾಂಗಗಳನ್ನು ಪ್ರಚೋದಕವಾದ ರೀತಿಯಲ್ಲಿ ಲೈಂಗಿಕಾಕರ್ಷಣೆ ಇರುವಂತೆ ತೋರಿಸುವಂತಿರುತ್ತವೆ'.

–ಇದು ಕೇಂದ್ರ ಸೆನ್ಸಾರ್ ಮಂಡಳಿ ವ್ಯಕ್ತಪಡಿಸಿರುವ ಅಭಿಪ್ರಾಯ.

'ಚಿತ್ರಗಳಲ್ಲಿ ಕ್ಯಾಬರೆ ನೃತ್ಯಗಳನ್ನು ಸೇರಿಸುವಾಗ ಹೆಚ್ಚಿನ ಎಚ್ಚರಿಕೆ ವಹಿಸಲು ನಿರ್ಮಾಪಕರಿಗೆ ಸೂಚಿಸಿ' ಎಂದು ಸೆನ್ಸಾರ್ ಮಂಡಳಿ ಅಧ್ಯಕ್ಷರು ದಕ್ಷಿಣ ಭಾರತ ಫಿಲಂ ಚೇಂಬರ್‌ಗೆ ಬರೆದಿರುವ ಪತ್ರವೊಂದರಲ್ಲಿ ತಿಳಿಸಿದ್ದಾರೆ.

• ಹಿಂದುಳಿದ ವರ್ಗದವರಿಗೆ ಸ್ಥಾನ ಮೀಸಲಿಡುವ ರಾಜ್ಯದ ವೈದ್ಯಕೀಯ ಕಾಲೇಜುಗಳ ನಿಯಮ ಸಿಂಧು

ನವದೆಹಲಿ, ಮೇ 3– ಹಿಂದುಳಿದ ವರ್ಗದವರು ಮತ್ತು ರಾಜಕೀಯ ಸಂತ್ರಸ್ತರ ಮಕ್ಕಳಿಗೆ ಸ್ಥಾನಗಳನ್ನು ಮೀಸಲಿಡುವ ಮೈಸೂರು ವೈದ್ಯಕೀಯ ಕಾಲೇಜುಗಳ (ಪ್ರವೇಶಕ್ಕಾಗಿ ಆಯ್ಕೆ) 1970ರ ನಿಯಮಗಳು ಕ್ರಮಬದ್ಧವೆಂದು ಸುಪ್ರೀಂ ಕೋರ್ಟ್ ಇಂದು ಎತ್ತಿ ಹಿಡಿಯಿತು.

ಇಬ್ಬರು ಮಹಿಳಾ ರಾಜಕಾರಣಿಗಳ ವಿಭಿನ್ನ ಮಾದರಿ ದೇಶಕ್ಕೆ ಹೊಸ ಹಾದಿ ತೋರಿಸಬಲ್ಲದು...

ಮಮತಾ ದೀದಿ ಮತ್ತು ಶೈಲಜಾ ಟೀಚರ್



ವಿಶ್ಲೇಷಣೆ

ನಟರಾಜ್ ಹುಳಿಯಾರ್

ಪಶ್ಚಿಮ ಬಂಗಾಳದ ಮಮತಾ ಬ್ಯಾನರ್ಜಿಯವರ ವೀಲ್ ಚೇರ್ ಹೋರಾಟ ಅಳ್ಳೆದೆಯ ನಾಯಕರಿಗೆಲ್ಲ ಅದ್ಭುತ ಸ್ಫೂರ್ತಿಯಾಗಬಲ್ಲದು. ಹಾಗೆಯೇ, ಕೇರಳದ ಆರೋಗ್ಯಮಂತ್ರಿ ಶೈಲಜಾ ಟೀಚರ್ ತೋರಿಸಿಕೊಟ್ಟ 24x7 ಕರ್ತವ್ಯಬದ್ಧತೆ ಮಾನವಂತ ರಾಜಕಾರಣಿಗಳಿಗೆಲ್ಲ ಮಾದರಿಯಾಗಬಲ್ಲದು.

'ಬಿಜೆಪಿ ಬಂಗಾಳದಲ್ಲಿ ಹೇಗೆ ಗೆಲ್ಲುತ್ತೆ? ನಾನು ಗೋಲ್ ಕೀಪರ್ ಆಗಿರೋತನಕ ಸಾಧ್ಯವೇ ಇಲ್ಲ!' ಎಂದು ಮಮತಾ ಆತ್ಮವಿಶ್ವಾಸದಿಂದ ಹೇಳುತ್ತಲೇ ಇದ್ದರು. ತಮ್ಮ ಬಂಟನಾಗಿದ್ದ ಸುವೇಂದು ಅಧಿಕಾರಿ ತೃಣಮೂಲ ಕಾಂಗ್ರೆಸ್ ಬಿಟ್ಟಾಗ ಮಮತಾ ಹೊಸ ಸವಾಲೊಂದನ್ನು ಕೈಗೆತ್ತಿಕೊಂಡರು. ತಮ್ಮ ರಾಜಕೀಯ ಬದುಕಿಗೆ ತಿರುವು ಕೊಟ್ಟಿದ್ದ ನಂದಿಗ್ರಾಮದಲ್ಲಿ ಸುವೇಂದು ಎದುರಿಗೇ ಚುನಾವಣೆಗೆ ನಿಂತರು. ನಂದಿಗ್ರಾಮದಲ್ಲಿ ಚುನಾವಣಾ ಪ್ರಚಾರ ಶುರುವಾದ ದಿನ ಇದ್ದಕ್ಕಿದ್ದಂತೆ ಮಮತಾ ಕಾಲಿಗೆ ಪೆಟ್ಟಾಯಿತು. ಇದು ಆಕಸ್ಮಿಕವೋ ಯೋಜಿತವೋ? ಖಚಿತವಾಗಿ ಹೇಳಲಾಗದು!

ಪ್ಲಾಸ್ಟರ್ ಹಾಕಿಕೊಂಡಿದ್ದ ಮಮತಾ ಮುರಿದ ಕಾಲನ್ನು ಅಲ್ಲಾಡಿಸುತ್ತಿದ್ದಾರೆ ಎಂಬ ಹೀನ ಟ್ರೋಲಿಂಗೂ ಶುರುವಾಯಿತು. ಸಡಿಲ ನಾಲಗೆಯ ದುಶ್ಯಾಸನರು ಮಮತಾ ಸೀರೆಯವರೆಗೂ ಅಣಕವಾಡಿದರು. ವೀಲ್ ಚೇರಿನಲ್ಲಿ ಮೈಕ್ ಹಿಡಿದ ಮಮತಾ ಅದಕ್ಕೆಲ್ಲ ಬಗ್ಗಲಿಲ್ಲ. ನಂದಿಗ್ರಾಮದಲ್ಲೇ ಅವರನ್ನು ಕಟ್ಟಿಹಾಕಲೆತ್ನಿಸಿದ ವಿರೋಧಿಗಳ ಸ್ಟ್ರ್ಯಾಟಜಿಗೂ ಬಲಿಯಾಗಲಿಲ್ಲ. ಬಂಗಾಳದ 292 ಕ್ಷೇತ್ರಗಳಲ್ಲೂ ದೀದಿಯೇ ಸ್ಟಾರ್ ಪ್ರಚಾರಕಿ!

ಮಮತಾ ತಮ್ಮ ಸೀಟು ಸೋತಿರಬಹುದು; ಆದರೆ 213 ಸೀಟುಗಳನ್ನು ಗೆಲ್ಲಿಸಿಕೊಂಡು ಬಂದಿದ್ದಾರೆ. ಈ ಎಲ್ಲದರ ಕ್ರೆಡಿಟ್ಟನ್ನು ಮಮತಾಗೇ ಕೊಡಬೇಕಾಗಿಲ್ಲ; ಕೆಟ್ಟ ಮತೀಯ ಧ್ರುವೀಕರಣದ ಚುನಾವಣೆಯಲ್ಲಿ ಕೋಮುವಾದದ ವಿರುದ್ಧದ ಮತಗಳು ಕಾಂಗ್ರೆಸ್, ಕಮ್ಯುನಿಸ್ಟ್, ತೃಣಮೂಲ ನಡುವೆ ಹಂಚಿ ಹೋಗದಂತೆ ಮತ ಚಲಾಯಿಸಿದ ಬಂಗಾಳದ ಮತದಾರರ ಮುನ್ನೋಟ ಹಾಗೂ ಅಲ್ಪಸಂಖ್ಯಾತರ, ಜಾತ್ಯತೀತರ ರಾಜಕೀಯ ಪ್ರಜ್ಞೆಯೂ ಅಷ್ಟೇ ಮುಖ್ಯವಾದುದು. ಮಹಿಳೆಯರು ಮಮತಾ ತಮ್ಮ ರಕ್ಷಕಿಯೆಂದು ನಂಬಿ ಬೆಂಬಲಿಸಿದ್ದು ಕೂಡ ಇಷ್ಟೇ ನಿರ್ಣಾಯಕವಾಗಿದೆ. ಆಧುನಿಕ ಬಂಗಾಳಿಗರ ಉದಾರವಾದಿ ಪ್ರಜ್ಞೆಯನ್ನು ವಿಕೃತ ಕೋಮುಪ್ರಜ್ಞೆಯಾಗಿಸಲು ಪ್ರಯತ್ನಿಸುತ್ತಾ, ದೇವತೆಗಳಾದ ದುರ್ಗಾ, ರಾಮರುಗಳನ್ನು ಬೀದಿಗೆಳೆದು ತಂದಿದ್ದ ಈ ಚುನಾವಣೆಯಲ್ಲಿ, ಕಮ್ಯುನಿಸ್ಟರು ಬಂಗಾಳದಲ್ಲಿ ಬೆಳೆಸಿರುವ ಜಾತ್ಯತೀತ ಪ್ರಜ್ಞೆಯೂ ಮಮತಾ ಗೆಲುವಿಗೆ ನೆರವಾಗಿದೆ. ತೃಣಮೂಲ ಪಕ್ಷದಿಂದ ನಿಂತ 42 ಮುಸ್ಲಿಂ ಅಭ್ಯರ್ಥಿಗಳಲ್ಲಿ 41 ಜನ ಗೆದ್ದಿರುವುದು ಕೂಡ ಒಟ್ಟಾರೆಯಾಗಿ ರಾಜ್ಯದಲ್ಲಿ ಅಲ್ಪಸಂಖ್ಯಾತ ಮತಗಳು ಮಮತಾ ಪರ ಒಗ್ಗೂಡಲು ಸಹಾಯಕವಾಗಿದೆ. ಹಾಗೆಯೇ, ಮುಖ್ಯಮಂತ್ರಿ ಅಭ್ಯರ್ಥಿಯನ್ನೇ ಬಿಂಬಿಸದ ಬಿಜೆಪಿಯಲ್ಲಿ ತೃಣಮೂಲ ಪಕ್ಷಾಂತರಿಗಳೇ ತುಂಬಿಕೊಂಡಿದ್ದರ ಅಡ್ಡ ಪರಿಣಾಮವೂ ಮಮತಾಗೆ ವರವಾಯಿತು!

ಚುನಾವಣಾ ಯೋಜಕ ಪ್ರಶಾಂತ್ ಕಿಶೋರ್ ಮಾಡಿದ ಹೋಮ್‌ವರ್ಕ್ ತೃಣಮೂಲ ಕಾಂಗ್ರೆಸ್ಸಿನ 10 ವರ್ಷದ 'ಆಡಳಿತ ವಿರೋಧಿ ಅಲೆ'ಯನ್ನು ಹಿಮ್ಮೆಟ್ಟಿಸಿತು. ಹೋದ ವರ್ಷವೇ ಪ್ರಶಾಂತ್ ತೃಣಮೂಲ ಕಾಂಗ್ರೆಸ್ಸಿನ 'ವೇಸ್ಟ್' ಶಾಸಕರ ಪಟ್ಟಿ ಮಾಡಿದ್ದರು. ದೀದಿಯ ಜೊತೆ ಪಕ್ಷದ ಕಾರ್ಯಕರ್ತರು, ಜನರು ನೇರವಾಗಿ ಮಾತಾಡಬಲ್ಲ 'ದೀದಿ ಕೆ ಬೋಲ್' ಕಾರ್ಯಕ್ರಮ ಶುರು ಮಾಡಿದರು. ಕಾರ್ಯಕರ್ತರ ಅಭಿಪ್ರಾಯಗಳ ಅಗ್ನಿ ಪರೀಕ್ಷೆಯಲ್ಲಿ ಫೇಲಾಗಿ ಟಿಕೆಟ್ ಕಳೆದುಕೊಳ್ಳುವ ಭಯದಲ್ಲಿದ್ದ ತೃಣಮೂಲ ಶಾಸಕರು ಬಿಜೆಪಿಗೆ ವಲಸೆ ಹೋದರು; ತೃಣಮೂಲ ಕಾಂಗ್ರೆಸ್ ಶುದ್ಧವಾಯಿತು; ಹೊಸ ಮುಖಗಳನ್ನು ಪಡೆಯಿತು. ಇದು ಕೂಡ ಈ ಗೆಲುವಿನ ಹಿಂದಿದೆ.

ಸ್ವಾತಂತ್ರ್ಯಾನಂತರದ ಭಾರತದಲ್ಲಿ ಯಾವ ಪ್ರಧಾನ ಮಂತ್ರಿಯೂ ಹೋಗದಷ್ಟು ಸಲ ರಾಜ್ಯವೊಂದರ ಚುನಾವಣಾ ಪ್ರಚಾರಕ್ಕೆ ಹೋಗಿದ್ದ ಹಾಲಿ ಪ್ರಧಾನಿಯವರ ಸುತ್ತ ಕಟ್ಟಲಾದ ಹುಸಿ ಪ್ರಭಾವಳಿ ಹಾಗೂ ಶಬ್ದಜಾಲದ ಸರಕು ಕುಸಿದು ಬಿದ್ದಿರುವುದನ್ನು ಈ ಚುನಾವಣೆ ಸ್ಪಷ್ಟವಾಗಿ ತೋರಿಸಿದೆ. ದಿಲ್ಲಿಯ ಗಡಿಯಲ್ಲಿ ಬೀಡುಬಿಟ್ಟಿರುವ ರೈತ ಚಳವಳಿಗಾರರು ಮಮತಾ ಗೆಲುವಿಗಿಂತಲೂ ಬಿಜೆಪಿಯ ಸೋಲಿನಿಂದಾಗಿ ಬೀಸುತ್ತಿರುವ ಹೊಸ ಗಾಳಿಯ ಬಗ್ಗೆ ಉತ್ಸಾಹದಿಂದ ಮಾತಾಡುತ್ತಿರುವುದು ಮುಂಬರಲಿರುವ ರಾಜಕೀಯ ಬದಲಾವಣೆಯ ದಿಕ್ಕುಗಳನ್ನು ಸೂಚಿಸುತ್ತಿದೆ.

'ರಾಷ್ಟ್ರೀಯ' ಪಕ್ಷಗಳು ಪ್ರಾದೇಶಿಕ ಪಕ್ಷಗಳ ಜೊತೆಗೆ ಮಾಡಿಕೊಳ್ಳುವ ಹೊಂದಾಣಿಕೆಯ ಮೇಲೆ ಇಂದಿನ ಚುನಾವಣೆಗಳು ನಿಂತಿವೆ ಎನ್ನುವುದು ಮತ್ತೊಮ್ಮೆ ಸಾಬೀತಾಗಿದೆ. ದೇಶದುದ್ದಕ್ಕೂ ಹಬ್ಬಿರುವ ಕಾಂಗ್ರೆಸ್ ತಾನು ಯಾಕೆ ಅಧಿಕಾರ ಹಿಡಿಯಲಾಗುತ್ತಿಲ್ಲ ಎಂಬ ಬಗ್ಗೆ ವೈಜ್ಞಾನಿಕವಾಗಿ ಯೋಚಿಸಬೇಕಾಗಿದೆ. ಕಳೆದ ವರ್ಷಗಳಲ್ಲಿ ಮಧ್ಯಪ್ರದೇಶ, ಕರ್ನಾಟಕದಲ್ಲಿ ಪಕ್ಷಾಂತರಿಗಳ ಕುತಂತ್ರಗಳಿಂದಾಗಿ ಕಾಂಗ್ರೆಸ್ ಅಧಿಕಾರ ಕಳೆದುಕೊಂಡಿದೆ. ರಾಜಸ್ಥಾನದಲ್ಲಿ ಈ ಅಪಾಯ ತಾತ್ಕಾಲಿಕವಾಗಿಯಂತೂ ತಪ್ಪಿದೆ. ಅಸ್ಸಾಂನಲ್ಲಿ ಹೊಂದಾಣಿಕೆಗಳನ್ನು ವಿಸ್ತರಿಸಿಕೊಂಡಿದ್ದರೆ ಸಲೀಸಾಗಿ ಗೆಲ್ಲಬಹುದಿತ್ತು. ಮಮತಾಗೆ ನೆರವಾಗುವ ಒಳ ಒಪ್ಪಂದದಿಂದಾಗಿ ಬಂಗಾಳದಲ್ಲಿ ಕಾಂಗ್ರೆಸ್ ಚುನಾವಣೆಯಿಂದ ಹಿಂಜರಿಯಿತೆಂಬ ಸುದ್ದಿಯಿದೆ. ಇದು ನಿಜವಾಗಿದ್ದರೆ ಮಮತಾ ಮುಂಬರುವ ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆಸ್ಸಿನೊಡನೆ ಗಟ್ಟಿಯಾಗಿ ನಿಲ್ಲಬೇಕಾಗುತ್ತದೆ. ಮಮತಾರ 'ಎನರ್ಜಿ' ಸಮಾನಮನಸ್ಕ ವಿರೋಧ ಪಕ್ಷಗಳನ್ನು ಗಟ್ಟಿಯಾಗಿ ಒಂದೆಡೆ ತರುವಂತಾದರೆ ದೇಶದ ರಾಜಕೀಯದ ದಿಕ್ಕೇ ಬದಲಾಗುತ್ತದೆ.



ಕೇರಳದಲ್ಲಿ ಶೈಲಜಾ ಟೀಚರ್ ಎಂದೇ ಜನಪ್ರಿಯರಾಗಿರುವ ಸಿಪಿಎಂನ ಕೆ.ಕೆ.ಶೈಲಜಾ ಈ ಸಲ 61,035 ಮತಗಳ ದಾಖಲೆ ಅಂತರದಿಂದ ಗೆದ್ದಿರುವುದು ಒಳ್ಳೆಯ ರಾಜಕಾರಣಿಯೊಬ್ಬರನ್ನು ನ್ಯಾಯವಂತ ಮತದಾರರು ಗಟ್ಟಿಯಾಗಿ ಬೆಂಬಲಿಸುವ ಆದರ್ಶ ಸಂಬಂಧದ ಅಪರೂಪದ ಮಾದರಿಯಂತಿದೆ. ಪಿಣರಾಯಿ ವಿಜಯನ್ ನೇತೃತ್ವದ ಸರ್ಕಾರದಲ್ಲಿ ಆರೋಗ್ಯ ಸಚಿವರಾಗಿದ್ದ ಶೈಲಜಾ ಕೇರಳ ಎದುರಿಸಿದ ಪ್ರವಾಹ, ನಿಫಾ ವೈರಸ್ ಹಾಗೂ ಕೊರೊನಾ ಸಾಂಕ್ರಾಮಿಕದ ಘಟ್ಟಗಳಲ್ಲಿ ದಣಿವರಿಯದ ಯುದ್ಧನಾಯಕಿಯಾಗಿ ಕೆಲಸ ಮಾಡಿದರು. ಈ ಎಲ್ಲ ಬಿಕ್ಕಟ್ಟುಗಳನ್ನು ಎದುರಿಸಲು ಶೈಲಜಾ ಹಾಗೂ ಎಡರಂಗ ಸರ್ಕಾರವು ಮಹಿಳೆಯರನ್ನು ತೊಡಗಿಸಿದ ರೀತಿಯಂತೂ ದೇಶಕ್ಕೇ ಮಾದರಿಯಾಗಿದೆ. ಶೈಲಜಾ ಪ್ರಚಾರದಿಂದ ದೂರವಿದ್ದರೂ ಅವರ ಕೆಲಸವೇ ಜಗತ್ತಿನಾದ್ಯಂತ ಅವರ ಹೆಸರನ್ನು ಮೊಳಗಿಸಿದೆ. ಕಳೆದ ವರ್ಷದ ಕೊರೊನಾ ಸಾಂಕ್ರಾಮಿಕದ ಕಾಲದಲ್ಲಿ ಅತ್ಯಂತ ದಕ್ಷವಾಗಿ ಕೆಲಸ ಮಾಡಿದ ಮೂವರು ವಿಶ್ವನಾಯಕಿಯರ ಪಟ್ಟಿಯಲ್ಲಿ ನ್ಯೂಜಿಲೆಂಡಿನ ಪ್ರಧಾನಿ ಜಸಿಂದಾ ಆರ್ಡರ್ನ್, ಜರ್ಮನಿಯ ಅಧ್ಯಕ್ಷೆ ಏಂಜೆಲಾ ಮರ್ಕೆಲ್, ಕೇರಳದ ಶೈಲಜಾ ಮುಂಚೂಣಿಯಲ್ಲಿದ್ದರು.

ಇಂಗ್ಲೆಂಡಿನ 'ಪ್ರಾಸ್ಪೆಕ್ಟ್ ಮ್ಯಾಗಝಿನ್' ನಡೆಸಿದ ಸಮೀಕ್ಷೆಯಲ್ಲಿ ಶೈಲಜಾ ಟೀಚರ್ ಜಸಿಂದಾರನ್ನು ಹಿಂದಿಕ್ಕಿ 'ಟಾಪ್ ಥಿಂಕರ್ ಆಫ್ ದ ಇಯರ್ 2020' ಆಗಿ ಆಯ್ಕೆಯಾದರು. ಶೈಲಜಾ ಮಾಡಿದ ಕೆಲಸ ಕೂಡ ಎಡರಂಗ ಮತ್ತೆ ಅಧಿಕಾರ ಹಿಡಿಯಲು ನೆರವಾಗಿದ್ದರೆ ಅಚ್ಚರಿಯಿಲ್ಲ. ಸದಾ ಸಮಾನತೆಯ ಮಾತನಾಡಿದರೂ ಮಹಿಳಾ ಮುಖ್ಯಮಂತ್ರಿಯ ಬಗ್ಗೆ ಇನ್ನೂ ಯೋಚಿಸದ ಎಡರಂಗ, ಮುಂದೆ ಶೈಲಜಾರನ್ನು ಮುಖ್ಯಮಂತ್ರಿಯಾಗಿ ಮಾಡಬಲ್ಲುದಾದರೆ ಕೇರಳದಲ್ಲಿ ನೆಲೆಯೂರಿರುವ ಎಡಪಂಥೀಯ ರಾಜಕೀಯಕ್ಕೆ ಹೊಸ ದಿಕ್ಕು ಸಿಕ್ಕೀತು.

ಈ ಚುನಾವಣೆಯ ಫಲಿತಾಂಶಗಳನ್ನು ನಿರ್ದಿಷ್ಟವಾಗಿ ಇಬ್ಬರು ಮಹಿಳೆಯರ ಮೂಲಕ ನೋಡಲು ಕಾರಣವಿದೆ: ಪುರುಷ ದುರಹಂಕಾರದ ಭಾಷೆಯ ಅಬ್ಬರ, 'ದೀದೀ ಓ ದೀದಿ' ಎಂದು ಕೂಗಿ ಕಾಲೆಳೆದ ಅಶ್ಲೀಲತೆ, ವಿಭಜಕ ಧ್ರುವೀಕರಣ- ಈ ಥರದ ಯಾವ ಭಾಷೆಯನ್ನೂ ಬಳಸದ ಈ ಇಬ್ಬರು ನಾಯಕಿಯರ ಮಾದರಿ ದೇಶದಲ್ಲಿ ಜನರನ್ನು ಬೆಸೆಯುವ ರಾಜಕಾರಣವನ್ನು ಸೃಷ್ಟಿಸಬಲ್ಲದು. ಜನ ಬೀದಿಯಲ್ಲಿ ಹೊಡೆದಾಡಿ ಸಾಯುವಂತೆ ಮಾಡುವ ಕೋಮುದ್ವೇಷದ ರಾಜಕಾರಣ; ಜನ ಆಮ್ಲಜನಕವಿಲ್ಲದೆ ಬೀದಿಯಲ್ಲಿ ಸತ್ತು ಬೀಳುತ್ತಿದ್ದರೂ ಲೆಕ್ಕಿಸದ ಹೃದಯಹೀನ ರಾಜಕಾರಣ ಈ ಎರಡೂ ಪ್ರವೃತ್ತಿಗಳಿಗೆ ಮಮತಾರ ಹೋರಾಟದ ರಾಜಕಾರಣ ಹಾಗೂ ಶೈಲಜಾ ಟೀಚರ್ ಕರ್ತವ್ಯಬದ್ಧತೆಗಳು ಪರ್ಯಾಯವಾಗಬಲ್ಲವು. ಶೈಲಜಾರ ಕರ್ತವ್ಯಪ್ರಜ್ಞೆಯಿಂದಾಗಿಯೇ ಕೇರಳ ಇತರೆಲ್ಲ ರಾಜ್ಯಗಳಿಗಿಂತ ಮೊದಲೇ ಎಚ್ಚೆತ್ತು, ಕಳೆದ ವರ್ಷವೇ ಆಮ್ಲಜನಕ ಉತ್ಪಾದನೆಯ ಘಟಕಗಳನ್ನು ಹೆಚ್ಚಿಸಿತು; ಪಕ್ಕದ ರಾಜ್ಯಗಳಿಗೆ ಆಮ್ಲಜನಕ ಸರಬರಾಜು ಮಾಡುವಷ್ಟು ದಕ್ಷವಾಯಿತು.

ಸರ್ಕಾರಗಳಿರುವುದು ಕ್ಷುದ್ರ ರಾಜಕಾರಣ ಮಾಡುವುದಕ್ಕಲ್ಲ; ಜನರ ಜೀವ ಉಳಿಸುವುದಕ್ಕೆ ಎಂಬುದನ್ನು ಕೇರಳದ ಉದಾಹರಣೆಯಿಂದಲಾದರೂ ಇತರರು ಕಲಿಯಲಿ.

ಚುರುಮುರಿ



ಕೊರೊನಾ ತುರಿಕೆ

• ಲಿಂಗರಾಜು ಡಿ.ಎಸ್.

ಊರಿಗೋಯ್ತೀನಿ ಅಂದಿದ್ದ ತುರೇಮಣೆ ಮನೇಲೆ ಇದ್ರು. 'ಇದ್ಯಾಕ್ಸಾ ಊರಿಗೋಗ್ನಿಲ್ವಾ?' ಅಂತ ಕೇಳಿದೆ.

'ಹೋಗಿದ್ದೆ ಕನೋ! ಊರ ಗೇಟು ಬಾಗಿಲ ತಾವು ಹೈಕ್ಳೆಲ್ಲಾ ಸುತ್ತರದು 'ಬೆಂಗಳೂರಿಂದ ಕರೋನ ಹಂಚಕ್ಕೆ ನಮ್ಮೂರಿಗೆ ಬಂದಿದ್ದರಿಯಾ? ಅಮಿಕ್ಕಂಡು ವಾಪಾಸೋಗಿ' ಅಂದ್ರು, ಅದುಕ್ಕೆ ವಾಪಾಸ್ ಬಂದೆ' ಅಂದರು.

'ಸರಿಯಾಗಿ ಮಾಡ್ಯವುರೆ! ಅಲ್ಲಾ ಸಾ, ನಿಮ್ಮಂತೋರು ತರಕಾರಿ, ಮಟನ್-ಮಾಂಸ, ಚಿಕನ್-ಕೋಳಿ ಅಂತ ಬೀದಿ ಬೀದೀಲಿ ಮದಗುಡುತಿದ್ರೆ ಇನ್ನೇನಾದದು?' ಅಂದೆ.

'ರಾಜಕೀಯದೋರು ಕೊರೋನಾ ಕಂಟಕಕ್ಕೆ ಏನು ಪ್ಲಾನು ಹಾಕ್ಯಂಡವ್ರೆ ನೋಡಮು ಫೋನು ಮಾಡ್ರೋ' ಅಂತು ಯಂಟಪ್ಪಣ್ಣ.

'ಪಿಣರಾಯಿ ಪುಟ್ಟು, ಡಿಎಂಕೆ ಇಡ್ಲಿ-ಸಾಂಬಾರ್, ದೀದಿ ರಸಗುಲ್ಲಾ ತಿಂದು ಸುಸ್ತಾಗಿರ ಚಕ್ರವರ್ತಿಗಳು ಮನದ ಮಾತಿಗೆ ನೋಟ್ಸ್ ಮಾಡಿಕ್ಯತಾವ್ರೆ ತಡೀರಿ!' ಅಂದ್ರು ಕಮಲದೋರು. ರಾಜ್ಯ ನಾಯಕರು 'ತಿಗ್ರಿ ಮಸ್ಸಿ ಮಿಸ್ಸಾಗ್ಯದೆ, ಕೊರೊನಾ ತಲೆದಸಿ ಕೂತದೆ. ಬಾಲಗ್ರಹವಂತೆ! ದೃಷ್ಟಿ ನಿವಾರಣೆಗೆ ಅನ್ನ, ಮೆಣಸಿನಕಾಯಿ, ಉಪ್ಪು ನಿವಾಳಿಸಿ ಮೂರುದಾರೀಲಿ ಚೆಲ್ಲಿ ಅಂತ ಮಾರ್ಗಸೂಚಿ ಬಂದದೆ' ಅಂದ್ಕಂಡು ಬಿಜಿಯಾಗಿದ್ದರು.

'ಬೀದಿಗೊಂದು ನಿಂಬೆ ಹಣ್ಣು ಮಂತ್ರಿಸಿ ಮಡಗಿ ಎಲ್ಲಾರಿಗೂ ಸಾಂದರ್ಭಿಕವಾಗಿ ತಾಯಿತ ಕಟ್ಟಬೇಕು. ಇದು ಬೂತುಚೇಷ್ಟೆ ಬ್ರದರ್' ಅಂದ್ರು ಪಿತೃಪಕ್ಷದೋರು.

'ವಡೀರಿ ಕಪಾಳಕ, ನಿಂಬೆ ಹಣ್ಣು ಏನು ಸರಬತ್ ಮಾಡಕಾ? ಸರ್ಕಾರ ಎಲ್ಲಾರಿಗೂ ಅತ್ತು ಸಾವಿರ ರುಪಾಯಿ ಪುಗಸಟ್ಟೆ ಕೊಡಬೇಕು. ನನ್ನ ಸಿಎಂ ಮಾಡಿದ್ರೆ ಕೊರೊನಾದ ತೆಂಡೆ ಕಿತ್ತಾಕ್ಬುಡ್ತೀನಿ' ಅಂತು ಹುಲಿಯಾ ಗಡ್ಡ ಕೆರಕಂಡು. ಪಕ್ಕದಗಿದ್ದೋರು 'ಸರ್ಕಾರ ಯಾತ್ಕೂ ಸಲುವಲ್ಲದಾಗ್ಯದೆ. ಮುಂದಿನ ಸಿಎಂ ಯಾರು ಅಂತ ಹೈಕಮಾಂಡ್ ತೀರ್ಮಾನ ಮಾಡ್ತದೆ' ಅಂದ್ರು.

'ರಾಜಕಾರಣಿಗಳು ದಬ್ಬಾಕದು ಅಷ್ಟ್ರಗೇ ಅದೆ. ಮಹೋಷಧಕುಮಾರನ ಅಡ್ರಸ್ ತಿಳಕಂಡು ಅವುನ್ನೆ ಕರಕಬಂದ್ರೆ ಏನಾದ್ರೂ ಮಾಡಾನೇನೋ!' ಅಂದ ಚಂದ್ರು. ನನಗೂ ಹಂಗೇ ಅನ್ನಿಸ್ತು! ನಿಮಗೆ?

ಸಂಗತ

ಧರ್ಮಕ್ಕೆ ದಟ್ಟಿ ಬಂದಿದೆ: ಮೊಳ ಹಾಕಿ!

ಅಗತ್ಯ ಸಲಕರಣೆಗಳನ್ನು ದಾನ ಪಡೆಯುವ ಸರ್ಕಾರವು ಅವುಗಳ ಬಳಕೆಯ ಸೂಕ್ತ ತರಬೇತಿಯನ್ನು ನೀಡಬೇಕಾಗುತ್ತದೆ

• ಡಾ. ಈಶ್ವರ ಶಾಸ್ತ್ರಿ ಮೋಟಿನಸರ

ಕೊರೊನಾ ಸೋಂಕು ಕಾಣಿಸಿಕೊಂಡ ನಂತರ ಜಗತ್ತಿನಲ್ಲೆಲ್ಲ ಬದಲಾವಣೆ ಕಾಣುತ್ತಿದೆ. ಕೆಲವು ರಾಷ್ಟ್ರಗಳು ಹಿತಕರ ಸಂಬಂಧ ಹೊಂದಿರದ ರಾಷ್ಟ್ರಗಳಿಗೂ ವ್ಯಾಕ್ಸಿನ್ ನೀಡಿ ಸಹಾಯಹಸ್ತ ಚಾಚುತ್ತಿವೆ. ಮಿತ್ರ ರಾಷ್ಟ್ರಗಳು ಸಲಕರಣೆಗಳನ್ನು ನೀಡುತ್ತಿವೆ. ಅಷ್ಟೇ ಅಲ್ಲ, ಮಧುರ ಸಂಬಂಧ ಹೊಂದಿರದ ರಾಷ್ಟ್ರಗಳೂ ಸಲಕರಣೆಗಳನ್ನು ನೀಡಲು ಮುಂದಾಗುತ್ತಿವೆ. ಆದರೆ ಹೀಗೆ ಈ ಸಲಕರಣೆಗಳು ಯಾವುದೇ ಒಂದು ದೇಶಕ್ಕೆ ಬಂದಮೇಲೆ ಮುಂದೇನಾಗುತ್ತದೆ?!

ನಮ್ಮ ಮನೆಯ ಮೂರು ಮಂದಿ ಕೋವಿಡ್‌ಗಾಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದು, ಗುಣಮುಖರಾಗಿ ಮನೆಗೆ ಮರಳಿದ ಬಳಿಕ ನಮಗೆ ಒಂದು ಆಕ್ಸಿಜನ್ ಪರೀಕ್ಷಾ ಮೀಟರ್‌ನ ಅವಶ್ಯಕತೆ ಇದೆ ಅನಿಸಿತು. ಸುಮಾರು ₹ 400ರ ಆಸುಪಾಸಿನಲ್ಲಿ ಇದ್ದ ಆ ಯಂತ್ರವನ್ನು ಮೆಡಿಕಲ್ ಸ್ಟೋರ್ಸ್‌ನವರು ಹೇಳಿದಷ್ಟು ಹಣ ನೀಡಿ ಮನೆಗೆ ತಂದೆ. ನಾಲ್ಕು ಕಡೆ ವಿಚಾರಿಸಿದ್ದರೆ ಸ್ವಲ್ಪ ಹಣ ಉಳಿಯುತ್ತಿತ್ತು. ಆದರೆ ಅವಶ್ಯಕತೆ ಇದ್ದಾಗ ಬೆಲೆಯ ಮುಖ ನೋಡಬಾರದು ಎಂಬ ಕಾರಣಕ್ಕೆ ಅಲ್ಲೇ ಕೊಂಡು ತಂದಿದ್ದೆ.

ಆದರೆ ಸಾರ್ವಜನಿಕ ಹಣವನ್ನು ಬಳಸುವವರು ಹೀಗೆ ಏಕಾಏಕಿ ನಿರ್ಧಾರ ಮಾಡಬಾರದು. ವಿವೇಚನೆ ಬಳಸಿ, ಬೇಕೋ ಬೇಡವೋ, ಎಷ್ಟು ದರ ನೀಡಬಹುದು, ಎಷ್ಟು ಯಂತ್ರಗಳು ಅಥವಾ ಸಲಕರಣೆಗಳ ಅವಶ್ಯಕತೆ ಇದೆ ಎಂಬುದನ್ನೆಲ್ಲಾ ಪರಿಶೀಲಿಸಿ ಪ್ರಾಮಾಣಿಕವಾಗಿ ನಿರ್ಧರಿಸಬೇಕು.

ನಿತ್ಯವೂ ಮೀಟರ್‌ನ ಪ್ರಯೋಜನ ಪಡೆಯುತ್ತಿದ್ದೆವು. ಆದರೆ ಈ ಯಂತ್ರವು ಕೆಲವು ಬಾರಿ ವಿಚಿತ್ರವಾಗಿ ವರ್ತಿಸತೊಡಗಿತು. ಮೂವರಲ್ಲಿ ಇಬ್ಬರಿಗೆ ಕೆಲವೇ ಸೆಕೆಂಡಿಗೆ ಫಲಿತಾಂಶ ತೋರಿಸಿದರೆ, ನನಗೆ ನಿಮಿಷಗಳು ಕಳೆದರೂ ತೋರಿಸುತ್ತಿರಲಿಲ್ಲ. ಹಲವಾರು ಬಾರಿ ಪ್ರಯತ್ನಿಸಿ ನಿರ್ಧಾರಕ್ಕೆ ಬಂದೆ- 'ಈ ಯಂತ್ರವನ್ನು ನಾನು ಮುಟ್ಟುವುದಿಲ್ಲ. ಇದು ನಿಷ್ಪ್ರಯೋಜಕ' ಎಂದು ಘೋಷಣೆ ಮಾಡಿದೆ.

ವಾಟ್ಸ್‌ಆ್ಯಪ್, ಫೇಸ್‌ಬುಕ್ ಪಾರಾಯಣ ಮಾಡುತ್ತಿದ್ದ ಮಡದಿ, ಯಂತ್ರವನ್ನು ಹೇಗೆ ಉಪಯೋಗಿಸಬೇಕು ಎಂಬುದನ್ನು ವಿವರಿಸಿದಳು. ಅಂಗೈ ತಣ್ಣಗಿದ್ದರೆ ಅದು ಕೆಲಸ ಮಾಡುವುದಿಲ್ಲ ಎಂದು ಹೇಳಿ, ನನ್ನ ಅಂಗೈಯನ್ನು ಕೆಲ ಸೆಕೆಂಡುಗಳ ಕಾಲ ಉಜ್ಜಿದಳು. ನಾನು ಬೆರಳು ಒಳಗಿಟ್ಟ ತಕ್ಷಣವೇ ಫಲಿತಾಂಶ ನೀಡಿತು ಆ ನಿಷ್ಪ್ರಯೋಜಕ ಯಂತ್ರ!

ತಪ್ಪು ಎಲ್ಲಿದೆ ಎಂದು ಅವಳು ಗುರುತಿಸಿರದಿದ್ದರೆ, ನಾನು ಅದನ್ನು ನಿಷ್ಪ್ರಯೋಜಕ ಎಂದೇ ತಿಳಿಯುತ್ತಿದ್ದೆ. ಹೀಗೆಯೇ ಉಪಯೋಗಿಸುವ ಪದ್ಧತಿ ಗೊತ್ತಿಲ್ಲದೆ ಸರ್ಕಾರಿ ಸಂಸ್ಥೆಗಳಲ್ಲಿ ಹಲವಾರು ವಸ್ತುಗಳನ್ನು ನಿಷ್ಪ್ರಯೋಜಕ ಎಂದು ಮೂಲೆಗೆ ಎಸೆಯಲಾಗುತ್ತದೆ.

ಈ ಪ್ರಸಂಗ ನಡೆದಾದ ಮೇಲೆ, ಹಲವು ವರ್ಷಗಳ ಹಿಂದೆ ನನಗೆ ಜಿಲ್ಲಾ ಆರೋಗ್ಯಾಧಿಕಾರಿ ಕಚೇರಿಗಳ (ಡಿ.ಎಚ್.ಒ) ಆವರಣಗಳಲ್ಲಿ ತುಂಬಿ ತುಳುಕುವ ಹರಕು ಮುರುಕು ಕಾರು, ಜೀಪು, ವ್ಯಾನುಗಳ ರಾಶಿ ನೆನಪಿಗೆ ಬಂದಿತು. ಅವೂ ಹೀಗೇ. ಹಲವು ದೇಶಗಳಿಂದ ಯಾವ ಯಾವುದೋ ಯೋಜನೆಗಳ ಹೆಸರಿನಲ್ಲಿ ಬಂದವಾಗಿದ್ದವು. ಕ್ಷುಲ್ಲಕ ಕಾರಣದಿಂದಾಗಿ ಜಂಗು ಹಿಡಿದು ಅಸಹ್ಯವಾಗಿ ಕಾಣುತ್ತಿದ್ದವು. ಅವು ದೇಣಿಗೆ ರೂಪದಲ್ಲಿ ಬಂದದ್ದರಿಂದ, ಅದಕ್ಕೆಂದೇ ಬಜೆಟ್ ಇಲ್ಲದ್ದರಿಂದ ಯಾರಿಗೂ ಅವುಗಳ ಬಗ್ಗೆ ಆಸಕ್ತಿ ಇರಲಿಲ್ಲ. ಹರಾಜು ಹಾಕಲೂ ನೂರೆಂಟು ನಿಯಮಗಳು ಅಡ್ಡಗಾಲು, ತೊಡರುಗಾಲು ಹಾಕುತ್ತಿದ್ದವು.

ಈಗ ಕೋವಿಡ್ ನಿಯಂತ್ರಣಕ್ಕೆ ಅಗತ್ಯವಾಗಿರುವ ಸಲಕರಣೆಗಳಲ್ಲಿನ ಸಣ್ಣಪುಟ್ಟ ದೋಷಗಳನ್ನು ವೈದ್ಯ ವರ್ಗ ಸರಿಪಡಿಸುವ ಸಾಧ್ಯತೆ ಇಲ್ಲ. ಹೊಸ ಉಪಕರಣಗಳನ್ನು ಹೇಗೆ ಬಳಸಬೇಕೆಂಬ ಬಗ್ಗೆ ವೈದ್ಯರಿಗೆ ಕಡ್ಡಾಯವಾಗಿ ಶಿಕ್ಷಣ ನೀಡಬೇಕು.



ದಾನ ಪಡೆಯುವುದರ ಜೊತೆಗೆ ಸರ್ಕಾರವು ಅವುಗಳ ಬಳಕೆಯ ತರಬೇತಿಯನ್ನೂ ನೀಡಬೇಕಾಗುತ್ತದೆ. ಅಲ್ಲಲ್ಲಿ ಸ್ಥಾಪಿಸಲಾಗುತ್ತಿರುವ ಆಕ್ಸಿಜನ್ ಉತ್ಪಾದನಾ ಘಟಕಗಳು ಹೇಗೆ ಕಾರ್ಯ ನಿರ್ವಹಿಸುತ್ತವೆ, ಅಲ್ಲಿ ಉತ್ಪಾದನೆಯಾಗುವ ಆಕ್ಸಿಜನ್ ಹೇಗೆ ಬಳಕೆಯಾಗುತ್ತದೆ, ಕೊರೊನಾಮುಕ್ತವಾದ ಮೇಲೆ ಅದನ್ನು ಬೇರೆಯದಕ್ಕೆ ಹೇಗೆ ಬಳಸಬಹುದು ಎಂಬ ಬಗೆಗೆ ಕಣ್ಗಾವಲು ಇಡುವುದು ಸರ್ಕಾರದ ಜವಾಬ್ದಾರಿಯಾಗಿರುತ್ತದೆ.

ವಾಹಿನಿಯೊಂದರ ಪ್ರಕಾರ, ಹಲವಾರು ವೆಂಟಿಲೇಟರ್‌ಗಳು ಸ್ಟೋರ್ ರೂಮ್‌ಗಳಲ್ಲಿ ಕೊಳೆಯುತ್ತಿವೆ. ಈಗ ಬರುತ್ತಿರುವ ಹೊಸ ನಮೂನೆಯ ಯಂತ್ರಗಳನ್ನು ಸುಸ್ಥಿತಿಯಲ್ಲಿ ಇರುವಂತೆ ನೋಡಿಕೊಳ್ಳಲು ಒಂದು ಶಾಶ್ವತ ತಾಂತ್ರಿಕ ತಂಡದ ರಚನೆಯನ್ನು ಹಾಗೂ ಅದರ ವಿಲೇವಾರಿ ಬಗೆಗಿನ ನಿಯಮಾವಳಿಗಳನ್ನು, ಜೊತೆಗೆ ಸಾಕಷ್ಟು ಬಜೆಟ್ ಅನ್ನು ಈಗಲೇ ವ್ಯವಸ್ಥೆ ಮಾಡಬೇಕು. ಇಲ್ಲವಾದರೆ ಡಿಎಚ್‌ಒ ಕಚೇರಿಯ ಕಥೆ ಆಗುತ್ತದೆ.

ನನ್ನನ್ನು ಇಡೀ ಬೆಳಗಾವಿ ವಿಭಾಗದಲ್ಲೆಲ್ಲಾ ಸುತ್ತಾಡಿಸಿದ್ದ ವಾಹನವು ಕೆಲ ವರ್ಷಗಳ ನಂತರ, ಜಡ್ಡುಗಟ್ಟಿದ ಸ್ಥಿತಿಯಲ್ಲಿ ಇದ್ದದ್ದನ್ನು ನೋಡಿ ಹೊಟ್ಟೆ ಉರಿದು ಹೋಯಿತು. ಒಂದು ಕ್ಷುಲ್ಲಕ ಕಾರಣದಿಂದಾಗಿ ಅದಕ್ಕೆ ಆ ಗತಿ ಬಂದಿತ್ತು.

ಕಳೆದ ವರ್ಷ ನಮ್ಮೂರ ಮುನಿಸಿಪಾಲಿಟಿಯಲ್ಲಿ ಸರ್ಕಾರದ ಆದೇಶದಂತೆ ಒಂದು ಸ್ಯಾನಿಟೈಸರ್ ಟಾರ್ಪಾಲಿನ ಸುರಂಗ ರಚನೆಯಾಯಿತು. ಅದರೊಳಗೆ ಹಾದು ಹೋದ ಒಬ್ಬರನ್ನೂ ನಾನು ನೋಡಲಿಲ್ಲ. ಅದನ್ನು ಎಲ್ಲಿ ಇಟ್ಟರೆ ಸೂಕ್ತ ಎಂಬುದು ಒಬ್ಬರಿಗೂ ಹೊಳೆದಿರಲಿಕ್ಕಿಲ್ಲ. ಒಂದು ವಾರೊಪ್ಪತ್ತಿನಲ್ಲಿ ಅದು ಮಾಯವಾಯಿತು. ಈಗ ಅದು ಎಲ್ಲಿದೆಯೋ ಗೊತ್ತಿಲ್ಲ.

ಪ್ರಜೆಗಳು ನೀಡಿದ ತೆರಿಗೆ ಹಣದಿಂದ ನಡೆಯುವ ಸರ್ಕಾರವು ತಾನು ಪ್ರಜೆಗಳ ಹೆಸರಿನಲ್ಲಿ ನಡೆಸುವ ಇಂತಹ ಅಂದಾದುಂದಿ ಕೆಲಸವನ್ನು ಬಿಟ್ಟು, ಸರಿಯಾಗಿ ಯೋಚಿಸಿ ಮುಂದುವರಿಯಲಿ. ಪಾರದರ್ಶಕತೆ ಢಾಳಾಗಿ ಇರಲಿ.

ವಾಚಕರ ವಾಣಿ

ಲಸಿಕೆ ಗೊಂದಲ ನಿವಾರಿಸಿ

ಹಿರಿಯ ನಾಗರಿಕರು ಕೊರೊನಾ ಎರಡನೇ ಡೋಸ್ ಲಸಿಕೆ ಪಡೆಯಲು ಬವಣೆ ಪಡುತ್ತಿರುವುದನ್ನು ನೋಡಿದಾಗ, ಸರ್ಕಾರದ ಪೂರ್ವಸಿದ್ಧತೆಯ ಕೊರತೆ ಕಂಡುಬರುತ್ತಿದೆ. ದೇಶದಲ್ಲಿ 45 ವರ್ಷ ಮೇಲ್ಪಟ್ಟವರ ಸಂಖ್ಯೆ ಸುಮಾರು 30 ಕೋಟಿ ಎಂದು ಅಂದಾಜಿಸಿದರೆ, ಎರಡೂ ಡೋಸ್‌ಗಳಿಗೆ 60 ಕೋಟಿ ಡೋಸ್ ಲಸಿಕೆ ಅಗತ್ಯವಿದೆ. 18ರಿಂದ 45 ವರ್ಷದವರು ಸುಮಾರು 55 ಕೋಟಿ ಎಂಬ ಅಂದಾಜಿನಂತೆ, ಸುಮಾರು 110 ಕೋಟಿ ಡೋಸ್ ಲಸಿಕೆ ಬೇಕಾಗಿದೆ. ಅಂದರೆ ಈ ಎರಡೂ ವರ್ಗಗಳಿಗೆ ಒಟ್ಟು 170 ಕೋಟಿ ಡೋಸ್ ಲಸಿಕೆಯ ಅಗತ್ಯವಿದೆ. ಇದರಲ್ಲಿ ಶೇ 60-70ರಷ್ಟು ಜನರನ್ನು ತಲುಪಬೇಕಾದರೂ ಸುಮಾರು 100ರಿಂದ 110 ಕೋಟಿ ಡೋಸ್‌ಗಳಷ್ಟು ಲಸಿಕೆ ಬೇಕಾಗುತ್ತದೆ. ಇಷ್ಟು ಪ್ರಮಾಣದ ಲಸಿಕೆ ಭಾರತದಲ್ಲಿ ಉತ್ಪಾದನೆಯಾಗುತ್ತಿಲ್ಲ.

ಪರಿಸ್ಥಿತಿ ಹೀಗಿರುವಾಗ, 45 ವರ್ಷ ಮೇಲ್ಪಟ್ಟವರಿಗೆ ಲಸಿಕೆ ಹಾಕುವ ಕಾರ್ಯಕ್ರಮವನ್ನು ಸುಸೂತ್ರವಾಗಿ ಮುಗಿಸಿ, ನಂತರ 18-45 ವರ್ಷದವರಿಗೆ ಲಸಿಕೆ ನೀಡುವ ಬಗ್ಗೆ ಘೋಷಣೆ ಮಾಡಬೇಕಾಗಿತ್ತು. ಈಗ 18-45 ವರ್ಷದವರಿಗೆ ಲಸಿಕೆಗಾಗಿ ನೋಂದಣಿ ಪ್ರಾರಂಭವಾಗಿದೆ. ಇದಕ್ಕಾಗಿ ಕೋವಿನ್ ಆ್ಯಪ್‌ನಲ್ಲಿ ಮಾತ್ರ ನೋಂದಾಯಿಸಲು ಸೂಚಿಸಲಾಗಿದೆ. ಮೊದಲು ನೋಂದಾಯಿಸುವವರಿಗೆ ಮೊದಲ ಆದ್ಯತೆ ಎಂದು ತಿಳಿಸಿದರೆ, ಅವಿದ್ಯಾವಂತರು, ಸಮಾಜದ ಕೆಳವರ್ಗದ ಜನರ ಪಾಡೇನು? ಈ ಜನರಿಗೆ ನೋಂದಣಿ ಬಗ್ಗೆ ಮಾರ್ಗದರ್ಶನ ನೀಡುವ ಸಹಾಯ ಕೇಂದ್ರಗಳನ್ನಾದರೂ ಸರ್ಕಾರ ತೆರೆಯಬೇಕು. ಎರಡನೇ ಡೋಸ್ ಲಸಿಕೆ ಪಡೆಯುವಲ್ಲಿ ಹಿರಿಯ ನಾಗರಿಕರ ಆತಂಕ ದೂರ ಮಾಡಲು ತಕ್ಷಣವೇ ಆದ್ಯತೆಯ ಮೇಲೆ ಕ್ರಮ ಕೈಗೊಳ್ಳಬೇಕು.

ಡಾ. ಟಿ.ಜಯರಾಂ, ಕೋಲಾರ

ಅಂತ್ಯೋದಯ: ಅಂಗವಿಕಲರಿಗೆ ಮರೀಚಿಕೆ?

ಅಂಗವಿಕಲರಿಗೆ ಆಹಾರ ಭದ್ರತೆ ಒದಗಿಸುವ ಹಿತದೃಷ್ಟಿಯಿಂದ, ಅಂತ್ಯೋದಯ ಅನ್ನ ಯೋಜನೆಯಡಿ ಸೌಲಭ್ಯ ಪಡೆಯುವ ಅವಕಾಶವನ್ನು ಅವರಿಗೆ ಕಲ್ಪಿಸಲಾಗಿದೆ. ಆದರೆ ರಾಜ್ಯದ ಕೆಲವೇ ಅಂಗವಿಕಲರು ಈ ಸೌಲಭ್ಯ ಪಡೆದುಕೊಳ್ಳಲು ಸಫಲರಾಗಿದ್ದಾರೆ. ಉಳಿದವರಿಗೆ ಇದು ಮರೀಚಿಕೆಯಾಗಿದೆ. ಏಕೆಂದರೆ, ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕ ವ್ಯವಹಾರಗಳ ಇಲಾಖೆ ಇತ್ತೀಚೆಗೆ ಹೊರಡಿಸಿರುವ ಆದೇಶದ ಪ್ರಕಾರ, ಈ ಯೋಜನೆಯು ಕೇಂದ್ರ ಸರ್ಕಾರದ ನಿರ್ದಿಷ್ಟ ಸಂಖ್ಯೆ ಮಿತಿಯುಳ್ಳ ಯೋಜನೆಯಾಗಿದ್ದು, ಯಾವುದೇ ಫಲಾನುಭವಿಯು ಪಟ್ಟಿಯಿಂದ ಖಾಲಿಯಾದಲ್ಲಿ ಮಾತ್ರ ಹೊಸ ಫಲಾನುಭವಿಯನ್ನು ಸೇರಿಸಲು ಸಾಧ್ಯವಾಗುತ್ತದೆ. ಇದನ್ನು ಗಮನಿಸಿದರೆ, ಒಬ್ಬ ಅಂಗವಿಕಲ ಬದುಕುವುದಕ್ಕಾಗಿ ಆಹಾರ ಭದ್ರತೆಯ ತನ್ನ ಹಕ್ಕನ್ನು ಪಡೆದುಕೊಳ್ಳಲು ಮತ್ತೊಬ್ಬ ಅಂಗವಿಕಲನ ಸಾವನ್ನು ಬಯಸಬೇಕಾಗಿದೆ.

ಕೊರೊನಾ ಸೋಂಕಿನ ಕಠಿಣ ಪರಿಸ್ಥಿತಿಯಲ್ಲಿ ಇಂತಹ ಆದೇಶಗಳು ಶೋಭೆ ತರುವುದಿಲ್ಲ. ಅಂಗವಿಕಲರಿಗೂ ಬದುಕುವ ಹಕ್ಕಿದೆ, ಅವರದೇ ಆದ ಬದುಕಿದೆ ಎಂದು ಅರಿತು ರಾಜ್ಯ ಸರ್ಕಾರ ಎಲ್ಲ ಅಂಗವಿಕಲರಿಗೂ ಅಂತ್ಯೋದಯ ಅನ್ನ ಯೋಜನೆಯನ್ನು ವಿಸ್ತರಿಸಲಿ. ಫಲಾನುಭವಿಗಳ ಸೀಮಿತ ಸಂಖ್ಯೆ ಮೀರಿದ ವೆಚ್ಚವನ್ನು ಸರ್ಕಾರ ಭರಿಸಲಿ. ಈಗಾಗಲೇ ದೈಹಿಕ ಹಾಗೂ ಮಾನಸಿಕವಾಗಿ ನೊಂದಿರುವ ಅಂಗವಿಕಲರ ಬದುಕು ಹಸಿವಿನಿಂದ ಅಂತ್ಯ ಕಾಣದಂತೆ ಆಗದಿರಲಿ.

ಚಂದ್ರಶೇಖರ ಪುಟ್ಟಪ್ಪ, ಬೆಂಗಳೂರು

ಮರಣ- ಮೆರವಣಿಗೆ!

'ಬೀದಿ ಬೀದಿಗಳಲ್ಲಿ
ಪ್ರಾಣ ಬಿಡುತ್ತಿರುವ ರೋಗಿಗಳು',
'ಕೊರೊನಾ ನಡುವೆ
ಪಲ್ಲಕ್ಕಿ ಉತ್ಸವ'
(ಪ್ರ.ವಾ., ಏ. 29).
ಮರಣ ಮಹೋತ್ಸವದ ಮಧ್ಯೆ
ಪ'ಲ್ಲಕ್ಕಿ' ಮೆರವಣಿಗೆ ಎನ್ನೋಣವೆ?
ಅಂತೂ ಸಂಶಯವಿಲ್ಲ: ಸ್ವಾಮೀಜಿ,
ಭಕ್ತರು lucky!

ಸಿ.ಪಿ.ಕೆ., ಮೈಸೂರು

ಕೋವಿಡ್ ಪರಿಹಾರಕ್ಕೆ ಕೈ ಜೋಡಿಸಲಿ

ನಮ್ಮ ನಾಡಿನ ಎಲ್ಲಾ ಮಠಗಳೂ ದಾಸೋಹ ಮಾಡುತ್ತಾ ಒಂದು ಉತ್ತಮ ಸಂಸ್ಕೃತಿಗೆ ನಾಂದಿ ಹಾಡಿವೆ. ಆದರೆ ಇಂದು ಕೊರೊನಾ ಕಾರಣವಾಗಿ ಅಲ್ಲಿಗೆ ಭಕ್ತಾದಿಗಳು ಬರುತ್ತಿಲ್ಲ. ಅಲ್ಲಿನ ಅಡುಗೆ ಮನೆಗಳಲ್ಲಿ ಹೆಚ್ಚು ಪ್ರಮಾಣದ ಪ್ರಸಾದ ತಯಾರು ಮಾಡಬಲ್ಲ ವ್ಯವಸ್ಥೆ ಇದೆ. ಬೃಹತ್ ಪ್ರಮಾಣದಲ್ಲಿ ಅಡುಗೆ ಸಿದ್ಧಪಡಿಸುವ ತರಬೇತಿ ಹೊಂದಿರುವ ಜನ ಕೂಡ ಇದ್ದಾರೆ. ಈ ಸೌಲಭ್ಯವನ್ನು ಇಂದಿನ ದುಸ್ತರದ ಪರಿಸ್ಥಿತಿಯಲ್ಲಿ ಕೋವಿಡ್ ಪೀಡಿತ ಭಕ್ತಾದಿಗಳ ಒಳಿತಿಗೆ ಯಾಕೆ ಮಠಗಳು ಬಿಟ್ಟು ಕೊಡಬಾರದು? ಅಂತೆಯೇ ಕಂಪನಿಗಳ ಗೆಸ್ಟ್ ಹೌಸುಗಳೂ ಹೋಟೆಲುಗಳೂ ದೂಳು ತಿನ್ನುತ್ತಿವೆ. ಅವನ್ನೂ ಐಸೊಲೇಷನ್ ಬೇಕಿರುವ ಕೋವಿಡ್ ಪೀಡಿತರಿಗಾಗಿ ಬಳಸಬಹುದು. ಇದಕ್ಕೆ ಎಲ್ಲಾ ದೇವಸ್ಥಾನ, ಮಸೀದಿ, ಚರ್ಚುಗಳ ವ್ಯವಸ್ಥೆಗಳನ್ನೂ ಬಳಸಿಕೊಳ್ಳಬೇಕು. ಇದರಿಂದ ಆಸ್ಪತ್ರೆಗಳ ಮೇಲಿನ ಅಸಾಧ್ಯ ಒತ್ತಡ ಸ್ವಲ್ಪವಾದರೂ ತಗ್ಗುತ್ತದೆ.

ಎಷ್ಟೋ ಮಠಗಳು ಆಸ್ಪತ್ರೆ, ಮೆಡಿಕಲ್ ಕಾಲೇಜು, ನರ್ಸಿಂಗ್ ಕಾಲೇಜು ಇತ್ಯಾದಿಗಳನ್ನು ನಡೆಸುತ್ತಿವೆ. ನುರಿತ ಸಿಬ್ಬಂದಿ ಕೂಡ ಹೆಚ್ಚುವರಿ ಸಂಖ್ಯೆಯಲ್ಲಿ ಸಿಗಬಹುದು. ಮಠದ ಸೇವೆಗೆ ಬನ್ನಿ ಎಂದರೆ ಪ್ರೈವೇಟ್ ಪ್ರಾಕ್ಟೀಸ್ ಮಾಡುತ್ತಿರುವ ಜನ ಕೂಡ ಕೈ ಜೋಡಿಸಲು ಸಿದ್ಧರಿರುತ್ತಾರೆ. ತಕ್ಷಣದ ಅವಶ್ಯಕತೆಗೆ ಸರ್ಕಾರ ನಮ್ಮಲ್ಲಿ ಇರುವ ಇಂತಹ ಎಲ್ಲಾ ಸೌಲಭ್ಯವನ್ನೂ ಬಳಸಿಕೊಳ್ಳಬೇಕು. ಮಠಗಳೇ ಮುಂದೆ ಬಂದು ಇದನ್ನು ಸರ್ಕಾರಕ್ಕೆ ಮನವರಿಕೆ ಮಾಡಿಕೊಟ್ಟರೆ ಜನರ ಭಕ್ತಿ, ವಿಶ್ವಾಸವೂ ಬೆಳೆಯುತ್ತದೆ. ಈ ವಿಷಯದಲ್ಲಿ ಸಿಖ್ಖರು ಅಭಿನಂದನಾರ್ಹರು. ದೆಹಲಿಯ ಕೆಲವು ಪ್ರದೇಶಗಳಲ್ಲಿ ಊಟದ ಲಂಗರ್ ವ್ಯವಸ್ಥೆ ಮಾಡಿರುವಂತೆಯೇ ಕೋವಿಡ್ ರೋಗಿಗಳಿಗೆ ಆಕ್ಸಿಜನ್ ಕೊರತೆ ಶುರುವಾಗುತ್ತಿದ್ದಂತೆ ಅವರು ಆಕ್ಸಿಜನ್ ಲಂಗರ್ ಕೂಡ ಶುರು ಮಾಡಿದ್ದಾರೆ.

ಕಾಂಗ್ರೆಸ್‌ನ ಎಂ.ಬಿ.ಪಾಟೀಲ ತಮ್ಮ ಆಸ್ಪತ್ರೆಯಲ್ಲಿ ಕೋವಿಡ್ ರೋಗಿಗಳಿಗೆ ಚಿಕಿತ್ಸಾ ವೆಚ್ಚವನ್ನು ಬಹಳ ಕಡಿಮೆ, ಅಂದರೆ ಶೇ 70ರಷ್ಟು ಕಡಿಮೆ ಮಾಡಿದ್ದಾರೆ. ಇದು ಅಭಿನಂದನೀಯ ಕ್ರಮ. ಸಮಾಜ ಅಂದರೆ ಸರ್ಕಾರ ಒಂದೇ ಅಲ್ಲ, ಸಮಾಜ ಅಂದರೆ ನಮ್ಮ ದೈಹಿಕ, ಮಾನಸಿಕ, ಆಧ್ಯಾತ್ಮಿಕ ಅಂಗಗಳೂ ಸೇರುತ್ತವೆ. ಮನುಷ್ಯರು ಮತ್ತೆ ಒಬ್ಬರನ್ನೊಬ್ಬರು ಭೇಟಿ ಆಗುವ ದಿನಗಳು ಬರಲಿ.

ಪ್ರೀತಿ ನಾಗರಾಜ, ಮೈಸೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete.



ಗಾಳಿಯೆಲ್ಲವೂ ಆಮ್ಲಜನಕವಲ್ಲ

ವಾತಾವರಣದಲ್ಲೇ ಆಮ್ಲಜನಕ ಹೇರಳವಾಗಿರುವಾಗ, ಅದನ್ನು ಉತ್ಪಾದಿಸಿ ಸಿಲಿಂಡರ್‌ಗಳಲ್ಲಿ ತುಂಬಿ ಮಾರಾಟ ಮಾಡುವ ಅಗತ್ಯವಾದರೂ ಏನು? ಈ ಪ್ರಶ್ನೆ ಎಲ್ಲರನ್ನೂ ಒಂದಲ್ಲ ಒಂದು ಬಾರಿಯಾದರೂ ಕಾಡಿರುತ್ತದೆ.

ನಮ್ಮ ಸುತ್ತಮುತ್ತ ಇರುವುದೆಲ್ಲವೂ ಆಮ್ಲಜನಕ ಎಂದೇ ನಾವು ನಂಬಿದ್ದೇವೆ. ಆದರೆ ಅದು ಪೂರ್ಣ ಸತ್ಯವಲ್ಲ. ವಾತಾವರಣದಲ್ಲಿರುವ ಗಾಳಿಯಲ್ಲಿ ಆಮ್ಲಜನಕದ ಪ್ರಮಾಣ ಶೇ 21ರಷ್ಟು ಮಾತ್ರ. ಶೇ 78ರಷ್ಟು ನೈಟ್ರೋಜನ್ ಹಾಗೂ ಉಳಿದ ಶೇ 1ರಷ್ಟು ಇಂಗಾಲದ ಡೈಆಕ್ಸೈಡ್, ಹೈಡ್ರೋಜನ್ ಹಾಗೂ ಇತರ ಅನಿಲಗಳ ಮಿಶ್ರಣ ಇರುತ್ತದೆ.

ರೋಗಿಗಳ ಚಿಕಿತ್ಸೆಯಲ್ಲಿ ಬಳಸುವ ವೈದ್ಯಕೀಯ ಆಮ್ಲಜನಕದ ಸಿಲಿಂಡರ್‌ಗಳಲ್ಲಿ ವಾತಾವರಣದ ಇತರ ಅನಿಲಗಳನ್ನೆಲ್ಲಾ ಬೇರ್ಪಡಿಸಿ, ಶುದ್ಧ ಆಮ್ಲಜನಕವನ್ನು ಮಾತ್ರ ತುಂಬಿಸಲಾಗುತ್ತದೆ. ಇದರ ಶುದ್ಧತೆ ಶೇ 99ರಷ್ಟು ಇರುತ್ತದೆ. ಸೋಂಕಿಗೆ ಒಳಗಾಗಿ, ಸಹಜವಾಗಿ ಉಸಿರಾಡಲು ಕಷ್ಟವಾಗುವ ರೋಗಿಗಳಿಗೆ ನಿಗದಿತ ಒತ್ತಡದಲ್ಲಿ ಈ ಆಮ್ಲಜನಕವನ್ನು ನೇರವಾಗಿ ಮೂಗಿಗೆ ನೀಡಲಾಗುತ್ತದೆ.

ಉಸಿರಾಟದ ತೊಂದರೆ ಅನುಭವಿಸುತ್ತಿರುವವರಿಗೆ ಶುದ್ಧವಾದ ಆಮ್ಲಜನಕ ನೀಡುವುದು ಅನಿವಾರ್ಯವಾಗುತ್ತದೆ. ಆದ್ದರಿಂದ ವೈದ್ಯಕೀಯ ಆಮ್ಲಜನಕದ ಸಿಲಿಂಡರ್‌ಗಳಲ್ಲಿ ಬೇರೆ ಯಾವುದೇ ಅನಿಲವು ಪ್ರವೇಶವಾಗದಂತೆ ನೋಡಿಕೊಳ್ಳಲಾಗುತ್ತದೆ. ಅವುಗಳನ್ನು ತುಂಬಿಡುವ ಟ್ಯಾಂಕ್ ಅಥವಾ ಸಿಲಿಂಡರ್‌ಗಳೂ ಶುದ್ಧವಾಗಿರಬೇಕು. ಹಿಂದೆ ಬೇರೆ ಉದ್ದೇಶಕ್ಕೆ ಬಳಸಿದ್ದ ಸಿಲಿಂಡರ್ ಅನ್ನು ಸ್ವಚ್ಛಗೊಳಿಸದೆ, ಆಮ್ಲಜನಕ ತುಂಬಲು ಬಳಸುವಂತಿಲ್ಲ.

ನಮ್ಮ ಶರೀರವು ಶೇ 21ರಷ್ಟು ಆಮ್ಲಜನಕವನ್ನು ಉಸಿರಾಡುವಂತೆ ರೂಪುಗೊಂಡಿದೆ. ನಮಗೆ ವಾತಾವರಣದಲ್ಲಿ ಸಹಜವಾಗಿ ಲಭ್ಯವಾಗುವ ಆಮ್ಲಜನಕವೇ ಸಾಕಾಗುತ್ತದೆ. ಶೇ 100ರಷ್ಟು ಶುದ್ಧವಾದ ಆಮ್ಲಜನಕವನ್ನು ದೀರ್ಘಕಾಲದವರೆಗೆ ಸೇವಿಸುವುದು ದೈಹಿಕವಾದ ಸಮಸ್ಯೆಗಳಿಗೂ ಕಾರಣವಾಗಬಹುದು ಎಂದು ವೈದ್ಯರು ಹೇಳುತ್ತಾರೆ.

ವೈದ್ಯಕೀಯ ಆಮ್ಲಜನಕವನ್ನು ಸರಿಯಾದ ಒತ್ತಡದಲ್ಲಿ ರೋಗಿಗೆ ಒದಗಿಸುವುದು ಅಗತ್ಯ. ಎಲ್ಲಾ ರೋಗಿಗಳಿಗೂ ಒಂದೇ ರೀತಿಯ ಒತ್ತಡದಲ್ಲಿ ಆಮ್ಲಜನಕ ಒದಗಿಸುವುದು ಸರಿಯಾಗದು. ಅದಕ್ಕಾಗಿಯೇ ವೈದ್ಯರ ಸಲಹೆ ಇಲ್ಲದೆ ಇದನ್ನು ಬಳಸುವಂತಿಲ್ಲ.

ಆಧಾರ: ಡಬ್ಲ್ಯುಎಚ್‌ಒ ಜಾಲತಾಣ, ಮೇಡ್‌ಹೌಡಾಟ್‌.ಕಾಮ್



ಸಿಲಿಂಡರ್‌ಗಳ ಮರುಪೂರಣ

ಅಗತ್ಯ ಯಾವಾಗ?

ಕೋವಿಡ್-19ರಂತಹ ಕೆಲವು ರೋಗಗಳು ತೀವ್ರವಾದಾಗ ದೇಹದಲ್ಲಿ ಆಮ್ಲಜನಕದ ಮಟ್ಟವು ಕುಸಿಯಬಹುದು. ದೇಹದಲ್ಲಿ ಆಮ್ಲಜನಕ ಮಟ್ಟವು ಕುಸಿದಾಗ ಜೀವಕೋಶಗಳಿಗೆ ಅಗತ್ಯ ಇರುವಷ್ಟು ಆಮ್ಲಜನಕ ದೊರೆಯುವುದಿಲ್ಲ. ಜೀವಕೋಶಗಳ ಸಹಜ ಚಟುವಟಿಕೆಗೆ ಇದು ಅಡ್ಡಿಯಾಗುತ್ತದೆ. ಇಂತಹ ಸಂದರ್ಭದಲ್ಲಿ ವೈದ್ಯಕೀಯ ಆಮ್ಲಜನಕವನ್ನು ನೀಡಿ, ಕೊರತೆಯನ್ನು ಸರಿಪಡಿಸಬೇಕಾಗುತ್ತದೆ.

ದೇಹದಲ್ಲಿ ಆಮ್ಲಜನಕದ ಪ್ರಮಾಣವು ದೀರ್ಘ ಕಾಲದಿಂದ ಕಡಿಮೆ ಇದ್ದರೆ, ಅದಕ್ಕೆ ಯಾವುದೇ ಚಿಕಿತ್ಸೆ ನೀಡದೇ ಇದ್ದರೆ ಜೀವಕೋಶಗಳು ಕೆಲಸ ಮಾಡುವುದನ್ನೇ ನಿಲ್ಲಿಸಿಬಿಡುತ್ತವೆ. ಸಂಪೂರ್ಣವಾಗಿ ಚಟುವಟಿಕೆ ನಿಲ್ಲಿಸಿದ ಜೀವಕೋಶಗಳು ಸಾಯುತ್ತವೆ. ಇದು ದೇಹದ ಅಂಗಾಂಗಗಳ ಮೇಲೆ ಪರಿಣಾಮ ಬೀರುತ್ತದೆ. ನಮ್ಮ ಮಿದುಳು, ಹೃದಯ, ಶ್ವಾಸಕೋಶ, ಕಿಡ್ನಿ ಮುಂತಾದ ಎಲ್ಲ ಅಂಗಗಳಿಗೂ ಆಮ್ಲಜನಕ ಬೇಕೇ ಬೇಕು. ಈ ಅಂಗಗಳಿಗೆ ಆಮ್ಲಜನಕ ಪೂರೈಕೆಯಲ್ಲಿ ವ್ಯತ್ಯಯವಾದರೆ, ಇವುಗಳ ಕೆಲಸದಲ್ಲಿಯೂ ವ್ಯತ್ಯಯ ಆಗುತ್ತದೆ. ಕೆಲವು ಸಂದರ್ಭದಲ್ಲಿ ಸಾವು ಸಂಭವಿಸುವ ಅಪಾಯವೂ ಇದೆ.

ಇಂತಹ ಸಂದರ್ಭದಲ್ಲಿ ವೈದ್ಯಕೀಯ ಆಮ್ಲಜನಕವನ್ನು ನೀಡಬೇಕಾಗುತ್ತದೆ. ಹಾಗಾಗಿಯೇ ಇದನ್ನು ಜೀವ ರಕ್ಷಕ ಎಂದು ಪರಿಗಣಿಸಲಾಗುತ್ತಿದೆ. ಕೋವಿಡ್ ಬಾಧಿತರಲ್ಲಿ ಶ್ವಾಸಕೋಶದ ಸಮಸ್ಯೆ ಉಂಟಾಗಿ ಅವರ ದೇಹದಲ್ಲಿ ಆಮ್ಲಜನಕದ ಪ್ರಮಾಣ ಕಡಿಮೆಯಾಗುವುದು ಸಾಮಾನ್ಯ. ಹಾಗಾಗಿ, ಕೋವಿಡ್ ಚಿಕಿತ್ಸೆಯಲ್ಲಿ ವೈದ್ಯಕೀಯ ಆಮ್ಲಜನಕಕ್ಕೆ ಭಾರಿ ಬೇಡಿಕೆ ಇದೆ.

ಕೈಗಾರಿಕಾ ಆಮ್ಲಜನಕ ಪರಿಶುದ್ಧ ಅಲ್ಲ

ಕೈಗಾರಿಕಾ ಆಮ್ಲಜನಕಕ್ಕೂ ವೈದ್ಯಕೀಯ ಆಮ್ಲಜನಕಕ್ಕೂ ವ್ಯತ್ಯಾಸವಿದೆ. ಕೈಗಾರಿಕೆಗಳಲ್ಲಿ ಆಮ್ಲಜನಕವನ್ನು ದಹನ, ಆಕ್ಸಿಡೀಕರಣ, ಕತ್ತರಿಸುವುದು ಮತ್ತು ರಾಸಾಯನಿಕ ಕ್ರಿಯೆಗಳಿಗೆ ಬಳಸಲಾಗುತ್ತದೆ.

ವಾಣಿಜ್ಯಿಕವಾಗಿ ಉತ್ಪತ್ತಿಯಾಗುವ ಶೇ 55ರಷ್ಟು ಆಮ್ಲಜನಕವನ್ನು ಕಬ್ಬಿಣ ಮತ್ತು ಉಕ್ಕು ಕಾರ್ಖಾನೆಗಳಲ್ಲಿ ಬಳಸಲಾಗುತ್ತದೆ. ಶೇ 25ರಷ್ಟು ಆಮ್ಲಜನಕವು ರಾಸಾಯನಿಕ ಕಾರ್ಖಾನೆಗಳಲ್ಲಿ ಬಳಕೆಯಾಗುತ್ತದೆ. ಶೇ 20ರಷ್ಟು ವೈದ್ಯಕೀಯ ಉದ್ದೇಶ, ಲೋಹ ಕತ್ತರಿಸಲು, ಬೆಸುಗೆ ಹಾಕಲು, ರಾಕೆಟ್ ಇಂಧನವಾಗಿ, ನೀರಿನ ಸಂಸ್ಕರಣೆಗೆ ಬಳಕೆಯಾಗುತ್ತದೆ.

ಕೈಗಾರಿಕೆಗಳಲ್ಲಿ ತಯಾರಾಗುವ ಆಮ್ಲಜನಕದ ಶುದ್ಧತೆಯ ಮಟ್ಟದಲ್ಲಿ ವ್ಯತ್ಯಾಸವಿರುತ್ತದೆ. ಕೈಗಾರಿಕಾ ಬಳಕೆಗೆ ಉತ್ಪಾದಿಸುವ ಆಮ್ಲಜನಕದ ಶುದ್ಧತೆಯ ಮಟ್ಟ ಕಡಿಮೆಯಿರುತ್ತದೆ. ಕಾರ್ಖಾನೆಯ ಕೆಲಸಗಳಿಗೆ ಬಳಸುವ ಆಮ್ಲಜನಕದ ಶುದ್ಧತೆಯ ಮಟ್ಟವು ಮಾನವನ ಬಳಕೆಗೆ ಸೂಕ್ತವಲ್ಲ. ಅದರಲ್ಲಿ ಕಲ್ಮಶಗಳು ಇರಬಹುದು. ಅದನ್ನೇ ಬಳಸಿದರೆ ರೋಗಿ ಅಸ್ವಸ್ಥಗೊಳ್ಳುತ್ತಾನೆ.

ವೈದ್ಯಕೀಯ ಉದ್ದೇಶಕ್ಕೆ ಆಮ್ಲಜನಕ ಉತ್ಪಾದಿಸುವಾಗ ಶುದ್ಧತೆಯ ಮಟ್ಟವನ್ನು ಹೆಚ್ಚಿಸಲಾಗುತ್ತದೆ. ಆಮ್ಲಜನಕ ಸಿಲಿಂಡರ್‌ಗಳು ಸಹ ಮಾಲಿನ್ಯಕಾರಕಗಳಿಂದ ಮುಕ್ತವಾಗಿರಬೇಕು. ವೈದ್ಯಕೀಯ ಆಮ್ಲಜನಕ ಸಿಲಿಂಡರ್‌ಗಳು ಶುದ್ಧ ಆಮ್ಲಜನಕವನ್ನು ಹೊಂದಿರುತ್ತವೆ. ಶೇ 93ರಿಂದ 95ರಷ್ಟು ಶುದ್ಧವಾದ ಆಮ್ಲಜನಕವನ್ನೇ ರೋಗಿಗಳಿಗೆ ನೀಡಲಾಗುತ್ತದೆ.

ಆಮ್ಲಜನಕ ಉತ್ಪಾದನೆ ಹೇಗೆ?

ಆಮ್ಲಜನಕವನ್ನು ಇತರ ಅನಿಲಗಳು ಮತ್ತು ಗಾಳಿಯಲ್ಲಿ ಕಂಡುಬರುವ ಕಲ್ಮಶಗಳಿಂದ ಬೇರ್ಪಡಿಸುವ ಮೂಲಕ ತಯಾರಿಸಲಾಗುತ್ತದೆ. ಇದಕ್ಕಾಗಿ ಸಂಕೋಚನ ಮತ್ತು ಶುದ್ಧೀಕರಣ ವಿಧಾನಗಳನ್ನು ಪುನರಾವರ್ತನೆ ಮಾಡಲಾಗುತ್ತದೆ. ಇಂತಹ ವೈದ್ಯಕೀಯ ಆಮ್ಲಜನಕವು ಶೇ 99ಕ್ಕಿಂತ ಹೆಚ್ಚು ಶುದ್ಧತೆಯನ್ನು ಹೊಂದಿರುತ್ತದೆ. ಜೊತೆಗೆ ಪರೀಕ್ಷೆಗೆ ಒಳಪಟ್ಟಿರುತ್ತದೆ. ಬೃಹತ್ ಕೈಗಾರಿಕಾ ಘಟಕಗಳಲ್ಲಿ ಇದು ಸಿದ್ಧವಾಗುತ್ತದೆ.

ವಿದ್ಯುತ್ ಚಾಲಿತ ಪುಟ್ಟ ಸಾಂದ್ರೀಕರಣ ಯಂತ್ರಗಳ ಮೂಲಕ ಸುತ್ತಲಿನ ಗಾಳಿಯಿಂದ ಸಾರಜನಕವನ್ನು ಬೇರ್ಪಡಿಸಿ ಆಮ್ಲಜನಕ ಪಡೆಯಬಹುದು. ಇದರ ಶುದ್ಧತೆಯ ಮಟ್ಟ ಶೇ 93. ಆಸ್ಪತ್ರೆಗಳಲ್ಲಿ ಇಂತಹ ಚಿಕ್ಕ ಮತ್ತು ದೊಡ್ಡ ಗಾತ್ರದ ಯಂತ್ರಗಳನ್ನು ಬಳಸಲಾಗುತ್ತದೆ. ಆದರೆ ಬೃಹತ್ ಪ್ರಮಾಣದ ಬೇಡಿಕೆಯನ್ನು ಈ ಯಂತ್ರಗಳು ಪೂರೈಸಲಾರವು. ಇವಕ್ಕೆ ಸಾಕಷ್ಟು ವಿದ್ಯುತ್ ಅಗತ್ಯವಿದ್ದು, ನಿಯಮಿತವಾದ ನಿರ್ವಹಣೆಯ ಅಗತ್ಯವೂ ಇದೆ.

ಪೂರೈಕೆ ವಿಧಾನ

ಆಸ್ಪತ್ರೆಗಳಿಗೆ ಹಲವು ವಿಧಾನಗಳ ಮೂಲಕ ವೈದ್ಯಕೀಯ ಆಮ್ಲಜನಕವನ್ನು ಪೂರೈಸಲಾಗುತ್ತದೆ. ಆಸ್ಪತ್ರೆಯ ಗಾತ್ರ ಹಾಗೂ ಬೇಡಿಕೆಗೆ ಅನುಗುಣವಾಗಿ ವಿವಿಧ ಮೂಲಗಳಿಂದ ಆಮ್ಲಜನಕ ಪಡೆಯಲಾಗುತ್ತದೆ.

- **ವ್ಯಾಕ್ಯೂಮ್ ಇನ್ಸುಲೇಟೆಡ್ ಎವಾಪರೇಟರ್ (ವಿಐಇ):** ಇದು ದ್ರವರೂಪದ ಆಮ್ಲಜನಕವನ್ನು ಶೇಖರಿಸುವ ಬೃಹತ್ ವ್ಯವಸ್ಥೆಯಾಗಿದೆ. ಕಾರ್ಖಾನೆಗಳಲ್ಲಿ ಅತಿದೊಡ್ಡ ಪ್ರಮಾಣದಲ್ಲಿ ಇದನ್ನು ಉತ್ಪಾದನೆ ಮಾಡಲಾಗುತ್ತದೆ. ಲಾರಿ ಕಂಟೇನರ್‌ಗಳ ಮೂಲಕ ವಿವಿಧ ಕಡೆಗಳಿಗೆ ಸರಬರಾಜು ಮಾಡಲಾಗುತ್ತದೆ.
- **ಆಮ್ಲಜನಕ ಸಿಲಿಂಡರ್:** ಸಣ್ಣಪುಟ್ಟ ಅಗತ್ಯಗಳಿಗೆ ಇದು ಅನುಕೂಲ. ಅನಿಲ ಸಿಲಿಂಡರ್‌ನಲ್ಲಿ ತೀವ್ರ ಒತ್ತಡದಲ್ಲಿ ಆಮ್ಲಜನಕವನ್ನು ಶೇಖರಿಸಿ ಬಳಸಲಾಗುತ್ತದೆ. ಸಣ್ಣ ಆಸ್ಪತ್ರೆಗಳಲ್ಲಿ ಹಾಗೂ ತೀವ್ರ ಬೇಡಿಕೆ ಇಲ್ಲದ ಕಡೆಗಳಲ್ಲಿ ಸಿಲಿಂಡರ್‌ಗಳನ್ನು ಬಳಸಲಾಗುತ್ತದೆ.
- **ಆಕ್ಸಿಜನ್ ಕಾನ್‌ಸೆಂಟ್ರೇಟರ್:** ಸುತ್ತಲಿನ ಗಾಳಿಯಲ್ಲಿರುವ ಆಮ್ಲಜನಕವನ್ನು ಸಾಂದ್ರೀಕರಿಸಿ ಸ್ಥಳದಲ್ಲೇ ಪೂರೈಸುವ ವ್ಯವಸ್ಥೆಯಿದು. ಈ ಉಪಕರಣವು ವಿದ್ಯುತ್ ಚಾಲಿತವಾಗಿದೆ. ರಕ್ತದಲ್ಲಿ ಕಡಿಮೆ ಆಮ್ಲಜನಕದ ಪ್ರಮಾಣ ಹೊಂದಿರುವ ರೋಗಿಗಳ ಉಪಚಾರಕ್ಕೆ ಈ ಯಂತ್ರ ಬಳಸಲಾಗುತ್ತದೆ.

ದ್ರವೀಕೃತ, ಅನಿಲರೂಪದ ಸಿಲಿಂಡರ್

ವೈದ್ಯಕೀಯ ಆಮ್ಲಜನಕವನ್ನು ದ್ರವ ಮತ್ತು ಅನಿಲದ ರೂಪದಲ್ಲಿ ಸಿಲಿಂಡರ್‌ಗಳಲ್ಲಿ ಸಂಗ್ರಹಿಸಲಾಗುತ್ತದೆ. ದ್ರವೀಕೃತ ಆಮ್ಲಜನಕವೆಂದರೆ ಒಂದು ರೀತಿಯಲ್ಲಿ ಗಾಳಿಯನ್ನು ಭಟ್ಟಿ ಇಳಿಸುವ ಪ್ರಕ್ರಿಯೆ. ವಾತಾವರಣದ ನೈಟ್ರೋಜನ್ ಹಾಗೂ ಇತರ ಅನಿಲಗಳಿಂದ ಆಮ್ಲಜನಕವನ್ನು ಪ್ರತ್ಯೇಕಿಸುವುದು ಮೊದಲ ಹಂತ. ಅದಾದನಂತರ ಆಮ್ಲಜನಕವನ್ನು ಇನ್ನಷ್ಟು ಶುದ್ಧೀಕರಿಸಲಾಗುತ್ತದೆ. ಆನಂತರ ಅದನ್ನು ತಂಪಾಗಿಸುವ ಮತ್ತು ಸಂಕುಚಿತ ಗೊಳಿಸುವ ಪ್ರಕ್ರಿಯೆಯ ಮೂಲಕ ದ್ರವರೂಪಕ್ಕೆ ಪರಿವರ್ತಿಸಿ ಸಿಲಿಂಡರ್‌ಗಳಲ್ಲಿ ತುಂಬಲಾಗುತ್ತದೆ.

ಅನಿಲ ರೂಪದಲ್ಲೂ ಆಮ್ಲಜನಕವನ್ನು ಸಿಲಿಂಡರ್‌ಗಳಲ್ಲಿ ಸಂಗ್ರಹಿಸಿ ವಿತರಿಸಲಾಗುತ್ತದೆ. ಇವುಗಳ ಬಳಕೆಯ ಅಂತಿಮ ಪರಿಣಾಮದಲ್ಲಿ ವ್ಯತ್ಯಾಸವೇನೂ ಇಲ್ಲ. ಆದರೆ ಬಳಕೆಯ ಅನುಕೂಲಗಳಲ್ಲಿ ಸಾಕಷ್ಟು ವ್ಯತ್ಯಾಸಗಳಿವೆ. ತಮ್ಮ ಅಗತ್ಯಕ್ಕೆ ಅನುಗುಣವಾಗಿ ರೋಗಿಗಳು ಇದನ್ನು ಬಳಸಬಹುದಾಗಿದೆ.

ದ್ರವೀಕೃತ ಆಮ್ಲಜನಕದ ಸಿಲಿಂಡರ್‌ಗಳು ಅನಿಲರೂಪದ ಸಿಲಿಂಡರ್‌ಗಳಿಗಿಂತ ಚಿಕ್ಕದಾಗಿರುತ್ತವೆ. ಯಾಕೆಂದರೆ, ದ್ರವರೂಪಕ್ಕೆ ಪರಿವರ್ತಿಸುವಾಗ ಅನಿಲವು 860 ಪಟ್ಟು ಸಂಕುಚಿತಗೊಳ್ಳುತ್ತದೆ ಮತ್ತು -183 (ಮೈನಸ್) ಸೆಂಟಿಗ್ರೇಡ್‌ನಷ್ಟು ತಣ್ಣಗಾಗುತ್ತದೆ. ಆದ್ದರಿಂದ ದ್ರವರೂಪದಲ್ಲಾದರೆ ಸಣ್ಣ ಸಿಲಿಂಡರ್‌ನಲ್ಲಿ ಹೆಚ್ಚಿನ ಪ್ರಮಾಣದ ಆಮ್ಲಜನಕವನ್ನು ಸಂಗ್ರಹಿಸಲು ಸಾಧ್ಯ ಮತ್ತು ಒಬ್ಬ ವ್ಯಕ್ತಿಗೆ ದಿನಕ್ಕೆ ಬೇಕಾದಷ್ಟು ಆಮ್ಲಜನಕವನ್ನು ಒಂದು ಸಿಲಿಂಡರ್‌ನಲ್ಲಿ ಸಂಗ್ರಹಿಸಬಹುದು.

ದ್ರವರೂಪದ ಆಮ್ಲಜನಕದ ಸಿಲಿಂಡರ್‌ಗಳ ಮೇಲೆ ಒತ್ತಡ ಕಡಿಮೆ ಇರುತ್ತದೆ. ಇದರ ಸಾಗಾಣಿಕೆ ಹಾಗೂ ಮರು ತುಂಬಿಸುವಿಕೆಯೂ ಸುಲಭ.



ಗಾಜಿಯಾಬಾದ್‌ನಲ್ಲಿರುವ ಐನಾಕ್ಸ್ ಆಮ್ಲಜನಕ ತಯಾರಿಕಾ ಘಟಕ

ಹೈಕೋರ್ಟ್ ಅಭಿಪ್ರಾಯ ಪ್ರಸಾರಕ್ಕೆ ತಡೆ ಅಸಾಧ್ಯ: ಸುಪ್ರೀಂ ಕೋರ್ಟ್

'ವರದಿ ಪ್ರಕಟವಾದರೆ ಉತ್ತರದಾಯಿತ್ವ ಹೆಚ್ಚು'

ಪ್ರಜಾವಾಣಿ ವಾರ್ತೆ

ನವದೆಹಲಿ: ಸುಪ್ರೀಂ ಕೋರ್ಟ್ ಮತ್ತು ಹೈಕೋರ್ಟ್‌ಗಳಲ್ಲಿ ನಡೆಯುವ ನ್ಯಾಯಾಂಗ ಪ್ರಕ್ರಿಯೆಯು ಮಾಧ್ಯಮದಲ್ಲಿ ವರದಿ ಆಗುವುದರಿಂದ ನ್ಯಾಯಮೂರ್ತಿಗಳ ಉತ್ತರದಾಯಿತ್ವ ಹೆಚ್ಚುತ್ತದೆ ಎಂದು ಸುಪ್ರೀಂ ಕೋರ್ಟ್ ಸೋಮವಾರ ಹೇಳಿದೆ. ಇದರಿಂದಾಗಿ, ನ್ಯಾಯಾಂಗ ಪ್ರಕ್ರಿಯೆಯಲ್ಲಿ ಜನರ ವಿಶ್ವಾಸವೂ ವೃದ್ಧಿಯಾಗುತ್ತದೆ ಎಂದಿದೆ.

'ಸಂವಾದಗಳನ್ನು ಮಾಧ್ಯಮವು ವರದಿ ಮಾಡಬಾರದು ಎಂದು ನಾವು ನಿರೀಕ್ಷಿಸಲು ಆಗದು. ಮೌಖಿಕ ಅಭಿಪ್ರಾಯಗಳಿಗೆ ನ್ಯಾಯಾಂಗದ ಆದೇಶದಷ್ಟೇ ಮಹತ್ವ ಇದೆ. ನ್ಯಾಯಾಂಗದ ಯೋಚನೆಯು ಬಿಚ್ಚಿಕೊಳ್ಳುವ ಪ್ರಕ್ರಿಯೆಯ ಬಗ್ಗೆ ಜನರಿಗೆ ದೊಡ್ಡ ಆಸಕ್ತಿ ಇದೆ' ಎಂದು ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ನೇತೃತ್ವದ ಪೀಠವು ಹೇಳಿದೆ.

ತಮಿಳುನಾಡು ವಿಧಾನಸಭೆ ಚುನಾವಣಾ ಪ್ರಚಾರದ ಸಂದರ್ಭದಲ್ಲಿ ಕೋವಿಡ್ ತಡೆ ಮಾರ್ಗಸೂಚಿಯು ಕಟ್ಟುನಿಟ್ಟಾಗಿ ಪಾಲನೆ ಆಗುವಂತೆ ನೋಡಿಕೊಳ್ಳುವಲ್ಲಿ ವಿಫಲವಾದ ಚುನಾವಣಾ ಆಯೋಗದ ವಿರುದ್ಧ ಕೊಲೆ ಪ್ರಕರಣ ದಾಖಲಿಸಬೇಕು ಎಂದು ಮದ್ರಾಸ್ ಹೈಕೋರ್ಟ್ ಹೇಳಿದ್ದನ್ನು ಆಯೋಗವು ಸಮಚಿತ್ತದಲ್ಲಿ, ಕಹಿ ಗುಳಿಗೆ ಎಂಬಂತೆ ಸ್ವೀಕರಿಸಬೇಕು ಎಂದೂ ಪೀಠವು ತಿಳಿಸಿದೆ.

ನ್ಯಾಯಮೂರ್ತಿಗಳ ಮೌಖಿಕ ಅಭಿಪ್ರಾಯಗಳನ್ನು ಮಾಧ್ಯಮಗಳು ಪ್ರಕಟಿಸುವುದಕ್ಕೆ ತಡೆ ಕೊಡಬೇಕು ಎಂದು ಚುನಾವಣಾ ಆಯೋಗವು ಸಲ್ಲಿಸಿದ್ದ ಅರ್ಜಿಯ ವಿಚಾರಣೆಯನ್ನು ಪೀಠವು ನಡೆಸಿತು. ಮದ್ರಾಸ್ ಹೈಕೋರ್ಟ್‌ನ ಅಭಿಪ್ರಾಯವು ಕಠಿಣವಾಗಿತ್ತು ಎಂಬುದು ನಿಜ. ಆದರೆ, ಆಕ್ರೋಶ ಮತ್ತು ಹತಾಶೆಯಿಂದ ಅಂತಹ ಅಭಿಪ್ರಾಯ ವ್ಯಕ್ತವಾಗಿದೆ. ಪರಿಸ್ಥಿತಿಯನ್ನು ಸಮತೋಲನ ಗೊಳಿಸಲು ಯತ್ನಿಸಲಾಗುವುದು. ಆದರೆ, ಅರ್ಜಿಯ ವ್ಯಾಪ್ತಿಯ ಆಚೆಗಿನ ವಿಷಯಗಳ ಬಗ್ಗೆ ಹೈಕೋರ್ಟ್ ನ್ಯಾಯಮೂರ್ತಿಗಳು ಅಭಿಪ್ರಾಯ ವ್ಯಕ್ತಪಡಿಸುವಂತಿಲ್ಲ ಎಂದು ಹೇಳಲಾಗದು. ಕೆಲವೊಮ್ಮೆ ಸಾರ್ವಜನಿಕ ಹಿತಾಸಕ್ತಿಯಿಂದ ಇಂತಹ ಅಭಿಪ್ರಾಯಗಳು ವ್ಯಕ್ತವಾಗುತ್ತವೆ ಎಂದು ಪೀಠ ಹೇಳಿತು.



ನ್ಯಾಯಮೂರ್ತಿಗಳು ವ್ಯಕ್ತಪಡಿಸುವ ಅಭಿಪ್ರಾಯ ಆ ಕ್ಷಣಕ್ಕೆ ಸಂಬಂಧಿಸಿದ್ದಾದರೂ ಅದರ ಗುರುತುಗಳನ್ನು ಲಿಖಿತ ಆದೇಶದಲ್ಲಿ ಕಾಣಬಹುದು

ಸುಪ್ರೀಂ ಕೋರ್ಟ್

ಅಂತಿಮ ಆದೇಶದ ಭಾಗವಾಗಿಲ್ಲದ ಅಭಿಪ್ರಾಯಗಳು ಮಾಧ್ಯಮದಲ್ಲಿ ಪ್ರಕಟವಾಗಬಾರದು ಎಂದು ಆಯೋಗದ ಪರ ವಕೀಲರ ಕೋರಿಕೆ ಅಸಹಜವಾದುದು ಎಂದು ಪೀಠವು ಹೇಳಿತು.

ಚುನಾವಣಾ ಆಯೋಗವು ಸಾಂವಿಧಾನಿಕ ಸಂಸ್ಥೆಯಾಗಿದೆ. ಹೈಕೋರ್ಟ್ ಕೂಡ ಸಾಂವಿಧಾನಿಕ ಸಂಸ್ಥೆ. ಒಂದು ಸಾಂವಿಧಾನಿಕ ಸಂಸ್ಥೆಯು ಇನ್ನೊಂದು ಸಾಂವಿಧಾನಿಕ ಸಂಸ್ಥೆಯ ಬಗ್ಗೆ ಪ್ರತಿಕೂಲವಾದ ಅಭಿಪ್ರಾಯ ವ್ಯಕ್ತಪಡಿಸಬಾರದು ಎಂಬ ಆಯೋಗದ ವಾದವನ್ನೂ ಪೀಠವು ಒಪ್ಪಿಲ್ಲ.

ಲಾಕ್‌ಡೌನ್ ಹೇರಿಕೆ: ಸುಪ್ರೀಂ ಸಲಹೆ

ಕೋವಿಡ್-19ರ ಎರಡನೇ ಅಲೆಯ ಹರಡುವಿಕೆ ತಡೆಗೆ ಲಾಕ್‌ಡೌನ್ ಹೇರಿಕೆ ಮತ್ತು ಹೆಚ್ಚು ಜನರು ಸೇರುವ ಸಮಾರಂಭಗಳಿಗೆ ನಿಷೇಧ ಹೇರುವ ಸಾಧ್ಯತೆಯನ್ನು ಪರಿಶೀಲಿಸಿ ಎಂದು ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಗೆ ಸುಪ್ರೀಂ ಕೋರ್ಟ್ ಸಲಹೆ ನೀಡಿದೆ.

ಕೋವಿಡ್ ಪ್ರಕರಣಗಳ ತೀವ್ರ ಏರಿಕೆಯ ಕಾರಣದಿಂದ ಸಾರ್ವಜನಿಕ ಒಳಿತಿಗಾಗಿ ಇಂತಹ ಕ್ರಮ ಕೈಗೊಳ್ಳಿ ಎಂದು ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ನೇತೃತ್ವದ ಪೀಠವು ಹೇಳಿದೆ. ಸೋಂಕು ಹರಡುವಿಕೆ ತಡೆಗೆ ಈವರೆಗೆ ಕೈಗೊಂಡ ಕ್ರಮಗಳು ಮತ್ತು ಮುಂದೆ ಕೈಗೊಳ್ಳಲಿರುವ ಕ್ರಮಗಳ ಬಗ್ಗೆ ಇದೇ 10ರೊಳಗೆ ಮಾಹಿತಿ ನೀಡುವಂತೆಯೂ ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಗೆ ಸೂಚಿಸಲಾಗಿದೆ.

ಹಲವು ರಾಜ್ಯಗಳಲ್ಲಿ ಸ್ಥಳೀಯವಾಗಿ ಪ್ರಯಾಣ ನಿರ್ಬಂಧ, ಕರ್ಫ್ಯೂನಂತಹ ಕ್ರಮಗಳನ್ನು ಕೈಗೊಂಡಿದ್ದರ ನಡುವೆಯೇ ಪೀಠವು ಈ ರೀತಿಯ ಸಲಹೆ ಕೊಟ್ಟಿದೆ. ಆರೋಗ್ಯ ಕ್ಷೇತ್ರದ ವೃತ್ತಿಪರರ ಸುರಕ್ಷತೆಗೆ ಹೆಚ್ಚಿನ ಗಮನ ಹರಿಸಿ. ವೈದ್ಯರು ಮಾತ್ರವಲ್ಲ, ನರ್ಸ್‌ಗಳು, ಆಸ್ಪತ್ರೆ ಸಿಬ್ಬಂದಿ, ಆಂಬುಲೆನ್ಸ್ ಚಾಲಕರು, ನೈರ್ಮಲ್ಯ ಕಾರ್ಮಿಕರ ಬಗ್ಗೆಯೂ ಗಮನ ಹರಿಸಿ ಎಂದು ಪೀಠವು ಸೂಚಿಸಿದೆ.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ


9606038256

ಕೋವಿಡ್ ರೋಗಿಗಳ ಚಿಕಿತ್ಸೆಗೆ ಹೆಚ್ಚಾಗಿ ಬಳಸಲಾಗುತ್ತಿರುವ ರೆಮ್‌ಡಿಸಿವಿರ್ ಇಂಜೆಕ್ಷನ್‌ನ ಕೊರತೆ ತೀವ್ರವಾಗಿದೆ. ಕೃತಕ ಅಭಾವವನ್ನು ಸೃಷ್ಟಿಸಲಾಗಿದೆ ಎಂಬ ಆರೋಪವಿದೆ. ಕೋವಿಪ್ರಿ (COVIPRI) ಹೆಸರಿನಲ್ಲಿ ರೆಮ್‌ಡಿಸಿವಿರ್ ಇಂಜೆಕ್ಷನ್ ಮಾರುಕಟ್ಟೆಗೆ ಬಂದಿದೆ ಎಂಬ ಸುದ್ದಿ ಇದೆ. ರೆಮ್‌ಡಿಸಿವಿರ್ ಅಭಾವದ ವೇಳೆಯಲ್ಲಿ ಅದನ್ನೇ ಹೋಲುವ ಕೋವಿಪ್ರಿ ಇಂಜೆಕ್ಷನ್ ಪರ್ಯಾಯ ಆಗಬಲ್ಲದು ಎಂದು ಹೇಳಲಾಗುತ್ತಿದೆ.



ಕೋವಿಪ್ರಿ ಹೆಸರಿನ ಇಂಜೆಕ್ಷನ್ ನಕಲಿ ಉತ್ಪನ್ನ ಎಂದು ಪಿಐಬಿ ಫ್ಯಾಕ್ಟ್ ಚೆಕ್ ವೇದಿಕೆ ತಿಳಿಸಿದೆ. ಪರಿಶೀಲಿಸದ ಮೂಲಗಳಿಂದ ಬರುವ ವೈದ್ಯಕೀಯ ಉತ್ಪನ್ನಗಳನ್ನು ಖರೀದಿಸಬೇಡಿ ಎಂದು ಜನರಿಗೆ ಸೂಚಿಸಿದೆ. ಇಂತಹ ನಕಲಿ ಔಷಧಿಗಳು ಮತ್ತು ಚುಚ್ಚುಮದ್ದಿನ ಬಗ್ಗೆ ಎಚ್ಚರದಿಂದಿರಿ ಎಂದು ತಿಳಿಸಿದೆ.

ಗುಂಡಣ್ಣ



ಬೆರಗಿನ ಬೆಳಕು

ಗುರುರಾಜ ಕರಜಗಿ

ಅರ್ಧನಾರೀಶ್ವರಂತೆ

ಬರಿಯಹೆಣ್ ಬರಿಯ ಗಂಡೆಂಬುದಿಳೆಯೊಳಗಿಲ್ಲ |
ಬೆರಕೆಯೆಲ್ಲರುಮರ್ಧನಾರೀಶನಂತೆ ||
ನರತೆಯಣು ನಾರಿಯಲಿ ನಾರೀತ್ವ ನರನೊಳಣು |
ತಿರಿಚುತಿರುವುದು ಮನವ – ಮಂಕುತಿಮ್ಮ ||413||

ಪದ-ಅರ್ಥ: ಗಂಡೆಂಬುದಿಳೆಯೊಳಗಿಲ್ಲ = ಗಂಡೆಂಬುದು + ಇಳೆಯೊಳಗೆ (ಭೂಮಿಯಲ್ಲಿ-) + ಇಲ್ಲ, ಬೆರಕೆಯೆಲ್ಲರುಮರ್ಧನಾರೀಶನಂತೆ = -ಬೆರಕೆಯೆಲ್ಲರುಮ್(ಎಲ್ಲರೂ ಬೆರಕೆಯಾದವರು) + ಅರ್ಧನಾರೀಶನಂತೆ(ಅರ್ಧನಾರೀಶ್ವರನಂತೆ), ನರತೆಯಣುನರತೆಯ + ಅಣು, ನರನೊಳಣು = ನರನೊಳು + ಅಣು

ವಾಚ್ಯಾರ್ಥ: ಈ ಪ್ರಪಂಚದಲ್ಲಿ ಕೇವಲ ಹೆಣ್ಣು, ಕೇವಲ ಗಂಡು ಎಂಬುದಿಲ್ಲ. ಎಲ್ಲರೂ ಅರ್ಧನಾರೀಶ್ವರನಂತೆ ಮಿಶ್ರಣದ ಗುಣ ಉಳ್ಳವರೇ. ಪುರುಷನ ಕೆಲವು ಗುಣ ಸ್ತ್ರೀಯರಲಿ, ಸ್ತ್ರೀಯ ಕೆಲಗುಣಗಳು ಪುರುಷನಲ್ಲಿ ಸೇರಿ ಮನಸ್ಸನ್ನು ತಿರುಚಿಬಿಡುತ್ತವೆ.

ವಿವರಣೆ: ಮನುಷ್ಯರಲ್ಲಿ ಗಂಡು ಅಥವಾ ಹೆಣ್ಣು ಎಂಬ ನಿಸರ್ಗಬದ್ಧವಾಗಿ ಅಂಗಾಂಗ ವಿನ್ಯಾಸದಲ್ಲಿ ಭಿನ್ನತೆಯ ದೇಹಧಾರಣೆಯಾಗುತ್ತದೆ. ದೇಹಶಕ್ತಿ, ಕಾರ್ಯಕ್ಷಮತೆ, ಒಲವುಗಳು ಇವನ್ನೆಲ್ಲ ಗಮನಿಸಿ ಕೆಲವು ಗಂಡಸರ ಗುಣಗಳು, ಕೆಲವು ಹೆಂಗಸರ ಗುಣಗಳು ಎಂದು ಗುರುತಿಸಲಾಗಿದೆ. ಅಶಕ್ತತೆಯನ್ನು ತೋರಿದ ಹುಡುಗನಿಗೆ, ಮೃದುಸ್ವಭಾವದವನಿಗೆ 'ಹೆಣ್ಣಾ' ಎಂತಲೋ, ಹೆಂಗರುಳಿನವ ಎಂತಲೋ ಛೇಡಿಸಿ, ಹೆಚ್ಚು ಧೈರ್ಯವಂತೆ, ಒರಟು ಸ್ವಭಾವದವಳನ್ನು 'ಗಂಡುಬೀರಿ' ಎಂತಲೋ ಕರೆಯುವುದು ಅಭ್ಯಾಸವಾಗಿದೆ. ಪುರುಷರನ್ನು ಹೊಗಳಿ ಸಿಂಹಕ್ಕೆ, ಸ್ತ್ರೀಯರನ್ನು ಹಂಸೆಗೆ, ನವಿಲಿಗೆ ಹೋಲಿಸುವುದುಂಟು. ಅಂದರೆ ಪುರುಷರಿಗೇ ವಿಶಿಷ್ಟವಾದ ಮತ್ತು ಮಹಿಳೆಯರಿಗೇ ವಿಶೇಷವಾದ ಗುಣಗಳನ್ನು ಆರೋಪಿಸಿಕೊಂಡು ಬಂದಿದ್ದೇವೆ.

ಆದರೆ ಸೂಕ್ಷ್ಮವಾಗಿ ಗಮನಿಸಿದರೆ ಪುರುಷರು ಮತ್ತು ಸ್ತ್ರೀಯರಲ್ಲಿ ಸಮಾನವಾದ ಅನೇಕ ಗುಣಗಳಿವೆ. ಅಷ್ಟೇ ಅಲ್ಲ, ಹೆಣ್ಣುಗುಣಗಳು ಗಂಡಸಿನಲ್ಲಿ ಮತ್ತು ಗಂಡು ಗುಣಗಳು ಸ್ತ್ರೀಯರಲ್ಲಿ ಕಾಣುತ್ತವೆ. ಧೈರ್ಯ ಪುರುಷಗುಣ ಎನ್ನುವುದಾದರೆ, ಝಾನ್ಸಿ ಲಕ್ಷ್ಮೀದೇವಿ, ಕಿತ್ತೂರು ಚೆನ್ನಮ್ಮ, ಕಲ್ಪನಾ ಚಾವ್ಲಾ, ಇವರೆಲ್ಲ ತೋರಿದ ಧೈರ್ಯ ಯಾವ ಪುರುಷನಿಗೆ ಕಡಿಮೆ?

ತಾಯಿಯನ್ನು ಕಳೆದುಕೊಂಡ ಮಕ್ಕಳಿಗೆ ತಾವೇ ತಾಯಿಯಾಗಿ ಮಮತೆಯಿಂದ ಕಾಪಾಡಿದ ಅದೆಷ್ಟು ಪುರುಷರನ್ನು ಪ್ರಪಂಚ ಕಂಡಿಲ್ಲ? ಪರಿಸ್ಥಿತಿ ತಾಯಿಯನ್ನು ತಂದೆಯಂತಾಡಿಸುತ್ತದೆ, ತಂದೆಯನ್ನು ತಾಯಿಯಂತೆ ನಡೆಸುತ್ತದೆ. ಅಧ್ಯಾತ್ಮ ಚಿಂತನೆಯಲ್ಲಂತೂ ಹೆಣ್ಣು, ಗಂಡುಗಳಲ್ಲಿ ವ್ಯತ್ಯಾಸವೇ ಇಲ್ಲ. ಜೇಡರ ದಾಸಿಮಯ್ಯನ ಪ್ರಸಿದ್ಧ ವಚನ ಅದನ್ನೇ ಸಾರುತ್ತದೆ.

ಮೊಲೆ ಮುಡಿ ಬಂದರೆ ಹೆಣ್ಣೆಂಬರು
ಗಡ್ಡ, ಮೀಸೆ ಬಂದರೆ ಗಂಡೆಂಬರು.
ನಡುವೆ ಸುಳಿವ ಆತ್ಮನು ಗಂಡೂ ಅಲ್ಲ, ಹೆಣ್ಣೂ
ಅಲ್ಲ. ಕಾಣಾ ರಾಮನಾಥಾ,

ಬಹಿರಂಗ ನೋಟದಲ್ಲಿ ಬೇರೆ ಎನ್ನಿಸಿದರೂ ಅಂತರಂಗದಲ್ಲಿ ಅವು ಎರಡೂ ಒಂದೇ.

ಈ ಮಾತನ್ನು ಕಗ್ಗ ವಿವರಿಸುತ್ತ, ಮನುಷ್ಯರೆಲ್ಲರೂ ಅರ್ಧನಾರೀಶ್ವರರಂತೆ ಎನ್ನುತ್ತದೆ. ಇದರ ಒಳಾರ್ಥವೆಂದರೆ ಪುರುಷ ಮತ್ತು ಸ್ತ್ರೀ ಅಂಶಗಳು ನಮ್ಮೊಳಗೆ ಸಮಾನವಾಗಿ ವಿಂಗಡಣೆಯಾಗಿವೆ. ಪುರುಷರಲ್ಲಿ ಸ್ತ್ರೀಗೆ ಪ್ರಧಾನವಾದ ಗುಣಗಳು ಅಂತೆಯೇ ಸ್ತ್ರೀಯರಲ್ಲಿ ಪುರುಷ ಪ್ರಧಾನವಾದ ಗುಣಗಳು ಬೆರೆತು ಎರಡೂ ಬೇರೆಲ್ಲವೆನ್ನುವಂತೆ ಮಿಳಿತವಾಗಿವೆ.

ದಿನ ಭವಿಷ್ಯ

ಮಂಗಳವಾರ 4 ಮೇ 2021

ಶ್ರೀ ಪ್ಲವ ನಾಮ ಸಂವತ್ಸರ ಉತ್ತರಾಯಣ ವಸಂತ ಋತು ಚೈತ್ರ ಮಾಸ ಕೃಷ್ಣ ಪಕ್ಷ ಮಳೆ ನಕ್ಷತ್ರ ಭರಣಿ ಅಷ್ಟಮಿ ಗಂ. 28-52 (ಸಾ. 5-38) ಮಂಗಳವಾರ ನಿತ್ಯ ನಕ್ಷತ್ರ ಶ್ರವಣ ಗಂ. 16-56 (ಹ. 12-52) ಶುಕ್ಲ ನಾಮ ಯೋಗ ಗಂ 45-44 ಬಾಲವ ಕರಣ ಗಂ. 0-14 ಉಪರಿ ಕೌಲವ ಕರಣ ಗಂ. 28-38 ವಿಷ ಗಂ. 26-55 ಅಮೃತ ಗಂ. 50-54 : ರಾಹುಕಾಲ: ಮ. ಗಂ. 3-00 ರಿಂದ 4-30 ಗುಳಿಕ ಕಾಲ ಮ. ಗಂ 12-00 ರಿಂದ 1-30 ಯಮಗಂಡ ಕಾಲ ಬೆ. ಗಂ 9-00 ರಿಂದ 10-30 ಸೂರ್ಯೋದಯ: 6-02 ಸೂರ್ಯಾಸ್ತ: 6-31 ಅದೃಷ್ಟ ಸಂಖ್ಯೆ 3, 7

ಮೇಷ: ವೈಯಕ್ತಿಕ ತೊಂದರೆಯಿಂದ ಮುಕ್ತರಾಗುವಿರಿ. ಆರ್ಥಿಕ ಸಮಸ್ಯೆಗಳು ಪರಿಹಾರವಾಗಿ ನೆಮ್ಮದಿ. ಚಿನ್ನಾಭರಣ ಖರೀದಿ ಸಾಧ್ಯತೆ. ಉದ್ಯೋಗದಲ್ಲಿ ಪ್ರಗತಿ. ಪತ್ನಿಯ ಆರೋಗ್ಯದಲ್ಲಿ ವ್ಯತ್ಯಯ. ಬಂಧುಗಳ ಆಗಮನ.

ವೃಷಭ: ಆರ್ಥಿಕ ಸಂಪನ್ಮೂಲಗಳ ಅಭಿವೃದ್ಧಿಯಿಂದಾಗಿ ಸಂತೃಪ್ತಿ. ನೀರಿನಿಂದ ಬರುವ ಸಮಸ್ಯೆಗಳನ್ನು ಎದುರಿಸಬೇಕಾದೀತು. ಸಂಗಾತಿಯ ಆರೋಗ್ಯದಲ್ಲಿ ವ್ಯತ್ಯಯ ಸಾಧ್ಯತೆ.

ಮಿಥುನ: ಅನಾವಶ್ಯಕ ಮಾತುಗಳಿಂದಾಗಿ ನಿಷ್ಠೂರಕ್ಕೊಳಗಾಗುವ ಸಾಧ್ಯತೆ. ಉದ್ಯೋಗಾಕಾಂಕ್ಷಿಗಳಿಗೆ ಉತ್ತಮ ಅವಕಾಶ. ಉದ್ಯೋಗದಲ್ಲಿರುವವರಿಗೆ ಪದೋನ್ನತಿ. ದೇವತಾ ದರ್ಶನದಿಂದ ನೆಮ್ಮದಿ.

ಕರ್ಕಾಟಕ: ಅನಾವಶ್ಯಕ ಪ್ರಯಾಣದಿಂದಾಗಿ ಧನ ನಷ್ಟ. ಮನರಂಜನಾ ಕಾರ್ಯಕ್ರಮದಲ್ಲಿ ಭಾಗಿಯಾಗುವ ಸಾಧ್ಯತೆ. ಪ್ರಿಯ ವ್ಯಕ್ತಿಗಳ ಆಗಮನ. ಮಕ್ಕಳ ಶ್ರೇಯೋಭಿವೃದ್ಧಿಯಿಂದಾಗಿ ಮಾನಸಿಕ ತೃಪ್ತಿ. ಸಂತೋಷದ ವಾತಾವರಣ.

ಸಿಂಹ: ವಿದ್ಯಾರ್ಥಿಗಳಿಗೆ ಓದಿನಲ್ಲಿ ವಿಶೇಷ ಪ್ರಗತಿ. ಮಾತಿನಿಂದ ಗೌರವ ಪ್ರಾಪ್ತವಾಗುವುದು. ಸರ್ಕಾರದಿಂದಾಗುವ ಕೆಲಸ ಕಾರ್ಯಗಳು ಸುಗಮವಾಗುವವು. ಉದ್ಯೋಗ ನಿಮಿತ್ತ ದೂರ ಪ್ರಯಾಣ ಯೋಗ. ಆರೋಗ್ಯ ಲಾಭ.

ಕನ್ಯಾ: ಪರಸ್ಪರ ಭಿನ್ನಾಭಿಪ್ರಾಯಗಳು ಪರಿಹಾರವಾಗಿ ಸುಖ ದಾಂಪತ್ಯ ಜೀವನಕ್ಕೆ ನಾಂದಿ. ಶುಭ ಸಮಾರಂಭಗಳಲ್ಲಿ ಭಾಗಿಯಾಗುವ ಸಾಧ್ಯತೆ. ಕೆಲಸ ಕಾರ್ಯಗಳಲ್ಲಿ ಆತುರತೆ ಬೇಡ. ವ್ಯವಹಾರದಲ್ಲಿ ಆರ್ಥಿಕ ನಷ್ಟ ಸಾಧ್ಯತೆ.

ತುಲಾ: ಇಂದಿನ ಮಟ್ಟಿಗೆ ದೂರದ ಪ್ರಯಾಣಗಳನ್ನು ಮುಂದೂಡುವುದು ಸೂಕ್ತ. ಸಂಗಾತಿಯ ಸಹಕಾರದಿಂದಾಗಿ ಸಾಂಸಾರಿಕ ನೆಮ್ಮದಿ. ವಿವಾಹಾಕಾಂಕ್ಷಿಗಳಿಗೆ ವಿವಾಹ ಸಂಬಂಧಗಳು ಕೂಡಿಬರಲಿವೆ. ಆಪ್ತರ ಆಗಮನ.

ವೃಶ್ಚಿಕ: ವೈಯಕ್ತಿಕ ಜೀವನದಲ್ಲಿ ಅಭಿವೃದ್ಧಿ. ಸಾಮಾಜಿಕ ಚಿಂತನೆಗಳಿಂದ ಗೌರವಾದರಗಳನ್ನು ಹೊಂದುವಿರಿ. ಕೃಷಿ ಕ್ಷೇತ್ರದಲ್ಲಿ ಧನ ಧಾನ್ಯಾಭಿವೃದ್ಧಿ. ವೃತ್ತಿಯಲ್ಲಿನ ಸಮಸ್ಯೆಗಳಿಗೆ ಪರಿಹಾರ. ಸಂಗಾತಿಯಿಂದ ಸಂತಸ.

ಧನು: ಸಾಮಾಜಿಕ ಕಾರ್ಯಕರ್ತರಿಗೆ ಇರಿಸುಮುರಿಸು. ಮನೆಯಲ್ಲಿ ವಸ್ತ್ರಾಭರಣ ಖರೀದಿ ಸಾಧ್ಯತೆ. ಶತ್ರುಬಾಧೆ ಉಲ್ಬಣಗೊಳ್ಳುವ ಸಾಧ್ಯತೆ. ವಿದ್ಯಾಭ್ಯಾಸಕ್ಕಾಗಿ ದೂರಪ್ರಯಾಣ ಸಾಧ್ಯತೆ.

ಮಕರ: ಹೊಸ ಸಂಬಂಧಿಗಳಿಂದ ಹೊಸ ಯೋಜನೆಗಳಿಗೆ ಉತ್ಸಾಹ ಮೂಡುವುದು. ಶುಭಕಾರ್ಯಗಳ ಸಂಕಲ್ಪ ಈಡೇರಿ ಸಂತಸ. ತೃಪ್ತಿದಾಯಕ ಕೌಟುಂಬಿಕ ಜೀವನ. ಅವಸರದ ನಿರ್ಧಾರ ಸೂಕ್ತವಲ್ಲ.

ಕುಂಭ: ಅನಾವಶ್ಯಕ ವ್ಯವಹಾರಗಳಲ್ಲಿ ತಲೆ ಹಾಕದಿರುವುದೇ ಉತ್ತಮ. ಸರ್ಕಾರಿ ನೌಕರಿಯಲ್ಲಿರುವವರಿಗೆ ಬಡ್ತಿ. ಹೊಸ ಯೋಜನೆಯನ್ನು ನಿರೂಪಿಸುವಲ್ಲಿ ಯಶಸ್ಸು. ಮಾತೃವರ್ಗದವರಿಂದ ಸಹಕಾರ.


ಮೀನ: ಆರ್ಥಿಕ ವಿಷಯಗಳಲ್ಲಿ ತುಂಬಾ ಎಚ್ಚರಿಕೆ ಅಗತ್ಯ. ಸರ್ಕಾರಿ ನೌಕರರಿಗೆ ಕಾರ್ಯಗಳಲ್ಲಿ ಪ್ರಗತಿ. ಕುಟುಂಬದಲ್ಲಿ ಸೌಹಾರ್ದತೆ ಮೂಡಿ ಸಂತಸ. ಸೋದರರಿಂದ ಸಹಕಾರ. ಮಕ್ಕಳ ಅಭಿವೃದ್ಧಿಯಿಂದಾಗಿ ಸಂತೃಪ್ತಿ.

ನಿಮ್ಮ ಜನ್ಮದಿನ 4-ಮೇ: ಈ ದಿನ ಅತ್ಯಂತ ಶುಭಕರ. ಹಿಂದಿನ ವ್ಯವಹಾರದಲ್ಲಿ ಪ್ರಗತಿಯ ಹೊಸ ಆಶಾಕಿರಣ ಮೂಡಿಬರಲಿದೆ. ಉದ್ಯೋಗಸ್ಥರಿಗೆ ಬಡ್ತಿ ಸಾಧ್ಯತೆ. ಆರೋಗ್ಯ ಭಾಗ್ಯ ನಿಮ್ಮದಾಗಲಿದೆ. ಲೇವಾದೇವಿ ವ್ಯವಹಾರದಲ್ಲಿ ಉತ್ತಮ ಲಾಭ. ನೌಕರಿ ಅಥವಾ ಉದ್ಯೋಗ ನಿಮಗೆ ಅನುಕೂಲಕರವಾಗಿರುವುದು.

ಪದಬಂಧ 4586 – ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಕನ್ನಡಿಗರ ಹೆಮ್ಮೆಯ ನಾಡು (4)
3.ಸಂಪಾದಕನನ್ನು ಬರ ಮಾಡಿಕೊಂಡಿರುವ ಸಜ್ಜನ! (3)
4.ಜೊತೆಯಲ್ಲಿ ವಾಸಿಸುವಿಕೆ (4)
6.ಆದಾಯ ಮತ್ತು ಖರ್ಚು (4)
7.ಮುಸಲ್ಮಾನರ ಪ್ರಾರ್ಥನಾ ಮಂದಿರ (3)
8.ಎಲ್ಲೆಯೊಳಗೆ ತೋರಿದ ಅವಸರ (4)
11.ಹಜಾರ ಇಲ್ಲಿದೆ (4)
13.ಗರಿಯನ್ನು ಹೆಣೆದು ಮಾಡಿದ ತಟ್ಟಿ (3)
14.ಪರದಲ್ಲಿ ಹೋಗಲಾಡಿಸುವಿಕೆ! (4)

ಮೇಲಿಂದ ಕೆಳಕ್ಕೆ
1.ಇದು ಕನ್ನಡಿಗನ ಚಾಳೀಸು (4)
2.ಕನಸಲ್ಲಿ ಕಾಣಿಸಿದ ಕೊಳೆ (2)
3.ಕಬ್ಬಿಣದ ಭಾರೀ ಪೆಟ್ಟಿಗೆ (3)
5.ಮಯನ ಹತ್ತಿರ ಕಳೆದ ಕಾಲ (3)
6.ಅಂತ್ಯದ ವಿರುದ್ಧ ಪದ (2)
7.ಮಡಿವಂತ ಮಾಡಿರುವ ಪಾತಿ (2)
8.ಸುಲಭವಲ್ಲದುದು ಇದು (3)
9.ಅನ್ಯಮಾರ್ಗವು ಗರದೊಳಗಿದೆಯಲ್ಲಾ? (4)
10.ಹರನಿಗೆ ಒಪ್ಪಿಸಿದ ಮುಡಿಪು (3)
12.ನೆನಪಲ್ಲೇ ಇರುವ ಕಾರಣ (2)



4585ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ರುದ್ರಭೂಮಿ3.ಪನ್ನೀರು 5.ಉಯಬ7.ನಾಸಿಕ 8.ವಶೀಕರಣ11.ಹೂಬಾಣ 12.ಚರಿಗೆ15.ಜನನಿ16.ಪರಾಜಯ

ಮೇಲಿಂದ ಕೆಳಕ್ಕೆ: 1.ರುಮಾಲು 2.ಮಿಥ್ಯ3.ಪದಕ4.ರುಜುವಾತು 6.ಬಸವ7.ನಾಮಕರಣ9.ಣರಚ 10.ಮಲಯಜ11.ಹೂದಾನಿ 13.ಗೆಳೆಯ14.ಶಾಪ

ಸುಡೊಕು 4972

2		9			7	1		4
				3				
5		7	4		6	2		3
							3	1
	5	1		8			2	
3								8
		2		1		8		5
9			7		8			
	8			2		4		

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

4971 ಸುಡೊಕು

2	1	6	3	7	4	8	5	9
9	4	7	5	8	6	3	1	2
3	8	5	9	2	1	4	6	7
1	2	3	8	6	5	9	7	4
5	9	8	2	4	7	1	3	6
6	7	4	1	9	3	5	2	8
7	3	9	6	1	8	2	4	5
4	5	2	7	3	9	6	8	1
8	6	1	4	5	2	7	9	3

ಅಸ್ಸಾಂ ಸಿ.ಎಂ. ಸ್ಥಾನ: ಸೋನೊವಾಲ್–ಶರ್ಮಾ ಕಣ್ಣು

ಗುವಾಹಟಿ: ಅಸ್ಸಾಂ ಮುಖ್ಯಮಂತ್ರಿ ಸರ್ವಾನಂದ ಸೋನೊವಾಲ್ ಮತ್ತು ಪ್ರಭಾವಿ ಮುಖಂಡ ಹಿಮಂತ ಬಿಶ್ವ ಶರ್ಮಾ ಅವರನ್ನು ವಿಧಾನಸಭೆಗೆ ಆಯ್ಕೆಯಾಗಿರುವ ಹಲವು ಅಭ್ಯರ್ಥಿಗಳು ಪ್ರತ್ಯೇಕವಾಗಿ ಸೋಮವಾರ ಭೇಟಿಯಾಗಿದ್ದಾರೆ. ಈ ಇಬ್ಬರಲ್ಲಿ ಯಾರು ಮುಖ್ಯಮಂತ್ರಿ ಆಗಲಿದ್ದಾರೆ ಎಂಬ ಚರ್ಚೆ ಮುಂದುವರಿದಿದೆ.

ಶರ್ಮಾ ಅವರಿಗೆ ನಿಷ್ಠರಾಗಿರುವವರು ಅವರನ್ನು ಬೆಳಿಗ್ಗೆ ಭೇಟಿಯಾದರು. ತಮ್ಮ ನಿಷ್ಠರನ್ನು ಸೋನೊವಾಲ್ ಅವರು ಸಂಜೆ ತಮ್ಮ ನಿವಾಸಕ್ಕೆ ಕರೆಸಿಕೊಂಡರು.

'ನಾವು ಹೈಕಮಾಂಡ್ ನಿರ್ಧಾರವನ್ನು ಎದುರು ನೋಡುತ್ತಿದ್ದೇವೆ. ಸೋನೊವಾಲ್ ಅವರು ರಾಜ್ಯಕ್ಕಾಗಿ ಅವಿಶ್ರಾಂತವಾಗಿ ಕೆಲಸ ಮಾಡುತ್ತಿದ್ದಾರೆ. ಶರ್ಮಾ ಅವರೂ ಮುಖ್ಯಮಂತ್ರಿ ಸ್ಥಾನದ ಅರ್ಹತೆ ಇರುವ ನಾಯಕ' ಎಂದು ದಿಫು ಕ್ಷೇತ್ರದಿಂದ ಗೆದ್ದಿರುವ ನುಮಲ್ ಮೊಮಿನ್ ಹೇಳಿದ್ದಾರೆ. ತಮ್ಮ ಬೆಂಬಲ ಶರ್ಮಾ ಅವರಿಗೆ ಎಂದು ಗೆದ್ದಿರುವ ಐವರು ಅಭ್ಯರ್ಥಿಗಳು ಹೇಳಿದ್ದಾರೆ. ಬಿಜೆಪಿ ರಾಜ್ಯ ಘಟಕದ ಉಸ್ತುವಾರಿ ಹೊಂದಿರುವ ವೈಜಯಂತ್ ಪಾಂಡಾ ಅವರೂ ಶರ್ಮಾ ಅವರನ್ನ ಭೇಟಿ ಆಗಿದ್ದಾರೆ.

ನರೇಂದ್ರ ಮೋದಿ ಅಧ್ಯಕ್ಷತೆಯ ಸಂಸದೀಯ ಮಂಡಳಿಯ ಸಭೆಯ ಬಳಿಕ ಮುಖ್ಯಮಂತ್ರಿ ಯಾರು ಎಂಬುದು ನಿರ್ಧಾರ ಆಗಲಿದೆ ಎಂದು ರಾಜ್ಯ ಘಟಕದ ಅಧ್ಯಕ್ಷ ರಂಜೀತ್ ಕುಮಾರ್ ದಾಸ್ ಹೇಳಿದ್ದಾರೆ.

ಮುಖ್ಯಮಂತ್ರಿ ಸ್ಥಾನದ ಬಗ್ಗೆ ಸೋನೊವಾಲ್ ಅವರು ಯಾವುದೇ ಹೇಳಿಕೆ ನೀಡಿಲ್ಲ. ಆದರೆ, 2016ರಲ್ಲಿ ಅಧಿಕಾರಕ್ಕೆ ಬಂದ ತಮ್ಮ ನೇತೃತ್ವದ ಸರ್ಕಾರದ ಸಾಧನೆಯಿಂದಾಗಿ ಜನರು ಮತ್ತೆ ಮತ ಹಾಕಿ ಆಯ್ಕೆ ಮಾಡಿದ್ದಾರೆ ಎಂದು ಹೇಳಿದ್ದಾರೆ.

ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಆರೋಪ: ಚುನಾವಣಾ ಆಯೋಗ, ಬಿಜೆಪಿ ವಿರುದ್ಧ ಆಕ್ರೋಶ


'ಚುನಾವಣಾಧಿಕಾರಿಗೆ ಜೀವ ಭಯ'

ಕೋಲ್ಕತ್ತ (ಪಿಟಿಐ): 'ಮತಗಳ ಮರು ಎಣಿಕೆಗೆ ಆದೇಶ ನೀಡಿದರೆ ತಮ್ಮ ಜೀವಕ್ಕೆ ಅಪಾಯ ಸಂಭವಿಸಬಹುದು ಎಂಬ ಭಯ ನಂದಿಗ್ರಾಮ ವಿಧಾನಸಭಾ ಕ್ಷೇತ್ರದ ಚುನಾವಣಾಧಿಕಾರಿಗೆ ಇತ್ತು. ಆ ಕಾರಣಕ್ಕೆ ಅವರು ಮರು ಎಣಿಕೆಗೆ ಆದೇಶ ನೀಡಲಿಲ್ಲ' ಎಂದು ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಸೋಮವಾರ ಆರೋಪಿಸಿದ್ದಾರೆ.

ನಂದಿಗ್ರಾಮ ಕ್ಷೇತ್ರದ ಫಲಿತಾಂಶವನ್ನು ಪ್ರಶ್ನಿಸಿ ನ್ಯಾಯಾಲಯದ ಮೊರೆ ಹೋಗುವುದಾಗಿ ಮಾಧ್ಯಮ ಪ್ರತಿನಿಧಿಗಳ ಜತೆ ಮಾತನಾಡಿದ ಅವರು ತಿಳಿಸಿದ್ದಾರೆ.

ಈ ಕ್ಷೇತ್ರದಲ್ಲಿ ಮಮತಾ ಅವರು ಬಿಜೆಪಿಯ ಸುವೇಂದು ಅಧಿಕಾರಿ ವಿರುದ್ಧ ಸ್ಪರ್ಧಿಸಿ ಸೋತಿದ್ದಾರೆ.

ನಂದಿಗ್ರಾಮ ಚುನಾವಣಾಧಿಕಾರಿಯು ಮುಖ್ಯ ಚುನಾವಣಾಧಿಕಾರಿಗೆ ಕಳುಹಿಸಿದ್ದು ಎನ್ನಲಾದ ಎಸ್‌ಎಂಎಸ್ ಒಂದನ್ನು ಮಮತಾ ಅವರು ಮಾಧ್ಯಮ ಪ್ರತಿನಿಧಿಗಳ ಮುಂದೆ ಪ್ರದರ್ಶಿಸಿದ್ದಾರೆ.



ಮಮತಾ ಬ್ಯಾನರ್ಜಿ

ಅದರಲ್ಲಿ ಚುನಾವಣಾಧಿಕಾರಿಯು 'ಮರು ಎಣಿಕೆಗೆ ಆದೇಶ ನೀಡಿದರೆ ನಾನು ಗಂಭೀರ ಪರಿಣಾಮ ಎದುರಿಸಬೇಕಾಗಬಹುದು, ಆತ್ಮಹತ್ಯೆ ಮಾಡಿಕೊಳ್ಳುವ ಪ್ರಸಂಗವೂ ಬರಬಹುದು' ಎಂದು ಉಲ್ಲೇಖಿಸಿದ್ದಾರೆ.

'ನಂದಿಗ್ರಾಮದ ಫಲಿತಾಂಶವನ್ನು ಅಧಿಕೃತವಾಗಿ ಒಮ್ಮೆ ಪ್ರಕಟಿಸಿದ ನಂತರ ಅದನ್ನು ಚುನಾವಣಾ ಆಯೋಗವು ಬದಲಾಯಿಸಲು ಹೇಗೆ ಸಾಧ್ಯ? ನಾಲ್ಕು ಗಂಟೆಗಳ ಕಾಲ ಸರ್ವರ್ ನಿಷ್ಕ್ರಿಯವಾಗಲು ಕಾರಣವೇನು? ಜನರ ತೀರ್ಪನ್ನು ಸ್ವೀಕರಿಸಲು ನಾವು ಸಿದ್ಧರಿದ್ದೇವೆ. ಆದರೆ ಒಂದು ಕ್ಷೇತ್ರದ ಫಲಿತಾಂಶದಲ್ಲಿ ಇಂಥ ವೈಪರೀತ್ಯ ಕಂಡುಬಂದರೆ, ಮೇಲ್ನೋಟಕ್ಕೆ ಗೋಚರಿಸುವುದಕ್ಕಿಂತ ಭಿನ್ನವಾದದ್ದು ಏನೋ ನಡೆದಿರುವ ಸಾಧ್ಯತೆ ಇರುತ್ತದೆ. ಸತ್ಯಾಂಶವೇನು ಎಂಬುದನ್ನು ನಾವು ತಿಳಿಯಬೇಕಾಗಿದೆ' ಎಂದು ಮಮತಾ ಹೇಳಿದ್ದಾರೆ.

ನಂದಿಗ್ರಾಮದ ಕೆಲವು ಕಡೆಗೆ ಹಿಂಸಾಚಾರದ ಘಟನೆಗಳು ವರದಿಯಾಗಿದ್ದು, ಪ್ರಚೋದನೆಗೆ ಒಳಗಾಗದೆ, ಶಾಂತಿ ಕಾಪಾಡುವಂತೆ ಅವರು ಟಿಎಂಸಿ ಕಾರ್ಯಕರ್ತರಲ್ಲಿ ಮನವಿ ಮಾಡಿದ್ದಾರೆ.

'ಚುನಾವಣೆಯ ಸಂದರ್ಭದಲ್ಲಿ ಕೇಂದ್ರದ ಮೀಸಲು ಪಡೆಗಳು ಟಿಎಂಸಿ ಕಾರ್ಯಕರ್ತರ ಮೇಲೆ ಹಲ್ಲೆ ನಡೆಸಿದ್ದವು. ಫಲಿತಾಂಶ ಹೊರಬಿದ್ದ ನಂತರವೂ ಬಿಜೆಪಿ ಕಾರ್ಯಕರ್ತರು ಹಲ್ಲೆ ನಡೆಸುತ್ತಿದ್ದಾರೆ. ಪ್ರಚೋದನೆಗೆ ಒಳಗಾಗದೆ, ಇಂಥ ಸಂದರ್ಭಗಳಲ್ಲಿ ಪೊಲೀಸರ ನೆರವು ಪಡೆಯುವಂತೆ ನಾವು ಕಾರ್ಯಕರ್ತರಲ್ಲಿ ಮನವಿ ಮಾಡುತ್ತಿದ್ದೇವೆ' ಎಂದು ಅವರು ಹೇಳಿದ್ದಾರೆ.

ಚುನಾವಣಾ ಆಯೋಗವನ್ನೂ ಟೀಕೆಗೆ ಒಳಪಡಿಸಿದ ಮಮತಾ, 'ಆಯೋಗವು ಬಿಜೆಪಿಗೆ ನೆರವು ನೀಡದಿರುತ್ತಿದ್ದರೆ ಆ ಪಕ್ಷಕ್ಕೆ 50 ಸ್ಥಾನಗಳೂ ಲಭ್ಯವಾಗುತ್ತಿರಲಿಲ್ಲ' ಎಂದಿದ್ದಾರೆ.

ನಾಳೆ ಪ್ರಮಾಣವಚನ

ತೃಣಮೂಲ ಕಾಂಗ್ರೆಸ್‌ನ ಮುಖ್ಯಸ್ಥೆ ಮಮತಾ ಬ್ಯಾನರ್ಜಿ ಅವರು ಮೇ 5ರಂದು ಪಶ್ಚಿಮ ಬಂಗಾಳದ ಮುಖ್ಯಮಂತ್ರಿಯಾಗಿ ಮೂರನೇ ಬಾರಿಗೆ ಪ್ರಮಾಣವಚನ ಸ್ವೀಕರಿಸಲಿದ್ದಾರೆ.

'ಸೋಮವಾರ ಇಲ್ಲಿ ನಡೆದ ನೂತನ ಶಾಸಕರ ಸಭೆಯಲ್ಲಿ ಮಮತಾ ಅವರನ್ನು ಶಾಸಕಾಂಗ ಪಕ್ಷದ ನಾಯಕಿಯಾಗಿ ಅವಿರೋಧವಾಗಿ ಆಯ್ಕೆ ಮಾಡಲಾಗಿದೆ' ಎಂದು ಮುಖ್ಯಕಾರ್ಯದರ್ಶಿ ಪಾರ್ಥ ಚಟರ್ಜಿ ತಿಳಿಸಿದ್ದಾರೆ.

'ಕಳೆದ ವಿಧಾನಸಭೆಯಲ್ಲಿ ಸ್ಪೀಕರ್ ಆಗಿದ್ದ ಬಿಮನ್ ಬ್ಯಾನರ್ಜಿ ಅವರನ್ನು ಹೊಸ ವಿಧಾನಸಭೆಯ ಹಂಗಾಮಿ ಸ್ಪೀಕರ್ ಆಗಿ ಆಯ್ಕೆ ಮಾಡಲಾಗಿದೆ. ಮೇ 6ರಿಂದ ಹೊಸ ಶಾಸಕರ ಪ್ರಮಾಣವಚನ ಸ್ವೀಕಾರ ನಡೆಯಲಿದೆ' ಎಂದು ಚಟರ್ಜಿ ಮಾಧ್ಯಮ ಪ್ರತಿನಿಧಿಗಳಿಗೆ ತಿಳಿಸಿದರು.

ಮಮತಾ ಅವರು ನಂದಿಗ್ರಾಮದಲ್ಲಿ ಸೋತಿರುವ ಕಾರಣ, ಮುಖ್ಯಮಂತ್ರಿಯಾಗಿ ಪ್ರಮಾಣವಚನ ಸ್ವೀಕರಿಸಿ ಆರು ತಿಂಗಳೊಳಗೆ ವಿಧಾನಸಭೆಗೆ ಆಯ್ಕೆ ಆಗಬೇಕಾಗುತ್ತದೆ. ಪಶ್ಚಿಮ ಬಂಗಾಳದಲ್ಲಿ ವಿಧಾನ ಪರಿಷತ್ ಇಲ್ಲ.

ನಾಡಿಗೆ ಆಮ್ಲಜನಕ ನೀಡದ ಕೇಂದ್ರ

ಒಂದನೇ ಪುಟದಿಂದ

ಮೇ 5ರ ವೇಳೆಗೆ ರಾಜ್ಯಕ್ಕೆ ನಿತ್ಯ ಕನಿಷ್ಠ 1,162 ಟನ್ ಆಮ್ಲಜನಕ ಅಗತ್ಯವಿದೆ ಎಂದು ಸರ್ಕಾರ ಈ ಹಿಂದೆಯೇ ಕೇಂದ್ರಕ್ಕೆ ಬೇಡಿಕೆ ಸಲ್ಲಿಸಿತ್ತು. ಕರ್ನಾಟಕದ ಆಮ್ಲಜನಕ ಪಾಲು ನಿತ್ಯ 865 ಮೆಟ್ರಿಕ್ ಟನ್‌ಗೆ ಏರಿಸಲಾಗಿದೆ ಎಂದು ಕೇಂದ್ರ ರಾಸಾಯನಿಕ ಸಚಿವ ಸದಾನಂದ ಗೌಡ ಮೇ 1ರಂದು ಹೇಳಿದ್ದರು. ಆದರೆ, ಆ ಪಾಲು ಕೂಡ ಸರಿಯಾಗಿ ಸಿಕ್ಕಿಲ್ಲ. ಕರ್ನಾಟಕದಲ್ಲಿಯೇ ಉತ್ಪಾದನೆ ಆಗುತ್ತಿರುವುದರಲ್ಲಿ 675 ಟನ್ ಪಡೆದುಕೊಳ್ಳಲು ಅವಕಾಶ ನೀಡಿದೆ. ಉಳಿದಂತೆ, ಒಡಿಶಾ ಮತ್ತು ಆಂಧ್ರಪ್ರದೇಶದಿಂದ 130 ಟನ್ ಹಂಚಿಕೆ ಮಾಡಿದೆ. ರಾಜ್ಯದಲ್ಲಿ ಉತ್ಪಾದನೆಯಾದ ಆಮ್ಲಜನಕದಲ್ಲಿ ತನ್ನ ಪಾಲಿಗೆ ಹಂಚಿಕೆ ಆಗಿರುವ ಪ್ರಮಾಣವನ್ನು ಸಂಪೂರ್ಣವಾಗಿ ರಾಜ್ಯದಲ್ಲಿ ಬಳಕೆ ಮಾಡಿಕೊಳ್ಳಲಾಗಿದೆ. ಆದರೆ, ಅದು ಸಾಕಾಗದೇ ಇರುವುದರಿಂದ ಮುಂದಿನ ದಿನಗಳಲ್ಲಿ ಪರಿಸ್ಥಿತಿ ಮತ್ತಷ್ಟು ಹದಗೆಡಲಿದೆ ಎಂಬ ಭೀತಿ ಎದುರಾಗಿದೆ.

'ಕೇಂದ್ರ ಹಂಚಿಕೆ ಮಾಡಿದ ಪ್ರಮಾಣದಲ್ಲಿ, ರಾಜ್ಯದಿಂದಲೇ ಸಿಕ್ಕಿದ 675 ಟನ್ ಜೊತೆಗೆ, ಬೇರೆ ಹೊಂದಾಣಿಕೆ ಮಾಡಿಕೊಂಡು 16 ಟನ್ ಆಮ್ಲಜನಕವನ್ನು ನಾವು ಹೆಚ್ಚುವರಿಯಾಗಿ ಪಡೆದು ಈಗಾಗಲೇ 691 ಟನ್ ಬಳಸಿಕೊಂಡಿದ್ದೇವೆ. ಕೇಂದ್ರ ಸರ್ಕಾರ ಒಡಿಶಾದಿಂದ ಮತ್ತು ವಿಶಾಖಪಟ್ಟಣದಿಂದ ಹಂಚಿಕೆ ಮಾಡಿರುವ ಆಮ್ಲಜನಕವನ್ನು ರಾಜ್ಯಕ್ಕೆ ತರಬೇಕಿದೆ' ಎಂದು ಮುಖ್ಯ ಕಾರ್ಯದರ್ಶಿ ಪಿ. ರವಿಕುಮಾರ್ 'ಪ್ರಜಾವಾಣಿ' ತಿಳಿಸಿದರು.

'ಸರ್ಕಾರ ಒಟ್ಟು 30 ಟನ್ ಸಾಗಣೆ ಸಾಮರ್ಥ್ಯ ಎರಡು ಟ್ಯಾಂಕರ್‌ಗಳನ್ನು ಸೋಮವಾರವೇ (ಮೇ 3) ಒಡಿಶಾಕ್ಕೆ ಕಳುಹಿಸಿದೆ. ಆ ಟ್ಯಾಂಕರ್‌ಗಳು ರಾಜ್ಯಕ್ಕೆ ಬರಲು 48 ಗಂಟೆ ಸಮಯ ಬೇಕಿದೆ. ಅಲ್ಲಿಂದ ರಾತ್ರಿಯೇ ಹೊರಟರೆ ಬುಧವಾರ ತಲುಪಬಹುದು' ಎಂದರು.

'ರಾಜ್ಯದಲ್ಲಿ ಆಮ್ಲಜನಕ ಸಾಗಣೆ ಟ್ಯಾಂಕರುಗಳಿಗೂ ಕೊರತೆ ಇದೆ. ಒಟ್ಟು 93 ಟ್ಯಾಂಕರ್‌ಗಳಷ್ಟೆ ಇದೆ. ಅವುಗಳು ಇಡೀ ದಿನ ರಾಜ್ಯದ ವಿವಿಧೆಡೆ ಓಡಾಡುತ್ತಿವೆ. ಸದ್ಯ ನಮ್ಮಲ್ಲಿ ಲಭ್ಯ ಇರುವ ಆಮ್ಲಜನಕವನ್ನು ಸಾಗಣೆಗೂ ಸಮಸ್ಯೆ ಆಗದಂತೆ ಎಚ್ಚರಿಕೆ ವಹಿಸಬೇಕಿದೆ' ಎನ್ನುತ್ತಾರೆ ರವಿಕುಮಾರ್.

ಆಮ್ಲಜನಕ ಸಾಮರ್ಥ್ಯ

1,162 ಟನ್: ಮೇ 5ರ ವೇಳೆಯ ಬೇಡಿಕೆ
1043 ಟನ್: ರಾಜ್ಯದ ಉತ್ಪಾದನಾ ಸಾಮರ್ಥ್ಯ
865 ಟನ್: ಕೇಂದ್ರ ಹಂಚಿಕೆ
675 ಟನ್: ರಾಜ್ಯದ ಬಳಕೆಗೆ

ಚಾಮರಾಜನಗರ: ಸಕಾಲಕ್ಕೆ ಸಿಗದ ಆಮ್ಲಜನಕ– 24 ಸಾವು

ಒಂದನೇ ಪುಟದಿಂದ

ಜಿಲ್ಲೆಯ ಕಾಂಗ್ರೆಸ್ ಶಾಸಕರಾದ ಆರ್.ನರೇಂದ್ರ ಹಾಗೂ ಸಿ.ಪುಟ್ಟರಂಗಶೆಟ್ಟಿ ಅವರು ಸರ್ಕಾರದ ವಿರುದ್ಧ ಹರಿಹಾಯ್ದಿದ್ದು, ಸರ್ಕಾರ ಹಾಗೂ ಜಿಲ್ಲಾಡಳಿತಗಳು ತಮ್ಮ ವೈಫಲ್ಯ ಮುಚ್ಚಿಡಲು ಯತ್ನಿಸುತ್ತಿವೆ ಎಂದು ಆರೋಪಿಸಿದ್ದಾರೆ.

ಆಗಿದ್ದೇನು?: ಜಿಲ್ಲೆಯ ಕೋವಿಡ್ ಆಸ್ಪತ್ರೆಗೆ ಇದುವರೆಗೂ ಮೈಸೂರಿನಿಂದ ಆಮ್ಲಜನಕ ಪೂರೈಕೆಯಾಗುತ್ತಿತ್ತು. ನಾಲ್ಕು ದಿನಗಳ ಹಿಂದೆಯಷ್ಟೇ ಜಿಲ್ಲಾಸ್ಪತ್ರೆ ಆವರಣದಲ್ಲಿ 6,000 ಲೀಟರ್ ಸಾಮರ್ಥ್ಯದ ಆಮ್ಲಜನಕ ಘಟಕ ಆರಂಭಗೊಂಡಿದೆ. ಬಳ್ಳಾರಿಯಿಂದಲೂ ಇಲ್ಲಿಗೆ ಆಮ್ಲಜನಕ ಪೂರೈಕೆಯಾಗುತ್ತಿದೆ. ರೋಗಿಗಳ ಸಂಖ್ಯೆ ಹೆಚ್ಚಿರುವುದರಿಂದ ಸದ್ಯಕ್ಕೆ ಘಟಕದ ಆಮ್ಲಜನಕ ಒಂದೂವರೆ ದಿನಕ್ಕೆ ಸಾಕಾಗುತ್ತಿದೆ. ಭಾನುವಾರ ಮಧ್ಯಾಹ್ನ ಘಟಕದಲ್ಲಿನ ಆಮ್ಲಜನಕ ಖಾಲಿಯಾಗಿತ್ತು. ಆ ಬಳಿಕ ಆಸ್ಪತ್ರೆಯಲ್ಲಿದ್ದ ಆಮ್ಲಜನಕ ಸಿಲಿಂಡರ್‌ಗಳಿಂದ ಆಮ್ಲಜನಕ ಪೂರೈಸಲಾಗಿತ್ತು. ರಾತ್ರಿ 9 ಗಂಟೆಗೆ ಮೈಸೂರಿನಿಂದ ಹೊಸ ಸಿಲಿಂಡರ್‌ಗಳು ಬರಬೇಕಿತ್ತು. ಆದರೆ, ಈ ಸಿಲಿಂಡರ್‌ಗಳು ಬಾರದೇ ಇರುವುದರಿಂದ ಆಮ್ಲಜನಕ ಪೂರೈಕೆ ಸ್ಥಗಿತಗೊಂಡಿದೆ.

ರಾತ್ರಿ 8.30ರವರೆಗೆ ಆಮ್ಲಜನಕ ಲಭ್ಯವಿತ್ತು. ಆಮೇಲೆ 12 ಗಂಟೆಯವರೆಗೆ ಇರುವ ಆಮ್ಲಜನಕವನ್ನೇ ವೈದ್ಯರು ಹೊಂದಿಸಿದ್ದರು. ಆದರೆ, ಆ ಬಳಿಕ ಅದು ಕೂಡ ಸಾಧ್ಯವಾಗದೇ ವೈದ್ಯರು ಕೈಚೆಲ್ಲಿದರು. ರಾತ್ರಿ 12 ಗಂಟೆಯ ಹೊತ್ತಿಗೆ ಮೈಸೂರು ಸಂಸದ ಪ್ರತಾಪ್ ಸಿಂಹ ಅವರು ಚಾಮರಾಜನಗರ ಜಿಲ್ಲಾಧಿಕಾರಿ ಹಾಗೂ ಮೈಸೂರಿನ ಹೆಚ್ಚುವರಿ ಜಿಲ್ಲಾಧಿಕಾರಿ ಅವರೊಂದಿಗೆ ಮಾತುಕತೆ ನಡೆಸಿ 50 ಸಿಲಿಂಡರ್‌ಗಳನ್ನು ಪೂರೈಸಲು ವ್ಯವಸ್ಥೆ ಮಾಡಿದ್ದರು. ಆದರೆ, ಈ ಸಿಲಿಂಡರ್‌ಗಳು ರಾತ್ರಿ 2.30ಕ್ಕೆ ಚಾಮರಾಜನಗರ ತಲುಪಿವೆ. 3 ಗಂಟೆಯ ನಂತರ ಮತ್ತೆ ಆಮ್ಲಜನಕ ಪೂರೈಕೆ ಸಹಜ ಸ್ಥಿತಿಗೆ ಬಂದಿದೆ.

'ಕೋವಿಡ್ ಪ್ರಕರಣಗಳು ಹೆಚ್ಚಿರುವುದರಿಂದ ಪ್ರತಿ ದಿನ 300 ಸಿಲಿಂಡರ್‌ಗಳ ಅಗತ್ಯವಿದೆ. ಇದುವರೆಗೂ ಆಮ್ಲಜನಕಕ್ಕೆ ಮೈಸೂರನ್ನೇ ಅವಲಂಬಿಸಿದ್ದೇವೆ. ಎಲ್ಲ ಸಾವುಗಳೂ ಆಮ್ಲಜನಕದ ಕೊರತೆಯಿಂದಾಗಿ ಆಗಿವೆ ಎಂದು ಹೇಳುವುದು ಸರಿಯಲ್ಲ. ಸಾವಿನ ಲೆಕ್ಕಪರಿಶೋಧನಾ ವರದಿ ಬಂದ ನಂತರ, ನಿಖರ ಕಾರಣ ತಿಳಿಯಲಿದೆ' ಎಂದು ಜಿಲ್ಲಾಧಿಕಾರಿ ಡಾ.ಎಂ.ಆರ್.ರವಿ ಅವರು ಹೇಳಿದರು.

> **'24 ಸಾವುಗಳೂ ಆಮ್ಲಜನಕದ ಕೊರತೆಯಿಂದ ಆಗಿರುವುದು ಎಂಬ ಭಾವನೆ ವ್ಯಕ್ತವಾಗುತ್ತಿದೆ. ಆದರೆ, ಎಲ್ಲವೂ ಆಮ್ಲಜನಕದ ಕೊರತೆಯಿಂದ ಆಗಿಲ್ಲ ಎಂದು ಸ್ಪಷ್ಟಪಡಿಸುವುದಕ್ಕೆ ಇಚ್ಛಿಸುತ್ತೇನೆ**
> **ಎಸ್.ಸುರೇಶ್ ಕುಮಾರ್,** ಜಿಲ್ಲಾ ಉಸ್ತುವಾರಿ ಸಚಿವ


ಮೂವರಷ್ಟೇ ಸಾವು; ಸಚಿವರ ಲೆಕ್ಕ!

ಒಂದನೇ ಪುಟದಿಂದ

'ಕೋವಿಡ್ ಆಸ್ಪತ್ರೆಯಲ್ಲಿ 123 ರೋಗಿಗಳು ದಾಖಲಾಗಿದ್ದರು. ಈ ಪೈಕಿ 14 ಜನ ವೆಂಟಿಲೇಟರ್, 36 ಮಂದಿ ಹೆಚ್ಚು ಆಮ್ಲಜನಕ ಅವಶ್ಯಕತೆ ಇರುವ ಹಾಸಿಗೆಗಳಲ್ಲಿದ್ದರು. 58 ಮಂದಿ ಐಸಿಯುನಲ್ಲಿ ಹಾಗೂ 29 ಮಂದಿ ಸಾಮಾನ್ಯ ಆಮ್ಲಜನಕದ ಹಾಸಿಗೆಗಳಲ್ಲಿ ಚಿಕಿತ್ಸೆ ಪಡೆಯುತ್ತಿದ್ದರು. ಜಿಲ್ಲಾಡಳಿತ, ವೈದ್ಯಕೀಯ ಕಾಲೇಜು ಹಾಗೂ ಆರೋಗ್ಯ ಇಲಾಖೆ ನೀಡಿರುವ ಮಾಹಿತಿ ಪ್ರಕಾರ, ಭಾನುವಾರ ಬೆಳಿಗ್ಗೆ 7ರಿಂದ ಮಧ್ಯರಾತ್ರಿ 12 ಗಂಟೆವರೆಗೆ 14 ಜನರು ಮೃತಪಟ್ಟಿದ್ದಾರೆ.
ಹಲವು ದಿನಗಳಿಂದ ಇವರು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದರು. ಇವರು, ರೋಗ ಉಲ್ಬಣಿಸಿ ಕೊನೆಯುಸಿರೆಳೆದಿದ್ದಾರೆ. ಮಧ್ಯರಾತ್ರಿ 12 ಗಂಟೆಯಿಂದ ಮುಂಜಾವು 3 ಗಂಟೆಯವರೆಗೆ ಮೂವರು ಅಸುನೀಗಿದ್ದಾರೆ. 3 ಗಂಟೆಯಿಂದ ಬೆಳಿಗ್ಗೆ 7 ಗಂಟೆಯವರೆಗೆ ಏಳು ಜನರು ಮೃತಪಟ್ಟಿದ್ದಾರೆ. ಜಿಲ್ಲಾಸ್ಪತ್ರೆಯಲ್ಲಿ 23 ಜನರು ಮೃತಪಟ್ಟಿದ್ದರೆ, ಒಬ್ಬರು ಕಾಮಗೆರೆಯಲ್ಲಿ ನಿಧನರಾಗಿದ್ದಾರೆ' ಎಂದು ಹೇಳಿದರು.

'ಎಲ್ಲ ಕಡೆಯೂ ಆಮ್ಲಜನಕದ ಬೇಡಿಕೆ ಹೆಚ್ಚಾಗಿದೆ. ಪೂರೈಕೆಗೆ ಸರ್ಕಾರ ಎಲ್ಲ ಕ್ರಮ ಕೈಗೊಳ್ಳುತ್ತಿದೆ. ಈ ಅನಿರೀಕ್ಷಿತ ಸಾಂಕ್ರಾಮಿಕ ರೋಗದ ವಿರುದ್ಧ ಸರ್ಕಾರ ಪರಿಣಾಮಕಾರಿಯಾಗಿ ಹೋರಾಡುವಾಗ ಇಂತಹ ಘಟನೆ ನಡೆದಿರುವುದು ಬೇಸರ ತಂದಿದೆ' ಎಂದು ಹೇಳಿದರು.

ಪಳನಿಸ್ವಾಮಿ ರಾಜೀನಾಮೆ



ಚೆನ್ನೈ (ಪಿಟಿಐ): ತಮಿಳುನಾಡು ಮುಖ್ಯಮಂತ್ರಿ ಕೆ. ಪಳನಿಸ್ವಾಮಿ ಅವರು ತಮ್ಮ ಮತ್ತು ಸಂಪುಟದ ಸದಸ್ಯರ ರಾಜೀನಾಮೆಯನ್ನು ರಾಜ್ಯಪಾಲ ಬನ್ವರಿಲಾಲ್ ಪುರೋಹಿತ್ ಅವರಿಗೆ ಸಲ್ಲಿಸಿದ್ದಾರೆ. ರಾಜ್ಯಪಾಲರು ಅದನ್ನು ಅಂಗೀಕರಿಸಿದ್ದಾರೆ. ವಿಧಾನಸಭೆಯನ್ನು ಅವರು ವಿಸರ್ಜಿಸಿದ್ದಾರೆ. ಪರ್ಯಾಯ ವ್ಯವಸ್ಥೆ ಆಗುವ ತನಕ ಉಸ್ತುವಾರಿ ಮುಖ್ಯಮಂತ್ರಿಯಾಗಿ ಇರಲು ಪಳನಿಸ್ವಾಮಿ ಅವರಿಗೆ ರಾಜ್ಯಪಾಲರು ಸೂಚಿಸಿದ್ದಾರೆ. ಇತ್ತೀಚೆಗೆ ನಡೆದ ಚುನಾವಣೆಯಲ್ಲಿ, 234 ಸದಸ್ಯ ಬಲದ ವಿಧಾನಸಭೆಯಲ್ಲಿ ಡಿಎಂಕೆ 133 ಸ್ಥಾನಗಳನ್ನು ಗೆದ್ದಿದೆ. 66 ಕ್ಷೇತ್ರಗಳಲ್ಲಿ ಮಾತ್ರ ಗೆದ್ದ ಎಐಎಡಿಎಂಕೆ ಸೋಲೊಪ್ಪಿಕೊಂಡಿದೆ.

ಹಕ್ಕು ಮಂಡಿಸಿದ ರಂಗಸ್ವಾಮಿ

ಚೆನ್ನೈ: ಆಲ್ ಇಂಡಿಯಾ ಎನ್.ಆರ್. ಕಾಂಗ್ರೆಸ್ (ಎಐಎನ್‌ಆರ್‌ಸಿ) ನಾಯಕ ಎನ್. ರಂಗಸ್ವಾಮಿ ಅವರು ಕೇಂದ್ರಾಡಳಿತ ಪ್ರದೇಶ ಪುದುಚೇರಿಯಲ್ಲಿ ಸರ್ಕಾರ ರಚನೆಗೆ ಹಕ್ಕು ಮಂಡಿಸಿದ್ದಾರೆ. ಬಿಜೆಪಿ ಬೆಂಬಲದಲ್ಲಿ ಅವರು ಸರ್ಕಾರ ರಚಿಸಲಿದ್ದಾರೆ. ಇತ್ತೀಚೆಗೆ ನಡೆದ ಚುನಾವಣೆಯಲ್ಲಿ 30 ಕ್ಷೇತ್ರಗಳ ಪೈಕಿ ಎಐಎನ್‌ಆರ್‌ಸಿ 10 ಮತ್ತು ಬಿಜೆಪಿ 6 ಕ್ಷೇತ್ರಗಳಲ್ಲಿ ಗೆಲುವು ಸಾಧಿಸಿವೆ. ರಂಗಸ್ವಾಮಿ ಅವರು ಐದು ವರ್ಷಗಳ ಅಂತರದ ಬಳಿಕ ನಾಲ್ಕನೇ ಬಾರಿಗೆ ಮುಖ್ಯಮಂತ್ರಿ ಆಗಲಿದ್ದಾರೆ.

'ಬಿಜೆಪಿ ಮತ ಕಾಂಗ್ರೆಸ್‌ಗೆ'

ತಿರುವನಂತಪುರ: ಕನಿಷ್ಠ 90 ವಿಧಾನಸಭಾ ಕ್ಷೇತ್ರಗಳಲ್ಲಿ ಬಿಜೆಪಿಯ ಮತಗಳನ್ನು ಕಾಂಗ್ರೆಸ್‌ಗೆ ವರ್ಗಾಯಿಸಲಾಗಿದೆ. ಕನಿಷ್ಠ 10 ಕ್ಷೇತ್ರಗಳಲ್ಲಿ ಬಿಜೆಪಿ ಮತಗಳಿಂದಾಗಿ ಕಾಂಗ್ರೆಸ್ ಗೆದ್ದಿದೆ. ಹಾಗಾಗಿಯೇ ಎನ್‌ಡಿಎಯ ಮತ ಪ್ರಮಾಣ ತೀವ್ರವಾಗಿ ಕುಗ್ಗಿದೆ ಎಂದು ಕೇರಳ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಆರೋಪಿಸಿದ್ದಾರೆ.

2016ಕ್ಕೆ ಹೋಲಿಸಿದರೆ ಈ ಬಾರಿ ಎನ್‌ಡಿಎಯ ಮತಗಳಲ್ಲಿ 4 ಲಕ್ಷದಷ್ಟು ಕಡಿಮೆಯಾಗಿದೆ. ಯುಡಿಎಫ್‌ಗೆ ಸಿಕ್ಕ ಮತಗಳಲ್ಲಿ ಸುಮಾರು 4 ಲಕ್ಷದಷ್ಟು ಹೆಚ್ಚಳವಾಗಿದೆ. ಸುಮಾರು 90 ಕ್ಷೇತ್ರಗಳಲ್ಲಿ ಬಿಜೆಪಿಗೆ ಸಿಕ್ಕ ಮತಗಳ ಸಂಖ್ಯೆ ತೀವ್ರವಾಗಿ ಕಡಿಮೆಯಾಗಿದೆ. ಬಿಜೆಪಿ ಮತ್ತು ಕಾಂಗ್ರೆಸ್ ನಡುವೆ ಒಳ ಒಪ್ಪಂದ ಆಗಿತ್ತು ಎಂಬುದಕ್ಕೆ ಇದು ಪುರಾವೆ ಎಂದು ಅವರು ಹೇಳಿದ್ದಾರೆ.


ವಿಜಯನ್ ಅವರು ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡಿದ್ದು, ಹೊಸ ಸರ್ಕಾರ ಅಸ್ತಿತ್ವಕ್ಕೆ ಬರುವವರೆಗೆ ಉಸ್ತುವಾರಿ ನೋಡಿಕೊಳ್ಳಲು ರಾಜ್ಯಪಾಲ ಆರಿಫ್ ಮೊಹಮ್ಮದ್ ಖಾನ್ ಸೂಚಿಸಿದ್ದಾರೆ. ಇತ್ತೀಚೆಗೆ ನಡೆದ ವಿಧಾನಸಭೆ ಚುನಾವಣೆಯಲ್ಲಿ ಮರು ಆಯ್ಕೆ ಆಗುವ ಮೂಲಕ ವಿಜಯನ್ ನೇತೃತ್ವದ ಎಲ್‌ಡಿಎಫ್ ಇತಿಹಾಸ ಸೃಷ್ಟಿಸಿದೆ. 140 ಕ್ಷೇತ್ರಗಳ ಪೈಕಿ 99ರಲ್ಲಿ ಎಲ್‌ಡಿಎಫ್ ಮತ್ತು 41ರಲ್ಲಿ ಯುಡಿಎಫ್ ಗೆದ್ದಿವೆ. ಬಿಜೆಪಿ ಒಂದು ಕ್ಷೇತ್ರದಲ್ಲಿಯೂ ಗೆದ್ದಿಲ್ಲ.

ಪ್ರಾದೇಶಿಕ ಪಕ್ಷಗಳು V/s ರಾಷ್ಟ್ರೀಯ ಪಕ್ಷಗಳು

ಬೆಂಗಳೂರು: ಐದು ರಾಜ್ಯಗಳ ವಿಧಾನಸಭಾ ಚುನಾವಣೆಯ ಫಲಿತಾಂಶ ಪ್ರಕಟವಾದ ಬೆನ್ನಲ್ಲೇ ದೇಶದಲ್ಲಿ ಪ್ರಾದೇಶಿಕ ರಾಜಕೀಯ ಪಕ್ಷಗಳು ಮತ್ತೆ ದೇಶದ ರಾಜಕಾರಣದಲ್ಲಿ ಪ್ರವರ್ಧಮಾನಕ್ಕೆ ಬರುವ ಅವಕಾಶ ಇದೆಯೆ? ಎಂಬ ಪ್ರಶ್ನೆ ಎದ್ದಿದೆ. ಈ ಕುರಿತು 'ಪ್ರಜಾವಾಣಿ' ಸೋಮವಾರ ಆಯೋಜಿಸಿದ್ದ ಫೇಸ್ ಬುಕ್ ಲೈವ್ ಸಂವಾದದಲ್ಲಿ ಬಿಜೆಪಿ, ಕಾಂಗ್ರೆಸ್ ಮತ್ತು ಜೆಡಿಎಸ್‌ನ ಮುಖಂಡರು ಮಂಡಿಸಿದ ವಿಚಾರಗಳು ಇಲ್ಲಿವೆ..

ಪ್ರಜಾವಾಣಿ ಸಂವಾದ

ರಾಷ್ಟ್ರೀಯ ಪಕ್ಷಗಳ ಕಾಲ ಮುಗಿದಿಲ್ಲ



ಪ್ರಾದೇಶಿಕತೆ ಎಂಬುದು ಒಂದೊಂದು ಪ್ರದೇಶಕ್ಕೂ ಭಿನ್ನವಾದುದು. ಜಾತಿ, ಮತ, ಪ್ರಾಂತ, ಭಾಷೆ ಸೇರಿದಂತೆ ಅನೇಕ ವಿಚಾರಗಳ ಆಧಾರದಲ್ಲಿ ಪ್ರಾದೇಶಿಕ ಅಸ್ಮಿತೆ ಕೆಲಸ ಮಾಡುತ್ತದೆ. ಇನ್ನು ರಾಷ್ಟ್ರೀಯ ಪಕ್ಷಗಳಿಗೆ ಸ್ಥಳಾವಕಾಶ ಇಲ್ಲ ಎಂಬ ವಾದವನ್ನು ಒಪ್ಪಲಾಗದು. ಜನರು ಒಂದೊಂದು ಚುನಾವಣೆಯಲ್ಲಿ ಒಂದೊಂದು ರೀತಿಯಲ್ಲಿ ನಿರ್ಧಾರ ಮಾಡುತ್ತಾರೆ.

ಒಡಿಶಾದಲ್ಲಿ ಪ್ರಾದೇಶಿಕತೆಯ ಅಸ್ಮಿತೆಯನ್ನೇ ಮುಂದಿಟ್ಟುಕೊಂಡು ಒಂದು ಪ್ರಾದೇಶಿಕ ಪಕ್ಷ ಆಡಳಿತ ನಡೆಸುತ್ತಿದೆ. ತೆಲಂಗಾಣ, ಆಂಧ್ರಪ್ರದೇಶ, ತಮಿಳುನಾಡು ರಾಜ್ಯಗಳಲ್ಲೂ ಪ್ರಾದೇಶಿಕ ಅಸ್ಮಿತೆಯೇ ರಾಜಕಾರಣವನ್ನು ಮುನ್ನಡೆಸುತ್ತಿದೆ. ಎಲ್ಲ ಕಡೆಯೂ ಪ್ರಾದೇಶಿಕತೆ ಭಿನ್ನವಾಗಿರುತ್ತದೆ. ರಾಷ್ಟ್ರೀಯ ಪಕ್ಷ ಎಂದು ಕರೆಸಿಕೊಳ್ಳುವ ರಾಜಕೀಯ ಪಕ್ಷಗಳು ಪ್ರಾದೇಶಿಕ ಭಾವನೆಗಳಿಗೆ ಬೆಲೆ ಕೊಡದೇ ಇದ್ದಾಗ ಸಹಜವಾಗಿಯೇ ಪ್ರಾದೇಶಿಕ ಪಕ್ಷಗಳು ಬಲಗೊಳ್ಳುತ್ತವೆ.


ಐದು ರಾಜ್ಯಗಳ ಚುನಾವಣೆಯಲ್ಲಿ ಬಿಜೆಪಿ ಏನನ್ನೂ ಕಳೆದುಕೊಂಡಿಲ್ಲ. ನಮ್ಮ ನಿರೀಕ್ಷೆಯಂತೆ ಪಶ್ಚಿಮ ಬಂಗಾಳದಲ್ಲಿ ಅಧಿಕಾರ ಹಿಡಿಯಲು ಸಾಧ್ಯವಾಗಿಲ್ಲ ಎಂಬುದು ಸತ್ಯ. ಆದರೆ, ಕೇರಳ, ತಮಿಳುನಾಡಿನಲ್ಲಿ ಮತ ಗಳಿಕೆ ಹೆಚ್ಚಿದೆ. ಯಾವ ದೃಷ್ಟಿಕೋನದಿಂದಲೂ ಹಿನ್ನಡೆ ಅಲ್ಲ.

ಪ್ರತಿ ಪ್ರಾದೇಶಿಕ ಪಕ್ಷಕ್ಕೂ ಒಂದು ರಾಷ್ಟ್ರೀಯ ಅಸ್ಮಿತೆ ಇರುತ್ತದೆ. ಪ್ರಾದೇಶಿಕ ಪಕ್ಷಗಳು ಒಕ್ಕೂಟವಾಗಿ ಅಧಿಕಾರಕ್ಕೆ ಬಂದರೂ ಬೇಗ ಕುಸಿದುಬಿದ್ದ ಉದಾಹರಣೆಗಳಿವೆ. ಹೆಚ್ಚಿನ ಪ್ರಾದೇಶಿಕ ಪಕ್ಷಗಳು ಕೌಟುಂಬಿಕ ರಾಜಕೀಯ ಪಕ್ಷಗಳಾಗಿ ಉಳಿದಿವೆ. ರಾಷ್ಟ್ರೀಯ ಪಕ್ಷಗಳು ಗಟ್ಟಿಯಾಗಿದ್ದರೆ ಮಾತ್ರ ಅಂತರ ರಾಜ್ಯ ವಿವಾದಗಳನ್ನು ಸುಲಭವಾಗಿ ಪರಿಹರಿಸಬಹುದು.

ರಾಷ್ಟ್ರೀಯ ಪಕ್ಷಗಳು ಪ್ರಾದೇಶಿಕ ನಾಯಕತ್ವವನ್ನು ದುರ್ಬಲಗೊಳಿಸುತ್ತವೆ ಎಂಬ ಆರೋಪದಲ್ಲಿ ಹುರುಳಿಲ್ಲ. ಬಿ.ಎಸ್. ಯಡಿಯೂರಪ್ಪ ಬಿಜೆಪಿ ಬಿಟ್ಟು ಬೇರೆ ಪಕ್ಷ ಕಟ್ಟಿ ಬಿಜೆಪಿಯನ್ನು ಸೋಲಿಸಿದರು. ಆದರೂ, ಅವರನ್ನು ಕರೆತಂದು ಮುಖ್ಯಮಂತ್ರಿ ಮಾಡಲಾಗಿದೆ. ರಾಜ್ಯ ಮಟ್ಟದಲ್ಲಿ ಪ್ರಾದೇಶಿಕ ಪಕ್ಷ ಮತ್ತು ರಾಷ್ಟ್ರ ಮಟ್ಟದಲ್ಲಿ ರಾಷ್ಟ್ರೀಯ ಪಕ್ಷಗಳು ಇರಬೇಕೆಂಬ ಚರ್ಚೆ ನಡೆಯುತ್ತಿದೆ. ಅದನ್ನು ಒಪ್ಪುವುದಿಲ್ಲ. ಎಲ್ಲ ಪಕ್ಷಗಳೂ ರಾಷ್ಟ್ರೀಯ ಪಕ್ಷಗಳೇ. ಆದರೆ, ಕೆಲವು ಪಕ್ಷಗಳ ಕಾರ್ಯವ್ಯಾಪ್ತಿ ಸೀಮಿತವಾಗಿರುತ್ತದೆ.

ಗಣೇಶ್ ಕಾರ್ಣಿಕ್, ಬಿಜೆಪಿ ರಾಜ್ಯ ಘಟಕದ ಮುಖ್ಯ ವಕ್ತಾರ

ರಾಷ್ಟ್ರೀಯ ಪಕ್ಷಗಳ ತಿರಸ್ಕಾರ ಆರಂಭ




ಚರಿತ್ರೆಯನ್ನು ಮರೆಯಲಾಗದು. 1952 ಮತ್ತು 1957ರ ಚುನಾವಣೆಯ ನಂತರ ಪ್ರಾದೇಶಿಕ ಪಕ್ಷಗಳು ಬಲಗೊಂಡವು. ಜವಾಹರ್ ಲಾಲ್ ನೆಹರೂ ಅವರ ವೈಭವೀಕರಿಸಲ್ಪಟ್ಟ ವ್ಯಕ್ತಿತ್ವದ ಕಾರಣದಿಂದ ಕಾಂಗ್ರೆಸ್ ಸತತವಾಗಿ ಚುನಾವಣೆಗಳಲ್ಲಿ ಗೆಲ್ಲುತ್ತಿತ್ತು. 1962ರ ನಂತರದ ದಿನಗಳಲ್ಲಿ ನೆಹರೂ ಅವರ ವ್ಯಕ್ತಿತ್ವದ ಭಾರಕ್ಕೆ ಕಾಂಗ್ರೆಸ್ ಕುಸಿಯಿತು. ಪ್ರಾದೇಶಿಕ ಪಕ್ಷಗಳು ಮಂಚೂಣಿಗೆ ಬಂದಿದ್ದವು. ಸಮಾಜವಾದಿ ಮತ್ತು ಎಡ ಪಕ್ಷಗಳ ಸಣ್ಣ ಘಟಕಗಳಾಗಿ ಇದ್ದವು. ಒಕ್ಕೂಟ ವ್ಯವಸ್ಥೆಯನ್ನು ಕಾಪಾಡಿಕೊಂಡು ಬಂದಿರುವುದೇ ಪ್ರಾದೇಶಿಕ ಪಕ್ಷಗಳು. ಐದು ರಾಜ್ಯಗಳ ಚುನಾವಣಾ ಫಲಿತಾಂಶವನ್ನು ವಿಶ್ಲೇಷಿಸುವಾಗ ಪ್ರಾದೇಶಿಕ ಪಕ್ಷಗಳು ಆಗಾಗ ಕಾಣಿಸಿಕೊಂಡು ಮರೆಯಾಗುತ್ತವೆ ಎಂದು ಭಾವಿಸುವುದು ಸರಿಯಲ್ಲ. ಭಾರತ ರಾಜ್ಯಗಳ ಒಕ್ಕೂಟ ಎಂದು ನಮ್ಮ ಸಂವಿಧಾನವೇ ಸ್ಪಷ್ಟವಾಗಿ ಹೇಳಿದೆ.

ಪ್ರಾದೇಶಿಕ ಪಕ್ಷಗಳು ಯಾವತ್ತೂ ರಾಷ್ಟ್ರೀಯತೆ, ಪ್ರಾದೇಶಿಕ ಅಸ್ಮಿತೆ, ಸಾಮಾಜಿಕ ನ್ಯಾಯದ ವಿಚಾರವನ್ನು ಮುಂದಿಟ್ಟುಕೊಂಡೇ ಕೆಲಸ ಮಾಡುತ್ತವೆ. ರಾಷ್ಟ್ರೀಯ ಪಕ್ಷಗಳು ಮಾತ್ರ ಎಲ್ಲವನ್ನೂ ಸಮಾನವಾಗಿ ಕಾಣುತ್ತವೆ ಎಂಬುದು ಸರಿಯಲ್ಲ. ಪ್ರಾದೇಶಿಕ ಪಕ್ಷಗಳು ಕೂಡ ದೇಶವನ್ನು ಮುನ್ನಡೆಸಿವೆ. ಈ ಚುನಾವಣೆಯ ಫಲಿತಾಂಶವನ್ನು ಗಮನಿಸಿದರೆ ಪ್ರಧಾನಿ ನರೇಂದ್ರ ಮೋದಿ ಮತ್ತು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರನ್ನು ಜನರು ತಿರಸ್ಕರಿಸಿರುವುದು ಸ್ಪಷ್ಟವಾಗಿದೆ. ಒಂದು ದೇಶ ಒಬ್ಬನೇ ವ್ಯಕ್ತಿ ಎಂಬಲ್ಲಿಗೆ ಪ್ರಧಾನಿ ಮುಂದುವರಿದರು. ಪ್ರಾದೇಶಿಕ ಪಕ್ಷಗಳನ್ನು ಕೊಲ್ಲುವ ರಾಷ್ಟ್ರೀಯ ಪಕ್ಷಗಳ ಹುನ್ನಾರವನ್ನು ಜನರು ಗಮನಿಸುತ್ತಿದ್ದಾರೆ.

ಬಲಿಷ್ಠ ಪ್ರಾದೇಶಿಕ ಪಕ್ಷ ಇದ್ದರೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಸಂಬಂಧ ಆರೋಗ್ಯಕರವಾಗಿ ಇರುತ್ತದೆ. ರಾಷ್ಟ್ರೀಯ ಪಕ್ಷಗಳು ಪ್ರಾದೇಶಿಕ ಪಕ್ಷಗಳನ್ನು ಕೊಲ್ಲುವ ಪ್ರಯತ್ನ ಮಾಡುತ್ತದೆ. ಪ್ರಾದೇಶಿಕ ನಾಯಕತ್ವವನ್ನೂ ಮಣಿಸುತ್ತವೆ. ಡಿ. ದೇವರಾಜ ಅರಸು ಇದಕ್ಕೊಂದು ಉದಾಹರಣೆ. ದೇಶದಲ್ಲಿ ಮತ್ತೊಮ್ಮೆ ಪ್ರಾದೇಶಿಕ ಪಕ್ಷಗಳ ಸರ್ಕಾರ ಖಚಿತ

ವೈ.ಎಸ್.ವಿ. ದತ್ತ, ಜೆಡಿಎಸ್ ಮುಖಂಡರು

ರಾಷ್ಟ್ರೀಯ ಪಕ್ಷಗಳ ಅಂತ್ಯದ ಸೂಚನೆಯಲ್ಲ



70 ವರ್ಷಗಳಲ್ಲಿ ಬೇರೆ ಬೇರೆ ರೀತಿಯ ಪ್ರಯೋಗಗಳು ನಡೆದಿವೆ. ಕಾಂಗ್ರೆಸ್‌ನಿಂದ ಸಿಡಿದು ಹೋದವರು ಪ್ರಾದೇಶಿಕ ಪಕ್ಷಗಳಲ್ಲಿ ಗುರುತಿಸಿಕೊಂಡಿದ್ದಾರೆ. ಕಾಂಗ್ರೆಸ್ ವಿರುದ್ಧ ಇದ್ದವರೂ ಪ್ರಾದೇಶಿಕ ಪಕ್ಷದವರಾಗಿದ್ದಾರೆ. ಒಡಿಶಾ, ತಮಿಳುನಾಡು, ತೆಲಂಗಾಣ, ಬಿಹಾರ ಸೇರಿದಂತೆ ಕೆಲವು ರಾಜ್ಯಗಳಲ್ಲಿ ಪ್ರಾದೇಶಿಕ ಪಕ್ಷಗಳ ಹಿಡಿತ ಈಗಲೂ ಬಲವಾಗಿ ಇದೆ. ರಾಷ್ಟ್ರೀಯ ಪಕ್ಷಗಳು ದುರ್ಬಲವಾದ ಎಲ್ಲ ಸಂದರ್ಭದಲ್ಲೂ ಪ್ರಾದೇಶಿಕ ಪಕ್ಷಗಳು ಬಲಗೊಳ್ಳುತ್ತವೆ.

ಕಾಂಗ್ರೆಸ್ ಯಾವತ್ತೂ ಪ್ರಾದೇಶಿಕ ಪಕ್ಷಗಳನ್ನು ವಿರೋಧಿಸಿಲ್ಲ. ಕಾಂಗ್ರೆಸ್ ಒಂದು ರಾಷ್ಟ್ರೀಯ ಪಕ್ಷ. ಆದರೂ, ರಾಜ್ಯಗಳಲ್ಲಿ ಬಲವಾದ ನಾಯಕತ್ವ ಇದ್ದಾಗ, ಪ್ರಾದೇಶಿಕ ಭಾವನೆಗಳಿಗೆ ಸ್ಪಂದಿಸಿದಾಗಲೆಲ್ಲ ನಮ್ಮ ಪಕ್ಷ ಗೆದ್ದು ಬಂದಿದೆ. ಪ್ರಾದೇಶಿಕ ಪಕ್ಷಗಳ ಜತೆಗೆ ಕಾಂಗ್ರೆಸ್ ಪಕ್ಷವು ಉತ್ತಮ ಬಾಂಧವ್ಯ ಹೊಂದಿದೆ.

ಕಾಂಗ್ರೆಸ್ ಪಕ್ಷಕ್ಕೆ ಮೊದಲ ಬಾರಿಗೆ ಇಂತಹ ಸ್ಥಿತಿ ಎದುರಾಗಿಲ್ಲ. ಬಿಜೆಪಿಯ ಕಾರ್ಯಸೂಚಿ ಮತ್ತು ಸಿದ್ಧಾಂತವನ್ನು ಬಹಿರಂಗಪಡಿಸಿ, ಅವರ ವಿರುದ್ಧ ನಿಲ್ಲಬೇಕು ಎಂಬ ವಿಚಾರದಲ್ಲಿ ಕಾಂಗ್ರೆಸ್ ನಾಯಕತ್ವ ಸ್ಪಷ್ಟತೆ ಹೊಂದಿದೆ. ಬಲಪಂಥೀಯವಾದದ ಕಡೆಗೆ ಒಮ್ಮೆ ಮತದಾರರು ತಿರುಗಿ, ನಂತರದಲ್ಲಿ ಬದಲಾವಣೆಯಾಗುವುದು ಎಲ್ಲ ಕಡೆಗೂ ನಡೆದಿದೆ. ನಮ್ಮ ದೇಶದಲ್ಲೂ ಅದೇ ಆಗುತ್ತಿದೆ. ಹುಸಿ ರಾಷ್ಟ್ರೀಯವಾದವನ್ನು ಮುಂದಿಟ್ಟುಕೊಂಡು ಬಿಜೆಪಿ ಅಧಿಕಾರ ಹಿಡಿಯಲು ಯತ್ನಿಸುತ್ತಿದೆ.

ಪ್ರಬಲವಾದ ಪ್ರಾದೇಶಿಕ ಪಕ್ಷಗಳು ಹಾಗೂ ರಾಷ್ಟ್ರೀಯ ಪಕ್ಷಗಳಲ್ಲಿ ಪ್ರಬಲವಾದ ಪ್ರಾದೇಶಿಕ ನಾಯಕತ್ವ ಎರಡೂ ಒಂದೇ ಕೆಲಸ ಮಾಡುತ್ತವೆ. ಕ್ಯಾಪ್ಟನ್ ಅಮರೀಂದರ್ ಸಿಂಗ್, ಸಿದ್ದರಾಮಯ್ಯ, ಅಶೋಕ್ ಗೆಹ್ಲೋಟ್ ಎಲ್ಲರೂ ಪ್ರಬಲ ಪ್ರಾದೇಶಿಕ ನಾಯಕರು. ಅವರಿಗೆ ಬೆಂಬಲ ನೀಡಿದಾಗ ಪಕ್ಷ ಉತ್ತಮವಾಗಿ ಬೆಳೆದಿದೆ. ಆ ರೀತಿಯ ಪ್ರಬಲ ಪ್ರಾದೇಶಿಕ ನಾಯಕರು ದುರ್ಬಲಗೊಂಡಾಗ ಪಕ್ಷಕ್ಕೆ ಹಿನ್ನಡೆ ಆಗಿರುವುದೂ ನಡೆದಿದೆ.

ಕಳೆದ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿಗೆ ಹೆಚ್ಚು ಸೀಟುಗಳು ಸಿಕ್ಕಿರುವುದು ಕೇವಲ ರಾಷ್ಟ್ರೀಯತೆಯ ವಿಚಾರದಲ್ಲಿ ಅಲ್ಲ. ರಾಷ್ಟ್ರೀಯ ಪಕ್ಷಗಳು ಮತ್ತು ಪ್ರಾದೇಶಿಕ ಪಕ್ಷಗಳು ಮೊದಲು ಇದ್ದವು. ಈಗಲೂ ಇವೆ, ಮುಂದೆಯೂ ಇರುತ್ತವೆ.

ಡಾ. ಸೈಯದ್ ನಾಸೀರ್ ಹುಸೇನ್
ರಾಜ್ಯಸಭಾ ಸದಸ್ಯ, ಕಾಂಗ್ರೆಸ್



ತಲ್ಲಣದ ಮನಸ್ಥಿತಿಗೂ ಮದ್ದಿದೆ..

ಡಾ. ಎ. ಶ್ರೀಧರ

ನಾವಿಂದು ಎದುರಿಸುತ್ತಿರುವ ಸಾಂಕ್ರಾಮಿಕ ರೋಗದಿಂದ ಉಂಟಾಗುತ್ತಿರುವ ದುರಂತಗಳು ಬಹಳಷ್ಟು ಜನರ ಮನಸ್ಸಿಗೆ ಆಘಾತ ಉಂಟುಮಾಡುತ್ತಿವೆ. ರೋಗರುಜಿನಗಳಿಂದಾಗಿ ಮನಸ್ಸಿಗೆ ಬೇಸರವಾಗುವುದು, ಹಿಂಸೆಯಾಗುವುದು ಪ್ರಕೃತಿ ಸಹಜ. ನೆಂಟರಿಷ್ಟರ ಸಾವು– ನೋವುಗಳನ್ನು ಕ್ಷಣಕ್ಷಣವೂ ಎದುರಿಸುತ್ತಿರುವ ಮನಸ್ಸು ತಲ್ಲಣಕ್ಕೆ ಒಳಗಾಗದಿರುವುದು ಅಸಾಧ್ಯ. ಲಕ್ಷಾಂತರ ಜನರು ರೋಗಕ್ಕೆ ತುತ್ತಾಗುತ್ತಿರುವುದರಿಂದ ಹುಟ್ಟಿಕೊಳ್ಳುತ್ತಿರುವ ಭೀತಿ ಸಾಮಾನ್ಯ ರೀತಿಯದ್ದಲ್ಲ. ಜನಸಾಮಾನ್ಯರ ದಿನನಿತ್ಯದ ಬದುಕಿನ ಎಲ್ಲ ರೀತಿಯ ಹೊಂದಾಣಿಕೆಗಳನ್ನೂ ಬುಡಮೇಲು ಮಾಡಿರುವಂತಹ ಪರಿಸ್ಥಿತಿಯಿದು. ಮನಸ್ಸಿನ ಸಮಭಾವ ಏರುಪೇರಾದಾಗ ನಡೆ–ನುಡಿಗಳಲ್ಲೂ ಏರುಪೇರು ಕಾಣಿಸಿಕೊಳ್ಳುವುದಷ್ಟೇ ಅಲ್ಲದೆ ಇತರರ ನಡೆ–ನುಡಿಗಳ ಮೇಲೂ ಪರಿಣಾಮ ಬೀರುತ್ತದೆ.

> ರೋಗ ಹರಡುವುದನ್ನು ತಡೆಗಟ್ಟುವುದು, ರೋಗ ತಗಲಿಸಿಕೊಳ್ಳದಂತೆ ಎಚ್ಚರ ವಹಿಸುವ ಪ್ರತಿಯೊಂದು ವಿಷಯವೂ ವ್ಯಕ್ತಿಯ ಮಾನಸಿಕ ಸಮತೋಲನದ ಮೇಲೆ ಒತ್ತಡ ಹೇರುತ್ತಿದೆ. ಆದರೂ ಕೂಡ ಉಡುಗಿಹೋಗುತ್ತಿರುವ ನಮ್ಮ ಮನೋಬಲವನ್ನು ಒಗ್ಗೂಡಿಸಿ ಸಕಾರಾತ್ಮಕ ಆಲೋಚನೆಗಳತ್ತ ನಿಗಾ ಹೆಚ್ಚಿಸಿಕೊಳ್ಳಬೇಕಿದೆ.

ಸಕಾರಾತ್ಮಕ ಆಲೋಚನೆ

ರೋಗ ಹರಡುವುದನ್ನು ತಡೆಗಟ್ಟುವುದು, ರೋಗ ತಗಲಿಸಿಕೊಳ್ಳದಂತೆ ಎಚ್ಚರ ವಹಿಸುವುದು ಮತ್ತು ರೋಗ ತಗಲಿದವರೊಡನೆ ವ್ಯವಹರಿಸುವ ಪ್ರತಿಯೊಂದು ವಿಷಯವೂ ವ್ಯಕ್ತಿಯ ಮಾನಸಿಕ ಸಮತೋಲನದ ಮೇಲೆ ಒತ್ತಡ ಹೇರುತ್ತಿದೆ. ಆದರೂ ಕೂಡ ಉಡುಗಿಹೋಗುತ್ತಿರುವ ನಮ್ಮ ಮನೋಬಲವನ್ನು ಒಗ್ಗೂಡಿಸಿ ಮಾನಸಿಕ ಹೊಂದಾಣಿಕೆಗಾಗಿ ಪ್ರಯತ್ನಿಸಲೇ ಬೇಕು. ಸಕಾರಾತ್ಮಕ ಆಲೋಚನೆಗಳತ್ತ ನಮ್ಮ ನಿಗಾ ಹೆಚ್ಚಿಸಿಕೊಳ್ಳುವುದನ್ನು ಕಲಿಯುವ ಅಗತ್ಯವಿದೆ.

ಕಷ್ಟಗಳು ಎದುರಾದಾಗ ತಪ್ಪಿಸಿಕೊಳ್ಳುವ ವಿಧಗಳಲ್ಲಿ ಬಹಳ ಪರಿಣಾಮಕಾರಿಯೆಂದರೆ ವಿಚಾರ ಮಾಡುವುದು. ದುರುದೃಷ್ಟಕರದ ಸಂಗತಿ ಎಂದರೆ ವಿಚಾರ ಮಾಡುವುದನ್ನು ತಡೆಗಟ್ಟುವ ಭಾವೋದ್ವೇಗಗಳೇ ಮೊದಲು ಮೂಡುತ್ತವೆ. ಭಯ, ಆತಂಕ, ಭ್ರಾಂತುಗಳ ಮೂಲಕ ಸಂಕಟ ಎನ್ನುವ ಭಾವನೆ ಗಾಢವಾಗುವುದಕ್ಕೂ ಇದು ಕಾರಣ. ಇದು ರೋಗದ ಬಗ್ಗೆ ತಪ್ಪು ಕಲ್ಪನೆಗಳನ್ನು ಹೆಚ್ಚಿಸಿ ತಡೆಯಲಾಗದಂತಹ ಭಯ ಭೀತಿಗೆ ದಾರಿ ಮಾಡಿಕೊಡುತ್ತದೆ. ಇದರ ಜೊತೆಗೆ ನಿರಾಶೆ, ಹತಾಶೆ ಭಾವನೆಗಳು ಸೇರಿಬಿಟ್ಟರಂತೂ ವ್ಯಕ್ತಿಯ ಚೈತನ್ಯ ನಿತ್ರಾಣಗೊಳ್ಳುವುದು ಖಂಡಿತ.

ರೋಗ ತಗಲುವ ಭಯ, ರೋಗ ತಗುಲಿದ ನಂತರದ ಪರಿಸ್ಥಿತಿಯ ಬಗ್ಗೆ ಆತಂಕಗಳು ಮನಸ್ಸಿಗೆ ಅಹಿತವನ್ನೇ ತರುತ್ತವೆ. ಮುಂದೆ ಏನೇನಾಗಿಬಿಡುವುದೋ ಎನ್ನುವಂತಹ ಮನದ ಸ್ಥಿತಿಯು ತವಕ, ತಲ್ಲಣಗಳ ಜಾಲವನ್ನು ಹಣೆಯುತ್ತದೆ. ಇವೇ ನಾಳೆಗಳ ಬಗ್ಗೆ ಭ್ರಮೆಯಾಧಾರಿತ ಕೆಟ್ಟ ಯೋಚನೆಗಳು ಮೂಡುವಂತೆ ಮಾಡುವುದು. ಇಂತಹ ಅಸಹಾಯಕತೆಯ ಸ್ಥಿತಿಗಳು ಹೆಚ್ಚುಕಡಿಮೆ ಎಲ್ಲರಲ್ಲಿಯೂ ಕಾಣಿಸಿಕೊಳ್ಳುವಂತಹದ್ದೇ.

ಸ್ವಾನುಕಂಪದಿಂದ ಕದಡುವ ಮಾನಸಿಕ ಸಮತೋಲನ


ಸಾಂಕ್ರಾಮಿಕ ರೋಗ ಹರಡುತ್ತಿರುವ ಸಮಯದಲ್ಲಿ ಆರೋಗ್ಯವಂತರಲ್ಲಿಯೂ ಅಸಹಾಯಕ ಮಾನಸಿಕತೆ ಕಾಣಿಸಿಕೊಳ್ಳುವುದು ಸಹಜ. ಇದಕ್ಕೆ ಬಹುಮುಖ್ಯ ಮನೋವೈಜ್ಞಾನಿಕ ಕಾರಣ ಅನುಕಂಪ ಎನ್ನುವ ಮನುಷ್ಯ ಗುಣ. ಸ್ವಾನುಕಂಪ ಅಥವಾ ತನ್ನ ಬಗೆಯಷ್ಟೇ ಅತಿಯಾಗಿ ಯೋಚಿಸುವುದು ಒಂದು ರೀತಿಯದ್ದಾದರೆ, ಇನ್ನೊಂದು ರೀತಿಯಲ್ಲಿ ಅದು ಮನದ ಸಮತೋಲನವನ್ನೇ ಕದಡುವಂತಹದ್ದು. ಹಳೆಯ ಅಹಿತಕರ ನೆನಪು, ಥಟ್ಟನೆ ಮನಸ್ಸಿಗೆ ಗೋಚರಿಸಿ ಕ್ಷಣದಲ್ಲಿ ಮನವನ್ನು ಆವರಿಸಿಬಿಡುತ್ತದೆ. ನೀವು ಮಂದಿಯೊಂದಿಗಿರಿ, ದೂರವಿದ್ದು ಒಬ್ಬಂಟಿಯಾಗಿರಿ, ದುಡಿಯುತ್ತಿರಲಿ, ಪೂಜೆ, ಪ್ರಾರ್ಥನೆಗಳಿರಲಿ, ಮನದ ಈ ತಳಮಳದ ಸ್ಥಿತಿಯಲ್ಲಿ ಉದ್ರಿಕ್ತತೆ ಬಂದು ಹೋಗುತ್ತಲೇ ಇರುತ್ತದೆ. ಕೋವಿಡ್–19ಗಿಂತಲೂ ಭೀಕರ ಅದರ ಬಗ್ಗೆ ಮೂಡುವ ತಪ್ಪು ಮಾಹಿತಿಗಳು. ಈ ಮಾಹಿತಿಗಳೇ ಸಾಮಾಜಿಕ ಸಂಪರ್ಕ, ಸುಖ ನಿದ್ದೆ, ಹಸಿವು ಮುಂತಾದವುಗಳಲ್ಲಿ ಏರುಪೇರುಗಳನ್ನುಂಟು ಮಾಡಿ ಮನೋಯಾತನೆಗೆ ಕಾರಣವಾಗಬಲ್ಲವು. ಬೇರೆ ರೀತಿಯ ಕಾಯಿಲೆಗಳು ಇದ್ದರಂತೂ ವ್ಯಕ್ತಿಯ ಮನಸ್ಸು ಮತ್ತಷ್ಟು ಕುಸಿದುಬಿಡುತ್ತದೆ.

ವೈದ್ಯರು ಮತ್ತು ವೈಜ್ಞಾನಿಕ ಸಂಶೋಧನೆಗಳು ಕೋವಿಡ್–19 ಗೆ ನಂಬಲು ಅರ್ಹವಾದ, ಪರಿಣಾಮಕಾರಿ ಔಷಧಿ ಮತ್ತು ಚುಚ್ಚುಮದ್ದುಗಳಿವೆ ಎನ್ನುವುದನ್ನು ತಿಳಿಸುತ್ತವೆ. ರೋಗ ತಗಲಿದ ಮೇಲೂ ಚಿಕಿತ್ಸೆ ಪಡೆದು ಚೇತರಿಸಿಕೊಂಡವರ ಪ್ರಮಾಣ ಉತ್ತಮವಾಗಿಯೇ ಇದೆ. ಹೀಗಾಗಿ ಕಟ್ಟುನಿಟ್ಟಾಗಿ ಆರೋಗ್ಯದ ನಿಯಮಗಳನ್ನು ಅನುಸರಿಸುವುದೊಂದೇ ಅತ್ಯುತ್ತಮ ಮಾರ್ಗ, ಇದರಲ್ಲಿಯೇ ಮನದ ಸ್ಥೈರ್ಯವನ್ನು ಹೆಚ್ಚಿಸುವ ಪೌಷ್ಟಿಕಾಂಶ ಅಡಗಿದೆ; ಮನುಷ್ಯ ಸಹಜ ಶಕ್ತಿಗಳೆನ್ನಬಹುದಾದ ತಾಳ್ಮೆ, ಸಂಯಮ ಮತ್ತು ಆತ್ಮವಿಶ್ವಾಸ ಹೆಚ್ಚಿಸಿಕೊಳ್ಳುವುದಕ್ಕೂ ಉತ್ತೇಜನ ನೀಡಿ ಮನಸು ತಿಳಿಗೊಳ್ಳುವಂತೆ ಮಾಡುತ್ತದೆ. ಮನಸ್ಸು ಹಗುರವಾದಷ್ಟೂ ವಿವೇಚನಾ ಬಲದ ಹೆಚ್ಚಳ ಸಾಧ್ಯ. ಇದರಿಂದ ಸಾಂಕ್ರಾಮಿಕ ರೋಗವನ್ನು ಎದುರಿಸುವುದು ಕಷ್ಟಕರವಾಗದು.

ಮನೋಶಕ್ತಿ ಹೆಚ್ಚಿಸಿಕೊಳ್ಳುವುದು ಹೇಗೆ?

- ನಾವು ನೋಡುವ, ಕೇಳಿಸಿಕೊಳ್ಳುವ, ಅಥವಾ ನಂಬುವಂತಹ ವಿಷಯ, ಚಿತ್ರ ಅಥವಾ ಭಾವವನ್ನು ದಿಢೀರನೆ ಒಪ್ಪಿಕೊಳ್ಳದಿರುವುದು
- ಯಾವುದೇ ವಿಷಯವಿರಲಿ ಅದು ಉತ್ಪ್ರೇಕ್ಷೆಯಿಂದ ಕೂಡಿರಬಹುದಲ್ಲವೆ ಎನ್ನುವ ಪ್ರಶ್ನೆ ಇರಬೇಕು
- ರೋಗ ಹರಡುತ್ತಿರುವುದರ ಬಗ್ಗೆ, ರೋಗಕ್ಕೆ ತುತ್ತಾದವರ ಬಗ್ಗೆ, ರೋಗದ ಬಗ್ಗೆ ಹೊರಬರುವಂತಹ ಮಾಹಿತಿಗಳ ಮೂಲ, ಕಾರಣಗಳತ್ತವೂ ಗಮನ ಹರಿಸುವುದು ಮುಖ್ಯ
- ರೋಗದ ಬಗ್ಗೆ ವೈದ್ಯವಲಯಗಳಿಂದ ಬರುವಂತಹ ಸೂಚನೆ, ನಿಯಮಗಳನ್ನು ನಂಬಿ ಆತಂಕವಿಲ್ಲದೆ ಪಾಲಿಸುವುದು ಒಳ್ಳೆಯದು
- ನಿದ್ದೆ, ಊಟ, ವಿಶ್ರಾಂತಿ, ವ್ಯಾಯಾಮ, ಮನರಂಜನೆಯ ಅವಧಿಗಳನ್ನು ಗುರುತಿಸಿಟ್ಟುಕೊಳ್ಳುವುದರಿಂದ ನೆಮ್ಮದಿಯ ಸ್ವಭಾವಗಳು ಬಲಗೊಳ್ಳುತ್ತವೆ
- ರೋಗದ ಸಾಂಕ್ರಾಮಿಕ ಲಕ್ಷಣಗಳ ಬಗ್ಗೆ ಲಭ್ಯವಿರುವ ಮಾಹಿತಿಗಳು, ನಿಯಂತ್ರಣದ ವಿಧಗಳು, ಚಿಕಿತ್ಸೆಯ ಮಾದರಿಗಳ ಬಗ್ಗೆ ನಂಬಲು ಅರ್ಹವಾದಂತಹ ವೈಜ್ಞಾನಿಕ ವೈದ್ಯ ಮೂಲಗಳಿಂದ ಬಂದಿರುವುದರ ಬಗ್ಗೆ ತಿಳಿವಳಿಕೆ ಹೆಚ್ಚಿಸಿಕೊಳ್ಳಬೇಕು
- ಗಿಡಮೂಲಿಕೆ, ಹಣ್ಣು-ಕಾಯಿಗಳ ರಸ, ಪಶುಪಕ್ಷಿಗಳ ವಿಸರ್ಜನೆ, ಭೂ ಮಂತ್ರಗಳ ಜಾಲದತ್ತ ಸುಳಿಯದಿರುವುದೇ ಲೇಸು.

(ಲೇಖಕರು: ಮನೋವಿಜ್ಞಾನಿ)



ಮಾನಸಿಕ ಒತ್ತಡ ನೀಗಿಸುವ ಹವ್ಯಾಸ

ಮನಸ್ವಿ

ಕೊರೊನಾ ದಿನಗಳು ಆರಂಭವಾದಾಗಿನಿಂದ ಜನರಲ್ಲಿ ಒತ್ತಡ, ಖಿನ್ನತೆ ಹಾಗೂ ಬೇಸರದಂತಹ ಮಾನಸಿಕ ಸಮಸ್ಯೆಗಳು ಹೆಚ್ಚುತ್ತಿವೆ. ಅದರಲ್ಲೂ ಈ ಲಾಕ್‌ಡೌನ್ ಎನ್ನುವುದು ನಾಲ್ಕು ಗೋಡೆಗಳ ಮಧ್ಯೆ ಕುಳಿತ ಜನರಲ್ಲಿ ಇನ್ನಷ್ಟು ಒತ್ತಡ ಹೆಚ್ಚುವಂತೆ ಮಾಡಿದೆ. ಹಲವರಿಗೆ ಮನೆಯಿಂದಲೇ ಕೆಲಸ ಮಾಡುವ ಅವಕಾಶವಿದ್ದರೂ ಬಿಡುವಿನ ವೇಳೆಯಲ್ಲಿ ಬೇಸರ ಕಾಡುತ್ತಿದೆ. ಆ ಕಾರಣಕ್ಕೆ ತಮ್ಮ ಹಿಂದಿನ ಹವ್ಯಾಸಗಳಿಗೆ ಮರುಜೀವ ಕೊಡುತ್ತಿದ್ದಾರೆ. ಆ ಮೂಲಕ ಬೇಸರ, ದುಃಖ, ನೋವನ್ನು ಮರೆಯುವ ಪ್ರಯತ್ನ ಮಾಡುತ್ತಿದ್ದಾರೆ.

ಕಳೆದ ಬಾರಿ ಲಾಕ್‌ಡೌನ್‌ನಲ್ಲಿ ಕುಕಿಂಗ್, ಡ್ರಾಯಿಂಗ್ ಹಾಗೂ ಗಾರ್ಡನಿಂಗ್ ಮಾಡುವ ಮೂಲಕ ಬೇಸರ ನೀಗಿಸಿಕೊಂಡಿದ್ದರು. ಅಲ್ಲದೇ ಇದು ಮಾನಸಿಕವಾಗಿ ಕುಗ್ಗಿದ ಜನರಲ್ಲಿ ಹೊಸ ಚೈತನ್ಯ ಮೂಡಿಸಲು ಸಹಕಾರಿಯಾಗಿತ್ತು. ಇದರೊಂದಿಗೆ ಅಂತರ್ಜಾಲದಲ್ಲಿ ತಡಕಾಡಿ ಬ್ರೆಡ್, ಕೇಕ್ ಮಾಡುವುದು, ಟೈ ಡೈ ಮಾಡುವುದನ್ನು ಕಲಿತಿದ್ದರು. ತಮ್ಮಲ್ಲಿರುವ ಸುಪ್ತ ಪ್ರತಿಭೆಗಳನ್ನು ಫೇಸ್‌ಬುಕ್, ವಾಟ್ಸ್‌ಆ್ಯಪ್ ಸ್ಟೇಟಸ್‌ಗಳಲ್ಲಿ ಹಂಚಿಕೊಂಡು ಖುಷಿ ಪಟ್ಟಿದ್ದರು.

ಈಗ ಮತ್ತೆ ಕೊರೊನಾ ಕಾರಣದಿಂದ ಲಾಕ್‌ಡೌನ್ ವಿಧಿಸಲಾಗಿದೆ. ಈ ಬಾರಿ ಸಾವು– ನೋವು ಹೆಚ್ಚಿದ್ದು ಜನರಲ್ಲಿ ಒತ್ತಡ, ಖಿನ್ನತೆಯ ಜೊತೆಗೆ ಭಯವೂ ಹೆಚ್ಚಿದೆ. ಮನೆಯಲ್ಲೇ ಇದ್ದು ಸುರಕ್ಷತೆಯ ಮಾರ್ಗಗಳೊಂದಿಗೆ ಒಂದಿಷ್ಟು ಹೊಸ ಹವ್ಯಾಸಗಳನ್ನು ರೂಢಿಸಿಕೊಂಡರೆ ಮಾನಸಿಕ ನೆಮ್ಮದಿ ಹೆಚ್ಚಿಸಿಕೊಳ್ಳುವ ಜೊತೆಗೆ ಆತಂಕ, ಖಿನ್ನತೆಯನ್ನೂ ದೂರ ಮಾಡಿಕೊಳ್ಳಬಹುದು. ಹೊಸ ಹೊಸ ಕೌಶಲಗಳನ್ನು ಕಲಿಯಲು ನೆರವಾಗಲು ಅಂತರ್ಜಾಲದಲ್ಲಿ ಕೆಲವೊಂದು ವೆಬ್‌ಸೈಟ್‌ಗಳಿವೆ. ಅಲ್ಲದೇ ಯೂಟ್ಯೂಬ್ ಚಾನೆಲ್‌ಗಳನ್ನು ನೋಡಿಯೂ ಕಲಿಯಬಹುದು. ಇದರಿಂದ ಮನಸ್ಸಿಗೆ ಖುಷಿ ಸಿಗುವುದಲ್ಲದೇ ಹೊಸ ಹೊಸ ಸಂಗತಿ ಹಾಗೂ ಹವ್ಯಾಸಗಳನ್ನು ರೂಢಿಸಿಕೊಂಡ ಹಾಗೆ ಆಗುತ್ತದೆ.

ಸಂಗೀತ ಉಪಕರಣಗಳನ್ನು ನುಡಿಸುವುದು: ಗಿಟಾರ್, ಪಿಯಾನೊ ನುಡಿಸುವುದನ್ನು ಕಲಿಯುವುದು ಹಲವರ ಕನಸು. ಅದಕ್ಕಾಗಿ ತರಗತಿಗೇ ಹೋಗಬೇಕು ಎಂದೇನಿಲ್ಲ. ಅದನ್ನ ಕಲಿಸಲೆಂದೇ ಆನ್‌ಲೈನ್ ಸೈಟ್‌ಗಳಿವೆ. ಸಂಗೀತ ಉಪಕರಣಗಳನ್ನು ನುಡಿಸುವುದನ್ನು ಕಲಿಯುವುದರಿಂದ ಮನಸ್ಸಿಗೆ ಖುಷಿ ಸಿಗುವುದಲ್ಲದೇ ಖಿನ್ನತೆ, ಬೇಸರ ಕಳೆಯಲು ಇದರಿಂದ ಸಾಧ್ಯವಾಗುತ್ತದೆ.

ಪೇಂಟಿಂಗ್ ಹಾಗೂ ಡ್ರಾಯಿಂಗ್: ಡ್ರಾಯಿಂಗ್ ಮಾಡುವುದು, ಪೇಂಟಿಂಗ್ ಮಾಡುವುದು ಎಲ್ಲರಿಗೂ ಇಷ್ಟವಾಗುತ್ತದೆ. ಪೇಂಟಿಂಗ್‌ನಲ್ಲಿ ವಿವಿಧ ಬಗೆಯ ಹಾಗೂ ಇನ್ನಷ್ಟು ಕ್ರಿಯಾತ್ಮಕತೆಯನ್ನು ಕಲಿಯಲು ಕೆಲವೊಂದು ಆನ್‌ಲೈನ್ ಸೈಟ್‌ಗಳಿವೆ. ಇವುಗಳಲ್ಲಿ ವಾಟರ್‌ಕಲರ್ ಪೇಂಟಿಂಗ್, ಡ್ರಾಯಿಂಗ್ ಹಾಗೂ ಕ್ಯಾಲಿಗ್ರಫಿಗಳನ್ನು ಕಲಿಯಬಹುದು.

ಬಾರ್ಟೆಂಡಿಂಗ್ ಹಾಗೂ ಮಿಶ್ರಣಶಾಸ್ತ್ರ: ಬಾರ್ಟೆಂಡಿಂಗ್ ಎನ್ನುವುದು ಸದ್ಯದ ಟ್ರೆಂಡ್. ಇದರಲ್ಲಿ ವೈನ್ ತಯಾರಿಸುವುದು ಮುಂತಾದವುಗಳನ್ನು ಕಲಿಯಬಹುದು. ಇದು ಹವ್ಯಾಸದೊಂದಿಗೆ ಹಣ ಗಳಿಕೆಗೆ ದಾರಿ ಮಾಡಿಕೊಡುತ್ತದೆ. ಮಿಶ್ರಣಶಾಸ್ತ್ರವೂ ಬಾರ್ಟೆಂಡಿಂಗ್‌ಗೆ ಸಂಬಂಧಿಸಿದ್ದಾಗಿದ್ದು ಇದು ಬೇಸರ ನಿವಾರಣೆಗೆ ಮಾರ್ಗವಾಗಿದೆ.

ಹೊಸ ಪ್ರಕಾರದ ನೃತ್ಯ ಕಲಿಕೆ: ನೃತ್ಯ ಮಾಡುವುದು ಕೂಡ ಹಲವರ ನೆಚ್ಚಿನ ಹವ್ಯಾಸಗಳಲ್ಲಿ ಒಂದು. ಹಿಪ್‌ಹಾಪ್, ಬೆಲ್ಲಿಯಂತಹ ಪಾಶ್ಚಾತ್ಯ ನೃತ್ಯ ಶೈಲಿಯನ್ನು ಕಲಿಸಲು ಕೆಲವೊಂದು ವೆಬ್‌ಸೈಟ್‌ಗಳಿವೆ. ಆ ಮೂಲಕ ಹೊಸ ಹೊಸ ಬಗೆಯ ನೃತ್ಯ ಪ್ರಕಾರಗಳನ್ನು ಮನೆಯಲ್ಲೇ ಕಲಿತು ಒತ್ತಡ ಹಾಗೂ ಬೇಸರ ನೀಗಿಸಿಕೊಳ್ಳಬಹುದು. ಅಲ್ಲದೇ ಮನೆಯವರಿಗೆ ಮನರಂಜನೆ ನೀಡಬಹುದು.

ಫೋಟೊಗ್ರಫಿ ಹಾಗೂ ಸಿನಿಮಾ: ಸಿನಿಮಾಕ್ಕೆ ಸಂಬಂಧಿಸಿ ಎಡಿಟಿಂಗ್, ಕ್ಯಾಮೆರಾ ಹಾಗೂ ಗ್ರಾಫಿಕ್ ವರ್ಕ್ ಮುಂತಾದವುಗಳನ್ನು ಕಲಿಸಲು ಕೆಲವೊಂದು ಯೂಟ್ಯೂಬ್ ಚಾನೆಲ್ ಹಾಗೂ ಆನ್‌ಲೈನ್ ಸೈಟ್‌ಗಳಿವೆ. ಅದಕ್ಕೆ ನಿಮಗೆ ಬೇಸಿಕ್ ಡಿಎಸ್‌ಎಲ್‌ಆರ್ ಕ್ಯಾಮೆರಾ, ಐಫೋನ್ ಟ್ರೈಪಾಡ್ ಹಾಗೂ ಸಿಸ್ಟಂ ಇದ್ದರೆ ಸಾಕು. ಇದು ಸಮಯ ಕಳೆಯಲು ನೆರವಾಗುತ್ತದೆ. ಜೊತೆಗೆ ಹೊಸ ಹವ್ಯಾಸವನ್ನೂ ರೂಢಿಸಿಕೊಂಡ ಹಾಗೆ ಆಗುತ್ತದೆ.

ಕಸೂತಿ ಹಾಗೂ ಕರಕುಶಲ: ಬಟ್ಟೆಯಲ್ಲಿ ಕಸೂತಿ ಮಾಡುವುದು, ಆಭರಣ ತಯಾರಿಕೆ, ಕರಕುಶಲ ವಸ್ತುಗಳ ತಯಾರಿಕೆಯನ್ನು ಕಲಿಸಲು ಆನ್‌ಲೈನ್ ತರಗತಿಗಳಿವೆ. ಇದಕ್ಕೆ ಮನೆಯಲ್ಲೇ ಸಿಗುವ ವಸ್ತುಗಳನ್ನು ಬಳಸಿಕೊಳ್ಳಬಹುದು. ಇದು ಮಾನಸಿಕ ಒತ್ತಡವನ್ನು ಕಡಿಮೆ ಮಾಡುವುದಲ್ಲದೇ ಗಳಿಕೆಗೂ ದಾರಿಯಾಗುತ್ತದೆ.

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ಬಹುಪದೋಕ್ತಿಯ ಶೂನ್ಯತೆಯ ರೇಖಾಗಣಿತೀಯ ಅರ್ಥ

ಗಣಿತ


ಎಸ್ಸೆಸ್ಸೆಲ್ಸಿ

ಸಾಮಾನ್ಯವಾಗಿ ಒಂದು ರೇಖಾತ್ಮಕ ಬಹುಪದೋಕ್ತಿ $ax + b$ ಗೆ $y = ax + b$ ಯ ನಕ್ಷೆಯು ಒಂದು ಸರಳರೇಖೆಯಾಗಿದ್ದು, ಅದು x ಅಕ್ಷವನ್ನು ನಿಖರವಾಗಿ ಬಿಂದುವಿನಲ್ಲಿ ಛೇದಿಸುತ್ತದೆ. ಆದ್ದರಿಂದ ಒಂದು ರೇಖಾತ್ಮಕ ಬಹುಪದೋಕ್ತಿ $ax + b$ ಎಂಬುದು ಕೇವಲ ಬಿಂದು ಒಂದು ಶೂನ್ಯತೆಯನ್ನು ಹೊಂದಿದ್ದು, ಇದು $y = ax + b$ ನಕ್ಷೆಯು x- ಅಕ್ಷವನ್ನು ಛೇದಿಸುವ ಬಿಂದುವಿನ x ನಿರ್ದೇಶಾಂಕವಾಗಿರುತ್ತದೆ.

$y = 2x-3$ ಒಂದು ಸರಳ ರೇಖೆಯಾಗಿರುತ್ತದೆ. ನಕ್ಷೆಯ x- ಅಕ್ಷವನ್ನು ಬಿಂದುವಿನಲ್ಲಿ ಛೇದಿಸುತ್ತದೆ. ಇದು ಶೂನ್ಯತೆಯಾಗುತ್ತದೆ. ಈ ಸಂಗತಿಯು ಎಲ್ಲಾ ವರ್ಗ ಬಹುಪದೋಕ್ತಿಗಳಿಗೂ ಸರಿ ಹೊಂದುತ್ತದೆ. ಅಂದರೆ ಒಂದು ವರ್ಗ $ax2 + bx + c$ ಯ ಶೂನ್ಯತೆಗಳು ನಿಖರವಾಗಿಯೂ $y = ax2 + bx + c$ ಯನ್ನು ಪ್ರತಿನಿಧಿಸುವ ಪರವಲಯವು x- ಅಕ್ಷವನ್ನು ಛೇದಿಸುವ ಬಿಂದುಗಳ x- ನಿರ್ದೇಶಾಂಕಗಳಾಗಿರುತ್ತದೆ.

$y = ax^2 + bx + c$ ಯ ನಕ್ಷೆಯ ಆಕಾರದ ಬಗ್ಗೆ ಸಂಬಂಧಿಸಿದಂತೆ ನಮ್ಮ ಈ ಹಿಂದಿನ ವೀಕ್ಷಣೆಯಿಂದ ಕೆಳಗಿನ ಮೂರು ಪ್ರಕರಣಗಳ ಸಾಧ್ಯತೆಯನ್ನು ಕಾಣಬಹುದು.


ಪ್ರಕರಣ 1: ಇಲ್ಲಿ x- ಅಕ್ಷವನ್ನು ನಕ್ಷೆಯು ಎರಡು ಪ್ರತ್ಯೇಕ ಬಿಂದುಗಳಾದ A ಮತ್ತು A1 ಗಳಲ್ಲಿ ಛೇದಿಸುತ್ತದೆ.




ಈ ಪ್ರಕರಣದಲ್ಲಿ A ಮತ್ತು A1 ಗಳ ನಿರ್ದೇಶಾಂಕಗಳು ವರ್ಗ ಬಹುಪದೋಕ್ತಿ $ax2 + bx + c$ ಎರಡು ಶೂನ್ಯತೆಗಳಾಗಿವೆ.

ಪ್ರಕರಣ (2): ಇಲ್ಲಿ ನಕ್ಷೆಯು x ಅಕ್ಷವನ್ನು ನಿಖರವಾಗಿ ಒಂದು ಬಿಂದುವಿನಲ್ಲಿ ಛೇದಿಸುತ್ತದೆ. ಅಂದರೆ ಪರಸ್ಪರ ಐಕ್ಯವಾಗುವ ಎರಡು ಬಿಂದುಗಳು. ಆದರಿಂದ ಪ್ರಕರಣ (1) ರ ಎರಡು ಬಿಂದುಗಳಾದ A ಮತ್ತು A1 ಗೆ ಇಲ್ಲಿ ಪರಸ್ಪರ ಐಕ್ಯವಾಗಿ ಒಂದು ಬಿಂದು A ಗೆ ಆಗುತ್ತದೆ.

ಈ ಪ್ರಕರಣದಲ್ಲಿ A ಬಿಂದುವಿನ - ನಿರ್ದೇಶಾಂಕವು ವರ್ಗ ಬಹುಪದೋಕ್ತಿ $ax2 + bx + c$ ಒಂದೇ ಒಂದು ಶೂನ್ಯತೆಯಾಗಿರುತ್ತದೆ.



ಪ್ರಕರಣ (3): ಇಲ್ಲಿ ನಕ್ಷೆಯು ಸಂಪೂರ್ಣವಾಗಿ x- ಅಕ್ಷದ ಮೇಲ್ಭಾಗದಲ್ಲಿರುತ್ತದೆ ಅಥವಾ ಸಂಪೂರ್ಣವಾಗಿ x- ಅಕ್ಷದ ಕೆಳಭಾಗದಲ್ಲಿರುತ್ತದೆ. ಆದ್ದರಿಂದ ಅದು x - ಅಕ್ಷವನ್ನು ಯಾವುದೇ ಬಿಂದುವಿನಲ್ಲಿ ಛೇದಿಸುವುದಿಲ್ಲ.



ಈ ಪ್ರಕರಣದಲ್ಲಿ ವರ್ಗ ಬಹುಪದೋಕ್ತಿ $ax^2 + bx + c$ ಯು ಯಾವುದೇ ಶೂನ್ಯತೆಯನ್ನು ಹೊಂದಿರುವುದಿಲ್ಲ. ಆದ್ದರಿಂದ ಒಂದು ವರ್ಗ ಬಹುಪದೋಕ್ತಿಯು ಎರಡು ಪ್ರತ್ಯೇಕ ಶೂನ್ಯತೆಗಳನ್ನು ಹೊಂದಿರಬಹುದು ಅಥವಾ ಎರಡು ಸಮನಾದ ಶೂನ್ಯತೆಗಳನ್ನು ಅಥವಾ ಶೂನ್ಯತೆಯನ್ನು ಹೊಂದಿಲ್ಲದೆ ಇರಬಹುದು.

ಇದೇ ರೀತಿಯಲ್ಲಿ ಘನ ಬಹುಪದೋಕ್ತಿಗೆ ಗರಿಷ್ಠ 3 ಶೂನ್ಯಗಳಿರುವುದನ್ನು ನಾವು ತಿಳಿಯಬಹುದು.

ಸಾಮಾನ್ಯವಾಗಿ n ಡಿಗ್ರಿಯುಳ್ಳ ಒಂದು ಬಹುಪದೋಕ್ತಿ $p(x)$ ಯನ್ನು ನೀಡಿದಾಗ $y = p(x)$ ದ ನಕ್ಷೆಯು x- ಅಕ್ಷವನ್ನು ಗರಿಷ್ಠ n ಬಿಂದುಗಳಲ್ಲಿ ಛೇದಿಸುತ್ತದೆ.

(ಮುಂದುವರಿಯುವುದು)

ಹ್ಯಾಲೋಜನ್‌ನ ವಿನಿಮಯ

ರಸಾಯನಶಾಸ್ತ್ರ

ದ್ವಿತೀಯ ಪಿಯುಸಿ

ಕೆಲವೊಮ್ಮೆ ಆಲ್ಕೈಲ್ ಕ್ಲೋರೈಡ್ ಅಥವಾ ಬ್ರೊಮೈಡ್ ಅನ್ನು ಶುಷ್ಕ ಅಸಿಟೋನ್‌ನಲ್ಲಿ NaI ನೊಂದಿಗೆ ಕ್ರಿಯೆ ನಡೆಸಿ ಆಲ್ಕೈಲ್ ಅಯೊಡೈಡ್‌ಗಳನ್ನು ತಯಾರಿಸುತ್ತಾರೆ. ಈ ಕ್ರಿಯೆಯನ್ನು ಫಿಂಕಲ್‌ಸ್ಟೀನ್ ಕ್ರಿಯೆ ಎನ್ನುವರು.

$$R - X + NaI \rightarrow R - I + NaX$$

$$(X = Cl, Br)$$

ಹೀಗೆ ಬಿಡುಗಡೆಯಾದ NaCl ಅಥವಾ NaBr ಶುಷ್ಕ ಅಸಿಟೋನ್‌ನಲ್ಲಿ ಒತ್ತರಿಸಲ್ಪಡುವುದು. ಲಿಚಟೀಯರ್‌ನ ತತ್ವದ ಪ್ರಕಾರ ಇದು ಮುಮ್ಮುಖ ಕ್ರಿಯೆಯನ್ನು ಸರಾಗಗೊಳಿಸುವುದು.

ಆಲ್ಕೈಲ್ ಕ್ಲೋರೈಡ್ ಅಥವಾ ಬ್ರೊಮೈಡ್‌ಗಳನ್ನು ಲೋಹೀಯ ಫ್ಲೋರೈಡ್‌ಗಳಾದ AgF, HgF_2, CoF_2 ಅಥವಾ ಸಾನಿಧ್ಯದಲ್ಲಿ ಕಾಯಿಸಿ, ಆಲ್ಕೈಲ್ ಫ್ಲೋರೈಡ್‌ಗಳನ್ನು ಉತ್ತಮವಾಗಿ ಸಂಶ್ಲೇಷಿಸಬಹುದು. ಈ ರಾಸಾಯನಿಕ ಕ್ರಿಯೆಯನ್ನು ಸ್ವಾರ್ಟ್ಸ್ ಕ್ರಿಯೆ ಎನ್ನುವರು.

$$H_3C - Br + AgF \rightarrow H_3C - F + AgBr$$

ಭೌತಿಕ ಲಕ್ಷಣಗಳು

1) ಶುದ್ಧವಾದ ಆಲ್ಕೈಲ್ ಹಾಲೈಡ್‌ಗಳು ವರ್ಗ ರಹಿತ. ಆದರೆ ಬ್ರೊಮೈಡ್‌ಗಳು ಮತ್ತು ಅಯೊಡೈಡ್‌ಗಳು ಬೆಳಕಿಗೆ ತೆರೆದಿಟ್ಟಾಗ ಬಣ್ಣವನ್ನು ಪಡೆಯುತ್ತವೆ. ಆವಿಯಾಗುವ ಹ್ಯಾಲೋಜನ್ ಸಂಯುಕ್ತಗಳು ಸುವಾಸನೆಯನ್ನು ಹೊಂದಿವೆ.

2) ಕರಗುವ ಬಿಂದು ಮತ್ತು ಕುದಿಯುವ ಬಿಂದು

ಎ) ಕೊಠಡಿಯ ಉಷ್ಣತೆಯಲ್ಲಿ ಮಿಥೈಲ್ ಕ್ಲೋರೈಡ್, ಮಿಥೈಲ್ ಬ್ರೊಮೈಡ್, ಈಥೈಲ್ ಕ್ಲೋರೈಡ್ ಮತ್ತು ಕೆಲವು ಕ್ಲೋರೋ ಫ್ಲೋರೋ ಮಿಥೈನ್ ಅನಿಲಗಳು, ಉನ್ನತಮಟ್ಟದ ಸಂಯುಕ್ತಗಳು ದ್ರವ ಅಥವಾ ಘನವಾಗಿರುತ್ತವೆ.


ಬಿ) ಕ್ಲೋರೈಡ್, ಬ್ರೊಮೈಡ್ ಮತ್ತು ಅಯೊಡೈಡ್‌ಗಳ ಕುದಿಯುವ ಬಿಂದು ತುಲನಾತ್ಮಕ ಅಣುರಾಶಿಯುಳ್ಳ ಹೈಡ್ರೋ ಕಾರ್ಬನ್‌ಗಳಿಗಿಂತ ಗಣನೀಯವಾಗಿ ಹೆಚ್ಚಾಗಿರುತ್ತದೆ.

ಸಿ) ಒಂದೇ ಆಲ್ಕೈಲ್ ಗುಂಪನ್ನು ಹೊಂದಿರುವ ಆಲ್ಕೈಲ್ ಹ್ಯಾಲೈಡ್‌ಗಳ ಕುದಿಯುವ ಬಿಂದುವಿನ ಇಳಿಕೆ ಕ್ರಮವು ಹೀಗಿದೆ. $RI > RBr > RCI > RF$

ಇದು ಏಕೆಂದರೆ, ಹ್ಯಾಲೋಜನ್ ಪರಮಣುವಿನ ಗಾತ್ರ ಮತ್ತು ದ್ರವ್ಯರಾಶಿ ಹೆಚ್ಚಿದಂತೆ ವಾಂಡರ್‌ವಾಲ್ ಬಲದ ಪರಿಣಾಮವು ಹೆಚ್ಚುವುದು.


ಡಿ) ಸಮಾಂಗೀಯ ಹ್ಯಾಲೋ ಆಲ್ಕೈನ್‌ಗಳ ಕುದಿಯುವ ಬಿಂದುಗಳು ಆಲ್ಕೇನ್‌ಗಳು ಕವಲುಗಳು ಹೆಚ್ಚಿದಂತೆ ಕಡಿಮೆಯಾಗುವುದು.

ಉದಾಹರಣೆ:



375 364 346

ಇ) ಸಮಾಂಗೀಯ ಡೈ ಹ್ಯಾಲೋ ಬೆಂಝೀನ್‌ಗಳ ಕುದಿಯುವ ಬಿಂದು ಸರಿಸುಮಾರು ಒಂದೇ ಆಗಿರುತ್ತದೆ. ಆದಾಗ್ಯೂ ಆರ್ಥೋ ಮತ್ತು ಮೆಟಾ ಸಮಾಂಗಿಗಳಿಗೆ ಹೋಲಿಸಿದರೆ ಪ್ಯಾರಾ ಸಮಾಂಗಿಗಳ ಕುದಿಯುವ ಬಿಂದು ಹೆಚ್ಚು.



ಕುದಿಯುವ ಬಿಂದು/K	453	446	448
ದ್ರವನ ಬಿಂದು/K	256	249	323

ಸಾಂದ್ರತೆ

ಹೈಡ್ರೋ ಕಾರ್ಬನ್ ಸಾಧಿತಗಳಾದ ಬ್ರೋಮೊ, ಅಯೋಡೊ ಮತ್ತು ಪಾಲೀ ಕ್ಲೋರೋ ಉತ್ಪನ್ನಗಳು ನೀರಿಗಿಂತ ಭಾರವಾಗಿವೆ. ಕಾರ್ಬನ್ ಪರಮಾಣುಗಳು ಹ್ಯಾಲೋಜನ್ ಪರಮಾಣುಗಳ ಸಂಖ್ಯೆ ಮತ್ತು ಅವುಗಳ ಪರಮಾಣು ರಾಶಿ ಹೆಚ್ಚಿದಂತೆ ಸಾಂದ್ರತೆಯು ಹೆಚ್ಚುತ್ತದೆ.

ಕರಗುವಿಕೆ

ಎ) ಹ್ಯಾಲೋ ಆಲ್ಕೇನ್‌ಗಳು ನೀರಿನಲ್ಲಿ ಅತ್ಯಂತ ಅಲ್ಪ ಪ್ರಮಾಣದಲ್ಲಿ ಕರಗುತ್ತವೆ. ಹ್ಯಾಲೋ ಆಲ್ಕೇನ್‌ಗಳನ್ನು ನೀರಿನಲ್ಲಿ ಕರಗುವಂತೆ ಮಾಡಲು ಹ್ಯಾಲೋಆಲ್ಕೇನ್ ಅಣುಗಳ ನಡುವಿನ ಆಕರ್ಷಣಾ ಬಲವನ್ನು ತಡೆದು ಮತ್ತು ನೀರಿನ ಅಣುವಿನಲ್ಲಿರುವ ಹೈಡ್ರೋಜನ್ ಬಂಧವನ್ನು ಒಡೆಯಬೇಕಾಗುತ್ತದೆ. ಇದಕ್ಕೆ ಶಕ್ತಿಯ ಅಗತ್ಯವಿರುತ್ತದೆ. ಹ್ಯಾಲೋ ಆಲ್ಕೇನ್ ಮತ್ತು ನೀರಿನ ಅಣುವಿನ ನಡುವೆ ಹೊಸ ಆಕರ್ಷಣೆ ಉಂಟಾದಂತೆ ಕಡಿಮೆ ಶಕ್ತಿ ಬಿಡುಗಡೆಯಾಗುವುದು. ಈ ಬಂಧವು ನೀರಿನಲ್ಲಿರುವ ಮೂಲ ಹೈಡ್ರೋಜನ್ ಬಂಧದಷ್ಟು ಪ್ರಬಲವಾಗಿಲ್ಲ. ಹಾಗಾಗಿ ನೀರಿನಲ್ಲಿ ಹ್ಯಾಲೋ ಆಲ್ಕೇನ್‌ಗಳ ವಿಲೀನತೆ ಕಡಿಮೆ.

ಬಿ) ಆದರೆ ಹ್ಯಾಲೋ ಆಲ್ಕೇನ್‌ಗಳು ಸಾವಯವ ದ್ರಾವಕದಲ್ಲಿ ಕರಗುತ್ತದೆ. ಏಕೆಂದರೆ ಹ್ಯಾಲೋ ಆಲ್ಕೇನ್ ಮತ್ತು ಸಾವಯವ ದ್ರಾವಕಗಳ ನಡುವಿನ ಹೊಸ ಅಂತರಾಣ್ವಿಕ ಆಕರ್ಷಣಾ ಬಲವು ಸರಿ ಸುಮಾರು ಒಂದೇ ಆಗಿರುವುದರಿಂದ, ಹ್ಯಾಲೋಆಲ್ಕೇನ್ ಮತ್ತು ದ್ರಾವಕದ ಅಣುಗಳನ್ನು ಸುಲಭವಾಗಿ ಒಡೆಯಬಹುದು.

(ಮುಂದುವರಿಯುವುದು)

ಪ್ರಜಾವಾಣಿ ನೋಡಿಯೊ

ದ್ವಿತೀಯ ಪಿಯುಸಿ ರಸಾಯನಶಾಸ್ತ್ರ ವಿಭಾಗದ ‘ಸಾಲಿಡ್ ಸ್ಟೇಟ್_3’ ಪಾಠವನ್ನು ಇಂಗ್ಲಿಷ್‌ನಲ್ಲಿ ಓದಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ.

https://bit.ly/3gYzje4



ಐಪಿಎಲ್: ವರುಣ್ ಚಕ್ರವರ್ತಿ, ಸಂದೀಪ್‌ಗೆ ಸೋಂಕು; ಸಿಎಸ್‌ಕೆಯಲ್ಲಿ 'ಪರೀಕ್ಷೆ' ಗೊಂದಲ

ಬಯೊಬಬಲ್‌ನಲ್ಲಿ ಕೋವಿಡ್ ಆತಂಕ

ನವದೆಹಲಿ (ಪಿಟಿಐ): ಇಬ್ಬರು ಆಟಗಾರರು ಸೋಂಕಿಗೆ ಒಳಗಾದ ಹಿನ್ನೆಲೆಯಲ್ಲಿ ರಾಯಲ್ ಚಾಲೆಂಜರ್ಸ್ ಬೆಂಗಳೂರು (ಆರ್‌ಸಿಬಿ) ಮತ್ತು ಕೋಲ್ಕತ್ತ ನೈಟ್ ರೈಡರ್ಸ್ (ಕೆಕೆಆರ್) ಪಂದ್ಯ ರದ್ದಾದ ಬೆನ್ನಲ್ಲೇ ಇಂಡಿಯನ್ ಪ್ರೀಮಿಯರ್ ಲೀಗ್ (ಐಪಿಎಲ್) ಕ್ರಿಕೆಟ್ ಟೂರ್ನಿಯ ಬಯೊಬಬಲ್‌ನಲ್ಲಿ ಕೋವಿಡ್ ಆತಂಕ ಮೂಡಿದೆ.

ಗಾಯಕ್ಕೆ ಚಿಕಿತ್ಸೆ ಪಡೆಯಲು ಬಯೊ ಬಬಲ್‌ನಿಂದ ಹೊರಗೆ ಹೋಗಿದ್ದರು ಎನ್ನಲಾದ ಕೆಕೆಆರ್ ತಂಡದ ಸ್ಪಿನ್ನರ್ ವರುಣ್ ಚಕ್ರವರ್ತಿ ಮತ್ತು ಮಧ್ಯಮ ವೇಗಿ ಸಂದೀಪ್ ವಾರಿಯರ್‌ಗೆ ಕೋವಿಡ್ ಇರುವುದು ಸೋಮವಾರ ದೃಢಪಟ್ಟಿತ್ತು. ಹೀಗಾಗಿ ಆರ್‌ಸಿಬಿ ಮತ್ತು ಕೆಕೆಆರ್ ನಡುವಿನ ಪಂದ್ಯವನ್ನು ಮುಂದೂಡಲಾಗಿತ್ತು. ಈ ಪಂದ್ಯವನ್ನು ಟೂರ್ನಿಯ ಕೊನೆಯ ಘಟ್ಟದಲ್ಲಿ ಆಯೋಜಿಸುವ ಸಾಧ್ಯತೆ ಇದೆ.

'ನಾಲ್ಕು ದಿನಗಳಲ್ಲಿ ನಡೆದ ಮೂರನೇ ಸುತ್ತಿನ ಪರೀಕ್ಷೆಯಲ್ಲಿ ವರುಣ್ ಮತ್ತು ಸಂದೀಪ್ ಅವರಿಗೆ ಸೋಂಕು ಇರುವುದು ದೃಢಪಟ್ಟಿತ್ತು. ಉಳಿದ ಎಲ್ಲ ಆಟಗಾರರ ವರದಿ ನೆಗೆಟಿವ್ ಬಂದಿದೆ. ಸಂದೀಪ್ ಮತ್ತು ವರುಣ್ ಅವರನ್ನು ಪ್ರತ್ಯೇಕವಾಸದಲ್ಲಿ ಇರಿಸಲಾಗಿದೆ. ತಂಡದ ಇತರ ಆಟಗಾರರು ಕಠಿಣ ಕ್ವಾರಂಟೈನ್‌ಗೆ ಒಳಗಾಗಿದ್ದಾರೆ' ಎಂದು ಪ್ರಕಟಣೆ ತಿಳಿಸಿದೆ.

ಇದೇ ವೇಳೆ ಚೆನ್ನೈ ಸೂಪರ್ ಕಿಂಗ್ಸ್ ತಂಡದ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಕಾಶಿ ವಿಶ್ವನಾಥನ್, ಬೌಲಿಂಗ್ ಕೋಚ್ ಎಲ್.ಬಾಲಾಜಿ ಮತ್ತು ತಂಡದ ಬಸ್ ಕ್ಲೀನರ್‌ಗೆ ಸೋಂಕು ಇರುವುದು ಭಾನುವಾರ ದೃಢಪಟ್ಟಿದೆ.

'ಪ್ರತಿ ಪಂದ್ಯದಲ್ಲೂ ತಂಡದ ಡಗ್ ಔಟ್‌ನಲ್ಲಿ ಕಾಣಿಸಿಕೊಳ್ಳುವ ಬಾಲಾಜಿ ಅವರನ್ನು ಸೋಮವಾರ ಎರಡು ಆರ್‌ಟಿ–ಪಿಸಿಆರ್ ಪರೀಕ್ಷೆಗೆ ಒಳಪಡಿಸಲಾಗಿದ್ದು ಎರಡರಲ್ಲೂ ವರದಿ ಪಾಸಿಟಿವ್ ಬಂದಿದೆ. ಅವರನ್ನು ಪ್ರತ್ಯೇಕವಾಸದಲ್ಲಿ ಇರಿಸಲಾಗಿದೆ' ಎಂದು ಬಿಸಿಸಿಐ ಮೂಲಗಳು ತಿಳಿಸಿವೆ.

'ಬಾಲಾಜಿ ಅವರಲ್ಲಿ ಕೋವಿಡ್ ಕಾಣಿಸಿಕೊಂಡಿರುವುದರಿಂದ ದೆಹಲಿಯಲ್ಲಿ ಐಪಿಎಲ್ ಪಂದ್ಯಗಳನ್ನು ನಡೆಸುವುದು ಎಷ್ಟು ಸೂಕ್ತ ಎಂಬುದರ ಬಗ್ಗೆ ಚರ್ಚೆ ನಡೆದಿದೆ' ಎಂದೂ ಮೂಲಗಳು ತಿಳಿಸಿವೆ.

ಈ ನಡುವೆ ಮಂಗಳವಾರ ಮುಂಬೈ ಇಂಡಿಯನ್ಸ್ ಮತ್ತು ಹೈದರಾಬಾದ್ ನಡುವಿನ ಪಂದ್ಯಕ್ಕೆ ಆತಿಥ್ಯ ವಹಿಸಬೇಕಾಗಿರುವ ದೆಹಲಿಯ ಅರುಣ್ ಜೇಟ್ಲಿ ಕ್ರೀಡಾಂಗಣದ ಸಿಬ್ಬಂದಿಯಲ್ಲಿ ಸೋಂಕು ಕಾಣಿಸಿಕೊಂಡಿದೆ. ಆದರೆ ಸೋಂಕು ಇರುವ ಯಾರೂ ಕೆಲಸದಲ್ಲಿ ತೊಡಗಿಸಿಕೊಂಡಿಲ್ಲ ಎಂದು ಡಿಡಿಸಿಎ ಮುಖ್ಯಸ್ಥ ರೋಹನ್ ಜೇಟ್ಲಿ ಸ್ಪಷ್ಟಪಡಿಸಿದ್ದಾರೆ.

ಆಸ್ಟ್ರೇಲಿಯಾದ ಮೂವರು ಆಟಗಾರರು ಬಯೊಬಬಲ್ ತೊರೆದು ತವರಿಗೆ ಮರಳಿದ ನಂತರವೂ ಟೂರ್ನಿಯನ್ನು ಮುಂದುವರಿಸಲಾಗುವುದು ಎಂದು ಬಿಸಿಸಿಐ ಹೇಳಿತ್ತು. ಆದರೆ ಸೋಮವಾರ ನಡೆದಿರುವ ಬೆಳವಣಿಗೆಯಿಂದಾಗಿ ಟೂರ್ನಿ ಮುಂದುವರಿಯುವುದರ ಬಗ್ಗೆ ಮತ್ತೆ ಚರ್ಚೆ ಆರಂಭವಾಗಿದೆ.

'ವೈದ್ಯಕೀಯ ತಂಡವು ಕೆಕೆಆರ್ ಆಟಗಾರರ ಆರೋಗ್ಯದ ಮೇಲೆ ನಿಗಾ ಇರಿಸಿದ್ದು ಸತತವಾಗಿ ಸಂಪರ್ಕದಲ್ಲಿದೆ' ಎಂದು ಐಪಿಎಲ್ ಅಧಿಕಾರಿಗಳು ತಿಳಿಸಿದ್ದಾರೆ.



ನಾಯಕ ಏಯಾನ್ ಮಾರ್ಗನ್ (ಎಡ) ಜೊತೆ ವರುಣ್ ಚಕ್ರವರ್ತಿ –ಪಿಟಿಐ ಚಿತ್ರ

ಡೆಲ್ಲಿ ಕ್ಯಾಪಿಟಲ್ಸ್ ಪಾಳಯಕ್ಕೂ 'ಪರೀಕ್ಷೆ'?

ಕೋಲ್ಕತ್ತ ನೈಟ್ ರೈಡರ್ಸ್‌ನ ಕೊನೆಯ ಪಂದ್ಯ ಏಪ್ರಿಲ್ 29ರಂದು ಅಹಮದಾಬಾದ್‌ನಲ್ಲಿ ಡೆಲ್ಲಿ ಕ್ಯಾಪಿಟಲ್ಸ್ ವಿರುದ್ಧ ನಡೆದಿತ್ತು. ಈ ಹಿನ್ನೆಲೆಯಲ್ಲಿ ಇದೀಗ ಡೆಲ್ಲಿ ಪಾಳಯದಲ್ಲೂ ಆತಂಕ ಮೂಡಿದೆ.

'ಈಗ ಡೆಲ್ಲಿ ತಂಡದ ಆಟಗಾರರನ್ನೂ ಪರೀಕ್ಷೆಗೆ ಒಳಪಡಿಸಬೇಕಾಗಿದೆ. ವರುಣ್ ಚಕ್ರವರ್ತಿ ಮತ್ತು ಸಂದೀಪ್ ವಾರಿಯರ್ ಅವರ ಸಂಪರ್ಕಕ್ಕೆ ಬಂದವರು ಯಾರಿದ್ದಾರೆ ಎಂಬುದನ್ನು ಪತ್ತೆ ಮಾಡಬೇಕಾಗಿದೆ. ಇದಕ್ಕಾಗಿ ಪ್ರತ್ಯೇಕ ಆ್ಯಪ್ ಇದೆ' ಎಂದು ಬಿಸಿಸಿಐ ತಿಳಿಸಿದೆ. ಐಪಿಎಲ್ ನಿಯಮಾವಳಿಗಳ ಪ್ರಕಾರ ಸೋಂಕಿತರ ಸಂಪರ್ಕದಲ್ಲಿದ್ದ ವ್ಯಕ್ತಿಗಳನ್ನು 6 ದಿನಗಳು ಪ್ರತ್ಯೇಕವಾಸದಲ್ಲಿರಿಸಬೇಕು. ಒಂದು, ಮೂರು ಮತ್ತು 6ನೇ ದಿನ ಪರೀಕ್ಷೆ ಮಾಡಿಸಿಕೊಂಡು ನೆಗೆಟಿವ್ ವರದಿ ಬಂದರೆ ಮಾತ್ರ ತಂಡದೊಂದಿಗೆ ಸೇರಿಸಲಾಗುತ್ತದೆ.

ವರುಣ್, ಸಂದೀಪ್ ಆರೋಗ್ಯವಾಗಿದ್ದಾರೆ: ವೆಂಕಿ

ಅಹಮದಾಬಾದ್ (ಪಿಟಿಐ): ಕೊರೊನಾ ಸೋಂಕಿತರಾಗಿರುವ ವರುಣ್ ಚಕ್ರವರ್ತಿ ಹಾಗೂ ಸಂದೀಪ್ ವಾರಿಯರ್ ಅವರು ಆರೋಗ್ಯವಾಗಿದ್ದು, ಕ್ವಾರಂಟೈನ್ ಅವಧಿ ಮುಗಿದ ಬಳಿಕ ಐಪಿಎಲ್ ಪಂದ್ಯಗಳಿಗೆ ಲಭ್ಯರಾಗಲಿದ್ದಾರೆ ಎಂದು ಕೆಕೆಆರ್ ತಂಡದ ಮುಖ್ಯ ಕಾರ್ಯನಿರ್ವಹಣಾಧಿಕಾರಿ ವೆಂಕಿ ಮೈಸೂರು ವಿಶ್ವಾಸ ವ್ಯಕ್ತಪಡಿಸಿದ್ದಾರೆ.

'ಹ್ಯಾಟ್ರಿಕ್' ಕನಸಿನಲ್ಲಿ ಮುಂಬೈ

ಸನ್‌ರೈಸರ್ಸ್ ಹೈದರಾಬಾದ್ ವಿರುದ್ಧ ಪಂದ್ಯ ಇಂದು

ನವದೆಹಲಿ (ಪಿಟಿಐ): ಸತತ ಎರಡು ಜಯಗಳಿಂದಾಗಿ ಉತ್ಸಾಹದ ಚಿಲುಮೆಯಂತಾಗಿರುವ ಮುಂಬೈ ಇಂಡಿಯನ್ಸ್ ತಂಡ ಹ್ಯಾಟ್ರಿಕ್ ಗೆಲುವಿನ ನಿರೀಕ್ಷೆಯೊಂದಿಗೆ ಮಂಗಳವಾರ ಸನ್‌ರೈಸರ್ಸ್ ಹೈದರಾಬಾದ್ ಎದುರು ಸೆಣಸಲಿದೆ.

ಹಾಲಿ ಚಾಂಪಿಯನ್ನರು ಹಿಂದಿನ ಪಂದ್ಯದಲ್ಲಿ ಚೆನ್ನೈ ಸೂಪರ್ ಕಿಂಗ್ಸ್ ವಿರುದ್ಧ ನಾಲ್ಕು ವಿಕೆಟ್‌ಗಳಿಂದ ಗೆದ್ದಿದ್ದರು. ಬೃಹತ್ ಮೊತ್ತ ಬೆನ್ನತ್ತಿದ್ದ ತಂಡ ಕೀರನ್ ಪೊಲಾರ್ಡ್ ಅವರ ಏಕಾಂಗಿ ಹೋರಾಟದಿಂದ ಗೆಲುವು ಸಾಧಿಸಿತ್ತು. ಸತತ ಸೋಲುಗಳಿಂದ ಕಂಗೆಟ್ಟಿದ್ದು ಪಾಯಿಂಟ್ ಪಟ್ಟಿಯ ಕೊನೆಯ ಸ್ಥಾನದಲ್ಲಿರುವ ಸನ್‌ರೈಸರ್ಸ್ ಹೈದರಾಬಾದ್ ಹಿಂದಿನ ಪಂದ್ಯದಲ್ಲಿ ರಾಜಸ್ಥಾನ್ ರಾಯಲ್ಸ್‌ಗೆ 55 ರನ್‌ಗಳಿಂದ ಮಣಿದಿತ್ತು. ಇದು ಏಳು ಪಂದ್ಯಗಳಲ್ಲಿ ತಂಡದ ಆರನೇ ಸೋಲಾಗಿತ್ತು.

ಫಾರ್ಮ್‌ನಲ್ಲಿಲ್ಲದ ಡೇವಿಡ್ ವಾರ್ನರ್ ಬದಲಿಗೆ ಸನ್‌ರೈಸರ್ಸ್ ತಂಡದ ನಾಯಕತ್ವವನ್ನು ಕೇನ್ ವಿಲಿಯಮ್ಸನ್ ಅವರಿಗೆ ವಹಿಸಲಾಗಿದೆ. ಅವರ ನೇತೃತ್ವದಲ್ಲೂ ಜಯ ಸಾಧಿಸಲು ತಂಡಕ್ಕೆ ಸಾಧ್ಯವಾಗಲಿಲ್ಲ.

ಮುಂಬೈನ ಆರಂಭಿಕ ಜೋಡಿ ರೋಹಿತ್ ಶರ್ಮಾ (250 ರನ್) ಮತ್ತು ಕ್ವಿಂಟನ್ ಡಿಕಾಕ್ (155 ರನ್) ಉತ್ತಮ ಫಾರ್ಮ್‌ನಲ್ಲಿದ್ದು ಅವರಿಂದ ಅಮೋಘ ಜೊತೆಯಾಟಗಳು ಬರುತ್ತಿವೆ. ಸನ್‌ರೈಸರ್ಸ್ ವಿರುದ್ಧವೂ ಅವರು ಮಿಂಚುವ ನಿರೀಕ್ಷೆ ಇದೆ.

ಸ್ಫೋಟಕ ಬ್ಯಾಟ್ಸ್‌ಮನ್‌ಗಳನ್ನು ಒಳಗೊಂಡಿರುವ ಮಧ್ಯಮ ಕ್ರಮಾಂಕದ ಪರಾಕ್ರಮ ಹಿಂದಿನ ಎರಡು ಪಂದ್ಯಗಳಲ್ಲಿ ಕಂಡು ಬಂದಿದೆ. ಕೀರನ್ ಪೊಲಾರ್ಡ್ (168 ರನ್) ಚೆನ್ನೈ ಎದುರಿನ ಪಂದ್ಯದಲ್ಲಿ 34 ಎಸೆತಗಳಲ್ಲಿ 87 ರನ್ ಗಳಿಸಿದ್ದರು. ಸೂರ್ಯಕುಮಾರ್ ಯಾದವ್ (173) ಕೃಣಾಲ್ ಪಾಂಡ್ಯ (100 ರನ್) ಮತ್ತು ಹಾರ್ದಿಕ್ ಪಾಂಡ್ಯ (52 ರನ್) ಮೇಲೆಯೂ ತಂಡ ಭರವಸೆ ಇರಿಸಿಕೊಂಡಿದೆ.

ಚೆನ್ನೈ ಸೂಪರ್ ಕಿಂಗ್ಸ್ ಮುಂದೆ ದುಬಾರಿಯಾದ ಮುಂಬೈನ ಬೌಲರ್‌ಗಳು ಮರುಚಿಂತನೆ ನಡೆಸಬೇಕಾಗಿದೆ. ಹೀಗಾಗಿ ಜಸ್‌ಪ್ರೀತ್ ಬೂಮ್ರಾ, ಟ್ರೆಂಟ್ ಬೌಲ್ಟ್, ರಾಹುಲ್ ಚಾಹರ್ ಮುಂತಾದವರ ಜವಾಬ್ದಾರಿ ಹೆಚ್ಚಾಗಿದೆ.

ಸಮಸ್ಯೆಯ ಸುಳಿಯಲ್ಲಿ ವಿಲಿಯಮ್ಸನ್ ಪಡೆ: ಕೇನ್ ವಿಲಿಯಮ್ಸನ್ ಬಳಗದಲ್ಲಿ ಬಗೆಹರಿಯಬೇಕಾದ ಸಮಸ್ಯೆಗಳು ಅನೇಕ ಇವೆ. ಬ್ಯಾಟಿಂಗ್ ವಿಭಾಗವು ಸಂಪೂರ್ಣವಾಗಿ ಅಗ್ರ ಕ್ರಮಾಂಕದ ಮೇಲೆ ಅವಲಂಬಿತವಾಗಿದೆ. 248 ರನ್ ಕಲೆ ಹಾಕಿರುವ ಜಾನಿ ಬೆಸ್ಟೊ ಅವರನ್ನು ಹೊರತುಪಡಿಸಿದರೆ ಬೇರೆ ಯಾರಿಗೂ ನಿರೀಕ್ಷಿತ ಸಾಮರ್ಥ್ಯ ತೋರಲು ಆಗುತ್ತಿಲ್ಲ. ಮನೀಷ್ ಪಾಂಡೆ ಆಗೊಮ್ಮೆ ಈಗೊಮ್ಮೆ ರನ್ ಕಲೆ ಹಾಕುವಲ್ಲಿ ಯಶಸ್ವಿಯಾಗುತ್ತಿದ್ದಾರೆ. ಬೌಲಿಂಗ್ ವಿಭಾಗದಲ್ಲಿ ಲೆಗ್ ಸ್ಪಿನ್ನರ್ ರಶೀದ್ ಖಾನ್ ಅವರನ್ನು ಬಿಟ್ಟರೆ ಬೇರೆ ಯಾರಿಗೂ ಈ ವರೆಗೆ ಎದುರಾಳಿ ತಂಡಗಳ ಬ್ಯಾಟ್ಸ್‌ಮನ್‌ಗಳ ಮೇಲೆ ಒತ್ತಡ ಹೇರಲು ಸಾಧ್ಯವಾಗಲಿಲ್ಲ.

ಮುಖಾಮುಖಿ ಪಂದ್ಯಗಳು 17

ಮುಂಬೈ ಗೆಲುವು	9
ಹೈದರಾಬಾದ್ ಜಯ	8

ಮುಖಾಮುಖಿ	ಗರಿಷ್ಠ ಮೊತ್ತ	ಕನಿಷ್ಠ ಮೊತ್ತ
ಮುಂಬೈ	208	87
ಹೈದರಾಬಾದ್	178	96

ಪಂದ್ಯ ಆರಂಭ ರಾತ್ರಿ 7.30
ಸ್ಥಳ: ನವದೆಹಲಿ
ಲೈವ್ ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್



ಅಂತರರಾಷ್ಟ್ರೀಯ ವೇಟ್‌ಲಿಫ್ಟರ್ ಗುರುರಾಜ್ ಪೂಜಾರಿ ಅವರ ವಿವಾಹವು ಸೌಜನ್ಯ ಅವರೊಂದಿಗೆ ಕೋವಿಡ್ ನಿಯಮಾವಳಿ ಪ್ರಕಾರ ಭಾನುವಾರ ಕುಂದಾಪುರ ತಾಲ್ಲೂಕಿನ ಚಿತ್ತೂರು ಗ್ರಾಮದ ವಂಡ್ಸೆಯಲ್ಲಿ ನೆರವೇರಿತು.

ಸಂಕ್ಷಿಪ್ತ ಸುದ್ದಿ

ಭಾರತಕ್ಕೆ ಸಿಎ ನೆರವು

ಮೆಲ್ಬರ್ನ್: ಕೋವಿಡ್ ವಿರುದ್ಧದ ಹೋರಾಟದಲ್ಲಿ ಭಾರತದೊಂದಿಗೆ ಕೈಜೋಡಿಸಲು ಮುಂದಾಗಿರುವ ಕ್ರಿಕೆಟ್ ಆಸ್ಟ್ರೇಲಿಯಾ 50 ಸಾವಿರ ಆಸ್ಟ್ರೇಲಿಯನ್ ಡಾಲರ್ ನೆರವು ನೀಡಲಿದೆ. ಆಟಗಾರರ ಸಂಸ್ಥೆ ಮತ್ತು ಯುನಿಸೆಫ್ ಜೊತೆಗೂಡಿ ನಿಧಿ ಸಂಗ್ರಹ ಮಾಡುವುದಕ್ಕೂ ಮುಂದಾಗಿದೆ.

'ಆಸ್ಟ್ರೇಲಿಯಾವು ಹೆಚ್ಚು ಸ್ನೇಹ ಬೆಳೆಸಿಕೊಂಡಿರುವ ಭಾರತದಲ್ಲಿ ಕೋವಿಡ್ ಎರಡನೇ ಅಲೆ ಸೃಷ್ಟಿಸಿರುವ ಆತಂಕದ ಸ್ಥಿತಿ ಬೇಸರ ತಂದಿದೆ. ಈ ಮಹಾಮಾರಿಯ ನಿಯಂತ್ರಣಕ್ಕಾಗಿ ಕೈಗೊಳ್ಳುವ ಕಾರ್ಯದಲ್ಲಿ ಕೈಜೋಡಿಸಲು ಮುಂದಾಗಿದ್ದೇವೆ' ಎಂದು ಕ್ರಿಕೆಟ್ ಆಸ್ಟ್ರೇಲಿಯಾ ತಿಳಿಸಿದೆ.

ಈ ನಡುವೆ ಪಿಎಂ ಕೇರ್ಸ್ ನಿಧಿಗೆ ಹಣ ನೀಡಲು ನಿರ್ಧರಿಸಿದ್ದ ಕೋಲ್ಕತ್ತ ನೈಟ್ ರೈಡರ್ಸ್ ತಂಡದಲ್ಲಿ ಆಡುತ್ತಿರುವ ಆಸ್ಟ್ರೇಲಿಯಾದ ವೇಗದ ಬೌಲರ್ ಪ್ಯಾಟ್ ಕಮಿನ್ಸ್ ಈ ಮೊತ್ತವನ್ನು ಕ್ರಿಕೆಟ್ ಆಸ್ಟ್ರೇಲಿಯಾವು ಯುನಿಸೆಫ್ ಜೊತೆಗೂಡಿ ಸಂಗ್ರಹಿಸುವ ನಿಧಿಗೆ ನೀಡಲು ತೀರ್ಮಾನಿಸಿದ್ದಾರೆ.

ಅಂತರರಾಷ್ಟ್ರೀಯ ಕ್ರಿಕೆಟ್‌ಗೆ ತಿಸಾರ ವಿದಾಯ

ಕೊಲಂಬೊ (ಪಿಟಿಐ): ಶ್ರೀಲಂಕಾ ಕ್ರಿಕೆಟ್ ತಂಡದ ಆಲ್‌ರೌಂಡರ್ ತಿಸಾರ ಪೆರೇರ ಅವರು ಅಂತರರಾಷ್ಟ್ರೀಯ ಕ್ರಿಕೆಟ್‌ಗೆ ಸೋಮವಾರ ನಿವೃತ್ತಿ ಪ್ರಕಟಿಸಿದ್ದಾರೆ.

'ವಿದಾಯ ಹೇಳಲು ಇದು ಸಕಾಲ. ಯುವ ಆಟಗಾರರಿಗೆ ಅವಕಾಶ ಸಿಗಲಿ' ಎಂದು ಶ್ರೀಲಂಕಾ ಕ್ರಿಕೆಟ್‌ಗೆ (ಎಸ್‌ಎಲ್‌ಸಿ) ಬರೆದ ಪತ್ರದಲ್ಲಿ ಪೆರೇರ ಹೇಳಿದ್ದಾರೆ.


32 ವರ್ಷದ ಪೆರೇರ 166 ಏಕದಿನ, ಆರು ಟೆಸ್ಟ್ ಹಾಗೂ 84 ಟಿ20 ಪಂದ್ಯಗಳಲ್ಲಿ ಶ್ರೀಲಂಕಾ ತಂಡವನ್ನು ಪ್ರತಿನಿಧಿಸಿದ್ದಾರೆ. ತಂಡದ ನಾಯಕತ್ವವನ್ನೂ ವಹಿಸಿದ್ದರು. ಅವರು ಫ್ರಾಂಚೈಸ್ ಕ್ರಿಕೆಟ್‌ನಲ್ಲಿ ಮುಂದುವರಿಯುವ ಸಾಧ್ಯತೆಯಿದೆ.

ಕೊರೊನಾ ಸೋಂಕು: ಐಸಿಯುನಲ್ಲಿ ಜಯಂತ್

ಗುವಾಹಟಿ (ಪಿಟಿಐ): ಕೋವಿಡ್‌ನಿಂದ ಬಳಲುತ್ತಿರುವ ಭಾರತದ ಆರ್ಚರಿ ಪಟು ಜಯಂತ್ ತಾಲೂಕ್ದಾರ್ ತೀವ್ರ ನಿಗಾ ಘಟಕದಲ್ಲಿ (ಐಸಿಯು) ಚಿಕಿತ್ಸೆ ಪಡೆಯುತ್ತಿದ್ದಾರೆ.

'ಸೋಂಕು ತಗುಲಿದ ಒಂದು ವಾರದ ಬಳಿಕ ಅವರ ರಕ್ತದಲ್ಲಿ ಆಮ್ಲಜನಕ ಪ್ರಮಾಣ ಕುಸಿದ ಕಾರಣ ಐಸಿಯುನಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ' ಎಂದು ಜಯಂತ್ ಅವರ ತಂದೆ ರಂಜನ್ ತಿಳಿಸಿದ್ದಾರೆ.

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	14,631
ಇಂದಿನ ಅಂತ್ಯ	14,634
▲	3
ದಿನದ ಗರಿಷ್ಠ	16,673

ವಿನಿಮಯ ದರ

$ ಡಾಲರ್	73.95
£ ಪೌಂಡ್	102.42
€ ಯುರೊ	89.11
¥ ಯೆನ್ (100ಕ್ಕೆ)	68

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹425
12 ಮೊಟ್ಟೆಗೆ	₹58
ಮೈಸೂರು	
100 ಮೊಟ್ಟೆಗೆ	₹427

ಖಾದ್ಯ ತೈಲ ಮುಂಬೈ (10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1570 (1570)
ಸೋಯಾ (ರಿಫೈನ್ಡ್)	₹1400 (1410)
ಸೂರ್ಯಕಾಂತಿ (ರಿಫೈನ್ಡ್)	₹1730 (1720)
ಪಾಮೋಲಿನ್	₹1335 (1315)

ಐದು ವರ್ಷಗಳ ನಂತರ ಲಾಭ ಕಂಡ ಐಡಿಬಿಐ

ನವದೆಹಲಿ (ಪಿಟಿಐ): ಭಾರತೀಯ ಜೀವ ವಿಮಾ ನಿಗಮದ (ಎಲ್‌ಐಸಿ) ನಿಯಂತ್ರಣದಲ್ಲಿರುವ ಐಡಿಬಿಐ ಬ್ಯಾಂಕ್, ಐದು ವರ್ಷಗಳ ಬಳಿಕ ಲಾಭದತ್ತ ಮುಖ ಮಾಡಿದೆ. 2020–21ನೇ ಹಣಕಾಸು ವರ್ಷದಲ್ಲಿ ₹ 1,359 ಕೋಟಿ ನಿವ್ವಳ ಲಾಭ ಗಳಿಸಿದೆ.

2019–20ನೇ ಹಣಕಾಸು ವರ್ಷದಲ್ಲಿ ಬ್ಯಾಂಕ್ ₹ 12,887 ಕೋಟಿ ನಷ್ಟ ಅನುಭವಿಸಿತ್ತು. 2020–21ನೇ ಹಣಕಾಸು ವರ್ಷಕ್ಕೆ ಒಟ್ಟಾರೆ ವರಮಾನ ₹ 25,295 ಕೋಟಿಗಳಿಂದ ₹ 24,557 ಕೋಟಿಗೆ ಇಳಿಕೆ ಕಂಡಿದೆ. 2020–21ನೇ ಹಣಕಾಸು ವರ್ಷದ ನಾಲ್ಕನೇ ತ್ರೈಮಾಸಿಕದಲ್ಲಿ ₹ 512 ಕೋಟಿ ನಿವ್ವಳ ಲಾಭ ಗಳಿಸಿದೆ ಎಂದು ಪ್ರಕಟಣೆಯಲ್ಲಿ ತಿಳಿಸಿದೆ. ನಾಲ್ಕನೇ ತ್ರೈಮಾಸಿಕದಲ್ಲಿ ವರಮಾನವು ₹ 6,924.94 ಕೋಟಿಯಿಂದ ₹ 6,969.59 ಕೋಟಿಗೆ ಏರಿಕೆಯಾಗಿದೆ.

ಮಾರ್ಚ್‌ನಲ್ಲಿ ಆರ್‌ಬಿಐನ ಕಠಿಣ ಸ್ವರೂಪದ ನಿರ್ಬಂಧಗಳಿಂದ ಬ್ಯಾಂಕ್ ಹೊರಬಂದಿತ್ತು.

ಮುಂಬೈ ಧಾರಣೆ

ಶೇಂಗಾ

3-5-2021

ಜಾವಾ 70/80(ಹೊಸ)	10050-10100
ಜಾವಾ 80/90(ಹೊಸ)	9350-9400
ದಪ್ಪ ಮಧ್ಯಪ್ರದೇಶ(ಹೊಸ)	10100-10200
ದಪ್ಪ ಗುಜರಾತ್(ಹೊಸ)	9400-9500

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1580 (1580)
ಒಂದು ವಾರದ ಡೆಲಿವರಿ	1575 (1575)
ಸೋಯಾ ಕಚ್ಚಾ	1400 (1410)
ಪಾಮ್ ವಾರದ ಡೆಲಿವರಿ	1333 (1313)
ಸೂರ್ಯಕಾಂತಿ ಎಣ್ಣೆ ಕಚ್ಚಾ	1670 (1670)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10 ಗ್ರಾಂ
46,850 (46,800)
ಬೆಳ್ಳಿ ಕೆ.ಜಿ 68,600 (68,150)

ಆವರಣದಲ್ಲಿ ಶನಿವಾರದ ಧಾರಣೆ

ಚಿನ್ನದ ದರ ₹ 310, ಬೆಳ್ಳಿ ₹ 580 ಹೆಚ್ಚಳ

ನವದೆಹಲಿ (ಪಿಟಿಐ): ಇಲ್ಲಿನ ಚಿನಿವಾರ ಪೇಟೆಯಲ್ಲಿ ಸೋಮವಾರ ಚಿನ್ನ, ಬೆಳ್ಳಿ ದರ ಏರಿಕೆ ಆಗಿದೆ.

10 ಗ್ರಾಂ ಚಿನ್ನದ ದರ ₹ 310ರಷ್ಟು ಏರಿಕೆ ಆಗಿದ್ದು ₹ 46,580ರಂತೆ ಮಾರಾಟವಾಗಿದೆ. ಬೆಳ್ಳಿ ಧಾರಣೆ ಕೆ.ಜಿ.ಗೆ ₹ 580ರಷ್ಟು ಹೆಚ್ಚಾಗಿ ₹ 67,429ಕ್ಕೆ ತಲುಪಿದೆ.

ಜಾಗತಿಕ ಮಾರುಕಟ್ಟೆಯಲ್ಲಿ ಚಿನ್ನದ ದರ ಏರಿಕೆ ಆಗಿದ್ದರಿಂದ ದೇಶಿ ಮಾರುಕಟ್ಟೆಯಲ್ಲಿಯೂ ಚಿನ್ನದ ದರ ಏರಿಕೆ ಕಂಡಿದೆ ಎಂದು ಎಚ್‌ಡಿಎಫ್‌ಸಿ ಸೆಕ್ಯುರಿಟೀಸ್ ತಿಳಿಸಿದೆ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ	
ಸಕಲೇಶಪುರ	
ಕೂಳೆ	900-9050
ನಡುಗೋಲು	1000-1050
ರಾಶಿ	1200-1300
ರಾಶಿ ಉತ್ತಮ	1300-1400
ಜರಡಿ	1500-1550
ಹೆರಕಿದ್ದು	1900-2000
ಹಸಿರು ಸಾಧಾರಣ	1300-1400
ಹಸಿರು ಉತ್ತಮ	1700-1750
ಹಸಿರು ಅತಿ ಉತ್ತಮ	1900-2000
ಕಾಳು ಮೆಣಸು	350
ಅಡಿಕೆ	
ಬಂಟ್ವಾಳ	
ಕೋಕ	10000-22500
ಹೊಸತು	22500-40000
ಹಳತು	42500-50000
ಪುತ್ತೂರು	
ಕೋಕ	9500-24000
ಹೊಸತು	28000-39500
ಹಳತು	39500-49500
ಸಿದ್ದಾಪುರ	
ಬಿಳಿಗೋಟು	25699-30599
ಕೋಕ	12699-29119
ಚಾಲಿ	32189-35409
ಕೆಂಪುಗೋಟು	26699-28199
ರಾಶಿ	36499-40899
ತಟ್ಟಿಬೆಟ್ಟೆ	30399-30399
ಶಿರಸಿ	
ಬೆಟ್ಟೆ	30923-37018
ಬಿಳಿಗೋಟು	26009-30600
ಚಾಲಿ	34218-36099
ಶಿವಮೊಗ್ಗ ಎಪಿಎಂಸಿ	
ಬೆಟ್ಟೆ	38509-43000
ರಾಶಿ	36509-41039
ಗೊರಬಲು	17000-30659
ರಾಮನಗರ ರೇಷ್ಮೆ ಧಾರಣೆ	
ಮಿಶ್ರತಳಿ (ಸಿ.ಬಿ)	231-345
ದ್ವಿತಳಿ (ಬಿ.ವಿ)	255-360

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

ಮೂಡಿಗೆರೆ		ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	10325	---	10200	ಸೆಂಟ್ಸ್
ಎಸಿ	4090	---	3975	
ಆರ್‌ಪಿ	5100	---	5150	ಲಂಡನ್
ಆರ್‌ಸಿ	3000	---	2950	---ಡಾಲರ್ಸ್

ಷೇರುಪೇಟೆಯ ಚೌಕೀದಾರ ಯಾರು?

ಷೇರು ಮಾತು
ಶರತ್ ಎಂ.ಎಸ್.



ಷೇರು ಮಾರುಕಟ್ಟೆಗೆ ಎಲ್ಲರೂ ಲಾಭಗಳಿಸುವ ಉದ್ದೇಶದಿಂದಲೇ ಬರುತ್ತಾರೆ ಎಂದಮೇಲೆ ಆ ಮಾರುಕಟ್ಟೆಗೆ ಒಬ್ಬ ಚೌಕೀದಾರ ಬೇಕೇಬೇಕು. ಭಾರತೀಯ ಷೇರುಪೇಟೆ ನಿಯಂತ್ರಣ ಮಂಡಳಿ (ಸೆಬಿ) ಆ ಚೌಕೀದಾರನ ಕೆಲಸವನ್ನು ನಿರ್ವಹಿಸುತ್ತದೆ. ಷೇರುಪೇಟೆಯ ಭಾಗೀದಾರರನ್ನು ನಿಯಂತ್ರಿಸುವ ಜತೆಗೆ ಹೂಡಿಕೆದಾರರ ಹಿತ ಕಾಯುವ ಹೊಣೆಗಾರಿಕೆ 'ಸೆಬಿ'ಯ ಮೇಲಿದೆ.

ಹೂಡಿಕೆದಾರರನ್ನು ರಕ್ಷಿಸಿದ 'ಸೆಬಿ': 'ಸೆಬಿ' ಹೇಗೆ ಚೌಕೀದಾರನ ಕೆಲಸ ಮಾಡಿ ಹೂಡಿಕೆದಾರರ ಹಿತ ಕಾಯುತ್ತದೆ ಎಂಬುದಕ್ಕೆ ಇತ್ತೀಚಿನ ಒಂದು ಪ್ರಕರಣವೇ ಸಾಕ್ಷಿ. ಷೇರು ದಲ್ಲಾಳಿ ಸಂಸ್ಥೆಯೊಂದು ಪವರ್ ಆಫ್ ಅಟಾರ್ನಿಯನ್ನು ದುರ್ಬಳಕೆ ಮಾಡಿಕೊಂಡು ಗ್ರಾಹಕರ ಷೇರುಗಳನ್ನು ತನ್ನ ಖಾತೆಗೆ ವರ್ಗಾಯಿಸಿಕೊಂಡು, ಆ ಷೇರುಗಳನ್ನು ಬ್ಯಾಂಕ್‌ನಲ್ಲಿ ಅಡವಾಗಿ ಇರಿಸಿ ಸಾಲ ಪಡೆದಿತ್ತು. ನಂತರದಲ್ಲಿ ಗ್ರಾಹಕರಿಗೆ ಷೇರುಗಳನ್ನು ಹಿಂದಿರುಗಿಸದೆ ವಂಚಿಸಿತ್ತು.

ಇದು ತಿಳಿಯುತ್ತಿದ್ದಂತೆ, ಷೇರು ದಲ್ಲಾಳಿ ವಹಿವಾಟಿಗೆ ಹೊಸ ಗ್ರಾಹಕರನ್ನು ಸೇರಿಸಿಕೊಳ್ಳಬಾರದು ಎಂದು 'ಸೆಬಿ' ಆ ಸಂಸ್ಥೆಯ ಮೇಲೆ ನಿಷೇಧ ವಿಧಿಸಿತ್ತು, 'ಸೆಬಿ' ಸಕಾಲದಲ್ಲಿ ಕೈಗೊಂಡ ಕ್ರಮದಿಂದಾಗಿ, ಕಾನೂನು ಮೀರಿ ಅಡಮಾನ ಇರಿಸಿದ್ದ ಷೇರುಗಳನ್ನು ಹೂಡಿಕೆದಾರರಿಗೆ ಹಿಂದಿರುಗಿಸಲು ಸಾಧ್ಯವಾಯಿತು.

'ಸೆಬಿ' ಹೊಣೆಗಾರಿಕೆ:

- ಷೇರುಪೇಟೆಯಲ್ಲಿ (ಬಿಎಸ್‌ಇ - ಎನ್‌ಎಸ್‌ಇ) ನ್ಯಾಯಯುತ ವಹಿವಾಟು ನಡೆಯುವಂತೆ ನೋಡಿಕೊಳ್ಳುವುದು.
- ಷೇರು ದಲ್ಲಾಳಿಗಳು (stock brokers) ಕಾನೂನು ಬಾಹಿರ ವಹಿವಾಟಿನಲ್ಲಿ ತೊಡಗದಂತೆ ಎಚ್ಚರಿಕೆ ವಹಿಸುವುದು.
- ಷೇರುಪೇಟೆ ಭಾಗೀದಾರರಾದ ದೇಶಿ ರಿಟೇಲ್ ಹೂಡಿಕೆದಾರರು, ವಿದೇಶಿ ಸಾಂಸ್ಥಿಕ ಹೂಡಿಕೆದಾರರು, ಅನಿವಾಸಿ ಭಾರತೀಯ ಹೂಡಿಕೆದಾರರು, ದೇಶಿ ಸಾಂಸ್ಥಿಕ ಹೂಡಿಕೆದಾರರು ಮತ್ತು ದೇಶಿ ಹಣಕಾಸು ನಿರ್ವಹಣಾ ಸಂಸ್ಥೆಗಳು ಸರಿಯಾದ ರೀತಿಯಲ್ಲಿ ವಹಿವಾಟು ನಡೆಸುವಂತೆ ನೋಡಿಕೊಳ್ಳುವುದು.
- ಕಾರ್ಪೊರೇಟ್ ಸಂಸ್ಥೆಗಳು ಸ್ವಹಿತಾಸಕ್ತಿಗಾಗಿ ಮಾರುಕಟ್ಟೆ ಸ್ಥಿತಿಗತಿಗಳನ್ನು ಬಳಸಿಕೊಳ್ಳದಂತೆ ನಿಯಂತ್ರಿಸುವುದು.
- ಸಣ್ಣ ಹೂಡಿಕೆದಾರರ ಹಿತ ಕಾಯುವುದು.
- ಭಾರೀ ಮೊತ್ತದ ಹಣ ಹೊಂದಿರುವ ಹೂಡೆಕೆದಾರರು ಷೇರುಪೇಟೆಯನ್ನು ತಮ್ಮ ಕೈವಶ ಮಾಡಿಕೊಳ್ಳದಂತೆ ತಡೆಯುವುದು.
- ಷೇರು ಮಾರುಕಟ್ಟೆಯ ಸರ್ವತೋಮುಖ ಬೆಳವಣಿಗೆಯ ಜವಾಬ್ದಾರಿ ಹೊತ್ತುಕೊಳ್ಳುವುದು.

ಎಲ್ಲಾ ಸಂಸ್ಥೆಗಳೂ ನೀತಿ ನಿಯಮಗಳಿಗೆ ಬದ್ಧವಾಗಿರಬೇಕು: ಷೇರು ಮಾರುಕಟ್ಟೆ ವ್ಯವಸ್ಥೆಯಲ್ಲಿ ಒಳಗೊಳ್ಳುವ ಷೇರು ದಲ್ಲಾಳಿಗಳು, ಕ್ರೆಡಿಟ್ ರೇಟಿಂಗ್ ಏಜೆನ್ಸಿಗಳು, ವಿದೇಶಿ ಸಾಂಸ್ಥಿಕ ಹೂಡಿಕೆದಾರರು, ಡೆಪಾಸಿಟರಿಗಳು, ಡಿಬೆಂಚರ್ ಟ್ರಸ್ಟಿಗಳು, ಮರ್ಚೆಂಟ್ ಬ್ಯಾಂಕರ್‌ಗಳು, ಡೆಪಾಸಿಟರಿ ಪಾರ್ಟಿಸಿಪೆಂಟ್‌ಗಳು, ಆಸ್ತಿ ನಿರ್ವಹಣಾ ಕಂಪನಿಗಳು... ಹೀಗೆ ಎಲ್ಲ ಸಂಸ್ಥೆಗಳಿಗೂ, ಭಾಗೀದಾರರಿಗೂ ಪ್ರತ್ಯೇಕ ನೀತಿ ನಿಬಂಧನೆಗಳಿವೆ. ಅವುಗಳಿಗೆ ಪ್ರತಿಯೊಬ್ಬರೂ ಬದ್ಧವಾಗಿ ನಡೆದುಕೊಳ್ಳುವಂತೆ 'ಸೆಬಿ' ನೋಡಿಕೊಳ್ಳುತ್ತದೆ.


ನಿಮಗೆ ಇದು ತಿಳಿದಿರಲಿ

- ಷೇರುಪೇಟೆಯಲ್ಲಿ ನೀವು ಅಡ್ಡದಾರಿ ಹಿಡಿದರೆ ಅದು 'ಸೆಬಿ'ಗೆ ತಿಳಿಯುತ್ತದೆ. ಅದು ನಿಮ್ಮನ್ನು ಕಟ್ಟಿಹಾಕುತ್ತದೆ ಎನ್ನುವುದು ಗೊತ್ತಿರಲಿ.
- ಷೇರು ಮಾರುಕಟ್ಟೆಯ ಎಲ್ಲ ಭಾಗೀದಾರರೂ 'ಸೆಬಿ' ನಿಯಮಾವಳಿಗೆ ಬದ್ಧವಾಗಿ ನಡೆದುಕೊಳ್ಳಬೇಕು.

'ಮುಚ್ಚುವ ಭೀತಿಯಲ್ಲಿ ಸಣ್ಣ ಕೈಗಾರಿಕೆಗಳು'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕೋವಿಡ್ ಎರಡನೆಯ ಅಲೆ ನಿಯಂತ್ರಿಸಲು ರಾಜ್ಯದಲ್ಲಿ ಜಾರಿಗೊಳಿಸಿರುವ ಲಾಕ್‌ಡೌನ್‌ನ ದುಷ್ಪರಿಣಾಮವು ಸಣ್ಣ ಮತ್ತು ಅತಿಸಣ್ಣ ಕೈಗಾರಿಕೆಗಳ (ಎಸ್‌ಎಂಇ) ಮೇಲೆ ಆಗದಂತೆ ನೋಡಿಕೊಳ್ಳಲು ರಾಜ್ಯ ಸರ್ಕಾರ ಪರಿಹಾರವನ್ನು ಘೋಷಿಸಬೇಕು' ಎಂದು ಕರ್ನಾಟಕ ಸಣ್ಣ ಕೈಗಾರಿಕೆಗಳ ಸಂಘದ (ಕಾಸಿಯಾ) ಅಧ್ಯಕ್ಷ ಕೆ.ಬಿ. ಅರಸಪ್ಪ ಆಗ್ರಹಿಸಿದ್ದಾರೆ.



ಕೆ.ಬಿ. ಅರಸಪ್ಪ

'ಪರಿಹಾರ ಘೋಷಿಸದಿದ್ದರೆ, ಈ ವಲಯದ ಶೇಕಡ 25ರಿಂದ ಶೇ 30ರಷ್ಟು ಕೈಗಾರಿಕೆಗಳು ಸಂಪೂರ್ಣವಾಗಿ ಸ್ಥಗಿತವಾಗುವ ಸಾಧ್ಯತೆ ಇದೆ' ಎಂದು ಆತಂಕ ವ್ಯಕ್ತಪಡಿಸಿದ್ದಾರೆ. ಕಳೆದ ವರ್ಷ ಹೇರಿದ್ದ ಲಾಕ್‌ಡೌನ್‌ನಿಂದಾಗಿ ಶೇ 20ರಷ್ಟು ಎಸ್‌ಎಂಇಗಳು ಮುಚ್ಚಿವೆ. ಇದೀಗ ಮತ್ತೆ ಲಾಕ್‌ಡೌನ್ ಜಾರಿಗೊಳಿಸಲಾಗಿದೆ. ಇದರಿಂದ ಆಗಲಿರುವ ನಷ್ಟ ತಡೆದುಕೊಳ್ಳುವ ಸ್ಥಿತಿಯಲ್ಲಿ ಈ ಕೈಗಾರಿಕೆಗಳು ಇಲ್ಲ. ಸಾಂಕ್ರಾಮಿಕವು ಮಾರುಕಟ್ಟೆ ಮತ್ತು ಪೂರೈಕೆ ವ್ಯವಸ್ಥೆ ಮೇಲೆ ಕೆಟ್ಟ ಪರಿಣಾಮ ಉಂಟುಮಾಡುತ್ತಿದೆ ಎಂದು ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರಿಗೆ ಬರೆದಿರುವ ಪತ್ರದಲ್ಲಿ ಹೇಳಿದ್ದಾರೆ.